
ಕೊರಳೆತ್ತಿದ ಧ್ವನಿ



...ಮತ
...ಪಾಲಕರು ಎನ್. ಎಂ. ಕೊಟ್ರೇಶ
...

S. S. ಹಿರೇಮಠ M.A. ಇವರಿಗೆ

ವಿಶ್ವಾಸದಿಂದ

ಎಸ್. ಎಂ. ಹುಂಡೇಕರ.

ಕೊರಳೆತ್ತಿದ ಧ್ವನಿ

[ಕಥಾ ಸಂಕಲನ]

ಎನ್. ಎಂ. ಕೊಟ್ರೇಶ್,
ಬಿ. ಎ.

ಶ್ರೀ ಹರ್ಷ ಪ್ರಕಾಶನ,
ಹಡಗಲಿ.

KORALETTIDA DHWANI:

Collection of Short Stories
by N. M. Kotresh.
Published by:
Sri Harsha Prakashana,
Sathyanarayan Setty Compound,
Near I. B.
HADAGALLI. (Bellary Dist.)

Pages: 66 + 6

Price: 8 — 00

ಬೆಲೆ: ಎಂಟು ರೂಪಾಯಿ.

ಮುಖಪುಟ ವಿನ್ಯಾಸ: ಎನ್. ಎಂ. ಕೊಟ್ರೇಶ್.

ಅಲ್ಲಮ ಮುದ್ರಣಾಲಯ,
ಶಹಪೂರಪೇಟ, ಗದಗ.

ನನ್ನ ಮಾತು

ನೆಲದ ದಟ್ಟ ವಾಸನೆಯಿಂದ ಮೊಳಕೆ ಹೊಡೆದ ಈ ಕೃತಿ ಒದುಗರನ್ನು ತುಸು ಯೋಚಿಸುವಂತೆ ಮಾಡಬಹುದೆಂದಿದ್ದೇನೆ

ಕಿತ್ತು ತಿನ್ನುವ ಹಸಿವು, ಬಡತನ ಸಮಾಜದಲ್ಲಿ ಬೇರೂರಿದ ಕ್ರೂರ ಸಂಪ್ರದಾಯಗಳು ಹಿಂದುಳಿದ ಜನರನ್ನ ತುಳಿಯುವ ಮನೋಭಾವ............ಮುಂತಾದವುಗಳ ವಿರುದ್ಧ ಈ ಲೇಖನಿ ಇಲ್ಲಿ ಕೊರಳೆತ್ತಿದೆ.

ನಿಮ್ಮೆಲ್ಲರ ಅನಿಸಿಕೆಗಳನ್ನ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

ನನ್ನನ್ನು ಬೆಳಕಿಗೆ ತರಲು ಪ್ರಯತ್ನಿಸುತ್ತಿರುವ ಬಾಚಿ ಗೊಂಡನಹಳ್ಳಿ ವಿರೂಪಾಕ್ಷಗೌಡರನ್ನ ನಾನು ಮರೆಯಲಾರೆ. ಇನ್ನೂ ಅರಳದ ಅವಸ್ಥೆಯಲ್ಲಿರುವ ನನಗೆ ಪ್ರೀತಿ-ಪ್ರೋತ್ಸಾಹಗಳ ನೀರೆರೆದು ಬೆಳೆಸಬೇಕೆಂಬ ಇವರ ತುಂಬು ಹೃದಯದ ಅಭಿ ಮಾನಕ್ಕೆ ಕೃತಜ್ಞತೆಗಳು. ಇದು ಮುಖಸ್ತುತಿಯ ಮಾತಲ್ಲ ವೆಂಬುದಕ್ಕೆ ಈ ಹಿಂದೆ ಇವರು ಅನೇಕ ಉದಯೋನ್ಮುಖರನ್ನ ಬೆಳಕಿಗೆ ತಂದಿರುವುದೇ ಸಾಕ್ಷಿ. ಇವರೊಂದು ಬಳ್ಳಾರಿ ಜಿಲ್ಲೆಯ ಚೇತೋಹಾರಿ ಪ್ರೇರಕ ಶಕ್ತಿಯೆಂದರೆ ಅತಿಶಯೋಕ್ತಿಯಾಗ ಲಾರದು.

ಅಂದವಾಗಿ ಮುದ್ರಿಸಿಕೊಟ್ಟ ಅಲ್ಲಮ ಮುದ್ರಣಾಲಯ, ಗದಗ ಅವರಿಗೂ ನನ್ನ ಕೃತಜ್ಞತೆಗಳು.

ಎನ್. ಎಂ. ಕೊಟ್ರೇಶ್.

ಸತ್ಯನಾರಾಯಣಶೆಟ್ಟಿ ಕಂಪೌಂಡ,
ಪ್ರವಾಸಿ ಮಂದಿರದ ಎದುರುಗಡೆ,
ಹಡಗಲಿ ಅಂಚೆ. ಬಳ್ಳಾರಿ ಜಿಲ್ಲೆ.

ಎನ್. ಎಂ. ಕೊಟ್ರೇಶ್ ಇವರ ಕೃತಿಗಳು

ಈ ಕಾವ್ಯಗಳು (ಕವನ ಸಂಕಲನ)

ಕೊರಳೆತ್ತಿದ ಧ್ವನಿ (ಕಥಾ ಸಂಕಲನ)

ಬರಲಿರುವ ಕೃತಿಗಳು :

ಎದ್ದು ಬಂದವರು (ಕಾದಂಬರಿ)

ಸಾಯದೇ ಸತ್ತವರು (ಕವನ ಸಂಕಲನ)

ಅರ್ಪಣೆ

ಶೋಷಣೆ,

ದಬ್ಬಾಳಿಕೆ,

ಅನ್ಯಾಯಗಳ ....

ವಿರುದ್ಧ

ಕೊರಳೆತ್ತುವ ಧ್ವನಿಗಳಿಗೆ ....

ಪರಿವಿಡಿ

ಕತ್ತಲು ದಾರಿಯಲ್ಲಿ

"ಹುಲಿಗೆವ್ವಾ.... ಹುಲಿಗೆವ್ವಾ.... ಬೇ ಹುಲಿಗೆವ್ವಾ ಏನ್ಮಾಡಕತ್ತಿ?"

" ಓ ಗೌಡರ ಆಳುಮಗ ಶಿವನಂಜನಾ, ಏನ್ ಶಿವನಂಜಣ್ಣ ಬಂದಿ?" ಹೊರಗಡೆ ಬಂದು ವಿಚಾರಿಸಿದಳು.

"ಏನೂ ಇಲ್ಲ, ಗೌಡ್ರು ನಿನ್ನ ಬಾ ಅಂತ ಹೇಳ್ಯಾರೆ, ತೋಟದಾಗ ಇರ್ತಾರಂತೆ, ಕಾಣ್ಬೇಕಂತೆ"

"ಹೌದಾ! ಇನ್ನೊಂದು ಚಾವತ್ತು ಬಿಟ್ಟು ಬರ್ತಿನಂತ ಹೇಳು. ನಾ ಬರಾವರಿಗೂ ಗೌಡ್ರಿಗೆ ತ್ವಾಟದಾಗ ಇರಕೇ ಹೇಳು. ನಮ್ಮಗಳು ಸಾಲಿಯಿಂದ ಬಂದುಕೂಡ್ಲೇ ಬರ್ತೀನಿ"

"ಅಂಗೆ ಆಗ್ಲಿ ಹೇಳ್ತೀನಿ ಬೇಗ ಬಂದುಬಿಡು ಮತ್ತೆ" ಎಂದು ಇನ್ನೊಮ್ಮೆ ಹೇಳಿ ಶಿವನಂಜ ಹೊರಟ.

ಜೋಗತಿ ಹುಲಿಗೆವ್ವನಿಗೆ ಇರುವವಳು ಒಬ್ಬಳೇ ಮಗಳು. ಹೆಸರು ಪದ್ಮಾವತಿ, ಈಗ ಎಸ್ಸೆಸ್ಸೆಲ್ಸಿ ಕಲಿಲಿಕ್ಕ ಹತ್ಯಾಳೆ "ತೆಳ್ಳಗೆಬೆಳ್ಳಗೆ ಒಳ್ಳೆ ಸೂರ್ಯಕಾಂತಿ ಹೂ ಇದ್ದಂಗ ಇದಾಳೆ" ಅಂತ ಅವಳ್ನ ಓಣಿಜನ ಅನ್ನುತ್ತಾರೆ. ಕ್ಲಾಸಿನಲ್ಲೂ ಅಷ್ಟೇ ತುಂಬಾ ಚೂಟಿ. ಹೆಣ್ಣುಡುಗರಪೈಕಿ ಇವಳೇ ಜಾಣೆ. "ನಾನು ಓದಿ ಎಲ್ಲರಂತೆ ನೌಕರಿ ಮಾಡಿಕೊಂಡು ಜೀವನಾ ಮಾಡ್ಬೇಕು ನಮ್ಮವ್ವನ್ನಂಗ ಜೋಗತಿ ಆಗಕಿಲ್ಲಾ" ಅನ್ನುವ ಛಲ ಅವಳಲ್ಲಿ ಬೇರೂರಿತ್ತು. ಆದ್ರೆ ಅವಳ ತಾಯಿ "ನನ್ನ ಮಗಳು ಪದ್ಮಾನಾ ದೇವಿಗೆ ಬಿಡ್ತೀನಿ" ಎಂದು ಅವರಿವರ ಮುಂದೆ ಹೇಳ್ತಿದ್ಲು. ಆದ್ರೆ ಪದ್ದು ಅವರವ್ವನಿಗೆ "ನಾನು ಮಾತ್ರ ಜೋಗತಿ ಆಗಲ್ಲ. ಎಸ್ಸೆಲ್ಸಿ ಪಾಸಾಗಿ ಮಾಸ್ತರಿಕಿ ಕಲ್ತು ಮಾಸ್ತರ ಆಗ್ತೀನಿ, ಎಲ್ಲರಂತೆ ನಾನೂ ಚಂದಾಗಿ ಬದುಕ್ತೀನಿ. ನಿನ್ನೂ ಕೂಡಾ ಸುಖದಾಗ ಜ್ವಾಪಾನ ಮಾಡ್ತೀನಿ" ಎಂದು ಖಂಡಿತವಾಗಿ ಹೇಳಿದ್ರೆ "ಅಂಗಲ್ಲಾ ಅನ್ಬಾರ್ದು ಪದ್ದೀ, ನಾವು ಮಾತಂಗಿ ವಂಶದವ್ರು" ದೇವದಾಸಿ ನಮ್ಮ ಹಿರಿಯರಿಂದಲೇ ಬಂದಿದೆ. ಹಳೇ ನಡತಿ ತಪ್ಪಿಸಬಾರ್ದು. ಎಲ್ಲಕೋಳದೆಲ್ಲವ್ವನಿಗೆ ನನ್ನ ಮಗಳನ್ನ ಬಿಡ್ತೀನಂತ

ಹರಿಕಿ ಹೊತ್ತಿನ್ನಿ; ಇಲ್ಲುದ್ರೆ ಆ ತಾಯಿ ಕೋಪಿಸ್ಗೊಂಡು ಶಾಪ ಕೊಟ್ಟು ಬಿಡ್ತಾಳೆ. ಹದಿನೈದು ವರ್ಷಾ ತುಂಬವ್ರದರೊಳಗೆ ಗುಡ್ಡಕ್ಕೆ ಬಂದು ಹರಿಕಿ ತೀರುಸ್ತೀನಂತ ಹೇಳ್ಕ್ಯಂಡು ಬಂದೀನಿ, ರೇಣುಕೆಲ್ಲಮ್ಮ ಬಹಳಾ ಅಸ್ವಾಲ್ದಿ: ತಪ್ಪಿದ್ರೆ ನಮ್ಮ ವಂಶನೇ ನಿರ್ವಂಶ ಮಾಡಿಬಿಡ್ತಾಳೆ. ಅಂಗಲ್ಲಾ ಅನ್ನಬಾರ್ದು ತಪ್ಪಾತು ಅನ್ನು" ಎಂದು ಮಗಳಿಗೆ ತಿಳಿಹೇಳಿದಾಗ ಪದ್ದಿ ಸಿಡಿಮುಡಿಗೊಂಡು "ನಾ ಸವದತ್ತಿಗೆ ಬರಲ್ಲಾ ಅಂದ್ರೆ ಬರಲ್ಲಾ ನೀನೇ ಬೇಕಾದ್ರೆ ಹೋಗು. ನನಿಗೂ ಬದುಕ ಆಸಿ ಐತಿ, ಆದರೆ ಸತ್ತು ಬದುಕ ಆಸಿ ಇಲ್ಲ" ಪದ್ದಿ ಮುಖ ಗಂಟು ಮಾಡಿಕೊಂಡಾಗ ಸ್ವಲ್ಪ ಹೊತ್ತು ಸುಮ್ನಾಗಿ ಬಹಳ ಸೌಮ್ಯದಿಂದ ಉಬ್ಬಿಸಿ ಮಗಳಿಗೆ ತಿಳಿಹೇಳಿದಳು. ಆದರೂ ಪದ್ದಿ ಕೇಳುವ ಸ್ಥಿತಿಯಲ್ಲಿರಲಿಲ್ಲ.

"ಬಾ ಹುಲಿಗೆವ್ವಾ ಬಾ !.... ಮಗಳು ಸಾಲಿಯಿಂದ ಬಂದ್ಲಾ" ಬಮ್ಮನ ಗೌಡ ಕೇಳಿದ್ದಕ್ಕೆ, "ಈಗಿನಾ ಸಾಲಿಯಿಂದ ಬಂದ್ಲು, ಅಂಗ ಬಂದೆ ನೋಡು" ಗೌಡನ ಮುಖ ನೋಡಿ ಕೊಳಕು ಹಲ್ಲುಗಳನ್ನು ತೆಗೆದು ನಕ್ಕು ಚಾಪೆ ಮೇಲೆ ಕುಳಿತುಕೊಂಡು ಎಲಿ ಅಡಕಿ ಚೀಲ್ದಾಗ್ಲಿಂದ ನೆಸಪುಡಿ ಡಬ್ಬಿ ತಗ್ದು ಅಂಗೈಗ ಹಾಕ್ಯಂಡು ಗಸಗಸ ಹಲ್ಲು ತಿಕ್ಯಂಡು ಎದ್ದೋಗಿ ಉಗುಳಿ ಮತ್ತೆ ಬಂದು ಕುತ್ಗಂಡು

"ಅಲ್ಲಾ ಹುಲಿಗೆವ್ವಾ ನಿಮ್ಮಗಳ್ನ ಬರಾ ಭಾರತ ಹುಣಿವಿಗೆ ದೇವ್ರಿಗೆ ಬಿಡ್ತಿಯಂತೆ" ಗೌಡ ಮುಸಿ ಮುಸಿ ಹಲ್ಲು ಕಿಸ್ದು ವಯ್ಯಾರದಿಂದ ಕೇಳದ.

ಹೌದ್ರಿ ದನೇರಾ ನಾಳೆ ಭಾರತ ಹುಣಿವಿಗೆ ಸವದತ್ತಿಗೆ ಕರ್ಕಂಡೋಗಿ ರೇಣುಕೆಲ್ಲಮ್ಮನ ಹರಿಕಿ ತೀರಿಸಿ ಬರಕಂತಾ ಮಾಡಿನಿ.

"ಹೌದೇನಂಗಾರ ! ಬಾಳಾ ಚಲೋ ಕೆಲ್ಸ. ಹರಿಕೆ ಗಿಕ್ಕಿ ಹೊತ್ತಿದ್ರೆ ದಿವ್ನ ಮುಗಿಯೊದ್ರೊಳೊಗೆ ಸಿಡಿಕಿನ ಆ ನಮ್ಮವ್ವ ನನ್ನ ತಾಯಿಗೆ ಅರ್ಪಿಸ ಬೇಕು. ಇಲ್ಲದ್ರೆ ಮನೇಗಿರೋರಿಗಷ್ಟೇ ಅಲ್ಲ ಇಡೀ ಊರ್ಗೇ ಶಾಪ ಹಾಕಿ ಬಿಡ್ತಾಳೆ, ಮಳೆ ಬೆಳೆ ಇಲ್ದಂಗಾಗಿ ಬರಗಾಲ ಬೀಳ್ತತಿ" ಎಂದು ತನ್ನ ಎರಡೂ ಕೈಗಳಿಂದ ಕೆನ್ನೆಗಳನ್ನ ಭಕ್ತಿಯಿಂದ ಬಡಿದುಕೊಂಡ.

"ಅಲ್ಲೇನ್ರಿ ಗೌಡ್ರೇ ಆ ತಾಯಿ ಸಿಟ್ಟ್ಯಾದ್ರೆ ಊರು ದೇಶ ಯಾದುಳಿತಾತ್ರಿ"

"ಲೇ ಶಿವನಂಜ ಬಾರ್ಲೇ ನಿರಾಸದು ನಿಲ್ಸಿ, ಹುಲಿಗೆವ್ವ ಬಿಸಾ ದಣಿದು ಬಂದಾಳೆ ಎಳಿಗಾಯಿ ಕೆತ್ತಿಕೊಡು" ಗೌಡ ಆಳುಮಗನನ್ನ ಕೂಗಿದ. ಎಳಿನೀರನ್ನು ಎತ್ತಿ ಗಟಗಟ ಕುಡ್ದು "ನನ್ನೊಟ್ಟೆ ತಣ್ಣಗಾತು ಸಾವ್ರಕಾರ್ರೇ"

"ಇನ್ನೊಂದು ಕುಡಿ, ಇನ್ನೊಂದು ಕುಡಿ ಹುಲಿಗೆವ್ವಾ, ಇನ್ನೊಂದು ಕೆತ್ತಲೇ ನಂಜಾ"

"ಅಂಗಂದ್ರೆ ಸೌವದತ್ತಿಗೆ ಹೋದ್ರೆ ಖರ್ಚಿಗೆಲ್ಲಾ ಹಣ ಬೇಕಲ್ಲಾ, ಎಂಗ ಮಾಡ್ತಿ ಮತ್ತೆ"

ನಿಮ್ಮಂತವರು ಇರಬೇಕಾದ್ರೆ ನನಿಗ್ಯಾಕ್ರೀ ರೊಕ್ಕದ ಚಿಂತಿ,

"ಹ್ಹ...........ಹ್ಹ...........ಹ್ಹ........... ನಕ್ಕು ಅದೂ ಸೈ ಬುಡೂ" ನಟನೆಯ ಮಾತು ಹೇಳಿದ.

"ನಾನು ನಿಮ್ಮತ್ರಕ್ಕ ಬಂದು ವಿಷಯಾ ಹೇಳಿ, ನಿಮ್ಮನ್ನ ಕೇಳಾನಂತಿದ್ದೆ, ಅಷ್ಟರಾಗ ನೀವಾ ಕರಿಸಿದ್ರಿ ನೋಡಿ"

ಗೌಡ ಕಣ್ಣರಳಿಸಿ "ಅಂಗಾರ ಎಷ್ಟು ಬೇಕಾಕತಿ" ಎಂದು ಹೇಳಿ ತನ್ನ ಜೊಂಡಿಗದಂತ ಮೀಸಿ ಮ್ಯಾಲೆ ಕೈ ಹಾಕಿದ.

"ಸೀರಿ, ಕುಬಸ, ತಾಳಿ, ಕಾಲುಂಗರ.... ಗಾಡೀ ಖರ್ಚು ಜನ್ರಿಗೆ ಊಟಗೀಟಾ. ಅಂದ್ರೆ ಮೂರು ಸಾವ್ರ ಬೇಕ್ರಿ"

"ಅಯ್ಯೋ ಅಷ್ಟೇ ಏನು, ಮೂರು ಸಾವ್ರ ಏನು ಐದು ಸಾವ್ರ ತಗ. ಒಳ್ಳೇ ಭರ್ಜರಿ ಮಾಡು. ಏನು ಬಂದ್ರು ನಾನಿದೀನಿ" ಎಂದು ಪದ್ದೀಯ ನಿಂಬೆಹಣ್ಣಿನಂತಿರುವ ಮುಖವನ್ನ ನೆನೆಸಿಕೊಂಡು ಕ್ಷಣದಲ್ಲೇಕ ನನು ಕಾಣಹತ್ತಿ ಯಾವುದೋ ಲೋಕಕ್ಕೆ ಹೋದ.

"ಪದ್ದೀ ನೋಡು ಗೌಡ್ರು ಐದು ಸಾವಿರ ರೂಪಾಯಿ ಕೊಟ್ಟು, ಕೇಳಿಸ್ಯಾರೆ ನೀನೂ ಎರಡು ಚಲೋ ಸೀರಿ ತಗ, ಒಂದೆಳೆ ಬಂಗಾರ ಸರ ಮಾಡಿಸ್ಗೆ" ಮಗಳಿಗೆ ಹಿಗ್ಗಿನಿಂದ ಹೇಳಹತ್ತಿದಳು.

ನನಿಗೆ ಆ ಮುದೇರ್ಯಾಕಿನ ದುಡ್ಡು ಒಂದು ಪೈಸಾನೂ ಬ್ಯಾಡ. ನಾನು ಓದಿ ಮಾಸ್ತರಾಗ್ತೀನಿ. ಸ್ವಂತ ದುಡಿದು ತಿಂತಿನಿ. ಯಾವನ ಹಂಗೂ ನನಿಗೆ ಬ್ಯಾಡ. ನಾನು ಮಾತ್ರ ಪೂಜೆ ಮಾಡ್ಸಿಗ್ಯಣದಿಲ್ಲ. ನನಿಗೆ ಸೂಳಿ ಆಗ್ಲಿಕ್ಕೆ ಮನಸ್ಸಿಲ್ಲಾ. ನೀನು ಆಟ್ಟಿಕ್ಯಾರಿ ಮುಗಿಲಿಗೆ ಬಿದ್ರೂ ನಾನು ಜೋಗತಿ ಆಗ್ಲಿಕ್ಕೆ

ತಯಾರಿಲ್ಲ. ಆ ಗೌಡನ್ನ ಮಕಕ್ಕೆ ಐದು ಸಾವಿರನ ಒಗದು ಬಾ ಯವ್ವಾ. ನಾನೂ ಎಲ್ಲರಂಗೆ ಮದ್ವಿ ಆಗಿ ಸಂಸಾರ ಮಾಡ್ತೀನಿ. ನನ್ನ ದಾರಿನ ನನಗೆ ಬಿಟ್ಟುಬಿಡು ನಿನ್ನಂತೆ ನಾನು ಕೆಟ್ಟು ಜಡ್ಡು ಜಪತ್ತಿನಿಂದ ಕೊರಗಾದು ನಿನಗೆ ಇಷ್ಟೇನು? ನಿನ್ನ ಮಗಳನ್ನ ಎಲ್ಲರಂತೆ ಚೆಂದಾಗಿ ಬದುಕಾಕ ಬಿಡು. ನನ್ನ ಜೀವನ ಹಾಳು ಮಾಡುಬ್ಯಾಡ" ಅಳುತ್ತಾ ಅಂಗಲಾಚಿ ಬೇಡಿದಳು.

ಮಗಳ ಮಾತನ್ನ ಮೌನವಾಗಿ ಕೇಳುತ್ತಿದ್ದ ಹುಲಿಗೆವ್ವನ ಮನಸ್ಸು ಕರಗಿ ನೀರಾಗಿ "ನನ್ಮಗಳು ಎಲ್ಲರಂಗೆ ಮದ್ವೆಯಾಗಿ ಸಂಸಾರ ಮಾಡಿದ್ರೆ ಎಷ್ಟು ಚಂದಾಗಿ ಇರ್ತಾತಿ "ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದಂತೆ ಕರಗುತ್ತಿದ್ದ ಹೃದಯ ಮತ್ತೆ ಮತ್ತೆ ಗಟ್ಟಿಯಾಗಿ ಗೌಡ್ರು ಕೊಟ್ಟ ಹಣ ಕಣ್ಮುಂದೆ ಬಂದು ನಿಂತಿತು. ಎಲ್ಲಮ್ಮನಿಗೆ ಹರಿಕೆ ಹೊತ್ತದ್ದು ನೆನಪಾಯಿತು. ಹರಿಕೆ ತೀರಿಸದಿದ್ರೆ ಇಡೀ ಮನೆತನ ಅಷ್ಟೇ ಅಲ್ಲ ಊರಿಗೂರೇ ಹಾಳಾಗಿ ಬರಗಾಲ ಬಿದ್ದು ಮನುಷ್ಯರು, ದನಕರು ಎಲ್ಲಾ ಸಾಯ್ತಾವಂತ ಗೌಡ್ರು ಹೇಳುತ್ತಿದ್ದುದನ್ನ ನೆನಸಿಕೊಂಡಾಗ ಮೈ ಜುಂ ಎಂದು ನಡುಗಹತ್ತಿತು".

"ಅಂಗಲ್ಲಾ ಮಾಡುಬಾರ್ದು ಪೆದ್ದು ಹಿರಿಯಾರು ಹೇಳಿದ ಮಾತನ್ನ ಕೇಳಿ ಮುಕ್ತಿ ಪಡಕಬೇಕು."

"ಅಯ್ಯೋ ಯವ್ವಾ ಇಂತ ಮಾತುಗಳು ಹಿರಿಯರ ಬಾಯಿಂದ ಬರಬೇಕೆನು? ಒಂದು ಹೆಣ್ಣನ್ನ ಹಾಳು ಮಾಡಿದ್ರೆ ಈ ಜನಕ್ಕೆಲ್ಲಾ ಸಂತೋಷ ಆಕತಿ. ಮದ್ವಿ ಆಗಿ ಜೀವನ ಮಾಡಿದರೆ ಮುಕ್ತಿ ಸಿಗದಿಲ್ಲೇನು? ಜೋಗತಿ ಆದ್ರೇನೇ ಮುಕ್ತಿ ಸಿಗ್ತಾತೇನು. ಇದೆಲ್ಲಾ ಭ್ರಮೆಯವ್ವಾ, ಇಂತ ಸುಳ್ಳು ಹೇಳಿಕೆಗಳನ್ನ ಗೌಡ್ರಂತ ಜನ ತಮ್ಮ ಸ್ವಾರ್ಥಕ್ಕಾಗಿ ಹೇಳ್ತಿರ್ತಾರೆ. ನನ್ನ ಮದ್ವಿ ಮಾಡಿ ನೋಡು ಅಂಗಾರ ಊರೇನರಾ ಹಾಳಕಾತೇನಂತ, ಎಲ್ಲ ನಮ್ಮಂತ ದಡ್ಡ ಜನ್ರಿಗೆ ಮೋಸ ಮಾಡ್ತಾರೆ" ಹಣದಾಸೆ ತೋರುಸ್ತಾರೆ. ತನ್ನ ಮಗಳನ್ನ ಜೋಗತಿ ಮಾಡಂತ ಆ ಕೆಟ್ಟ ಗೌಡನಿಗೇಳು ಮತ್ತೆ ಮಾಡ್ತಾನೇನ ನೋಡು. ಅವನಿಗೂ ವಯಸ್ಸಿಗೆ ಬಂದ ಮಗಳಿದಾಳಲ್ಲ" ತಿವಿದು ತಿವಿದು ಮಾತಾಡಿದ್ದಕ್ಕೆ ಹುಲಿಗೆವ್ವಾ ತನ್ನ ಕೆನ್ನೆಗಳ್ನಾ ಬಡಕೊಂಡು "ಅಯ್ಯೋ ಅಯ್ಯೋ ಮೇಲ್ಜಾತಿ ಜನ್ರಿಗೆ ಅಂಗಲ್ಲಾ ಹೇಳಬಾರ್ದು ಮಗಳೇ, ಇಂತನೆಲ್ಲಾ ನಮ್ಮಂತ ಮಾತಂಗಿ ಜನ್ರಿಗೆ

ಮಾತ್ರ ಮೀಸ್ಲು. ನಮ್ಮ ಜಾತಿ ಜನ್ರನ್ನ ಆದೇವ್ರು ಇವಕ್ಕ ಭೂಮಿಮ್ಯಾಗೆ ಕಳಿಸಾನೆ".

ಇದೆಲ್ಲಾ ಸುಳ್ಳು. ಕಾಣದ ದೇವ್ರ ಹೆಸಿರಿಲೇ ಈ ನೆವಗಳನ್ನ ಮುಂದಿಟ್ಟು ನಮ್ಮಂತಹ ಹಿಂದುಳಿದ ಜಾತಿ ಜನ್ರನ್ನ ಶೋಷಣೆ ಮಾಡ್ತಾರೆ. ನೀವು ಕೆಳ ಜಾತಿಯವರು ಬಸ್ವಿ ಪದ್ಧತಿ ನಿಮ್ಮ ಕಸುಬು ಅಂತ ಹೇಳಿ ಈ ದೊಡ್ಡ ಜಾತಿ ಜನ ನಮ್ಮನ್ನ ಬಲಿ ತೆಗೆದುಕೊಳ್ತಾರೆ.

ಇದನ್ನೆಲ್ಲಾ ನಾನು ನಂಬಲ್ಲ. ನನಿಗಂತೂ ಬಸ್ವೀ ಆಗ್ಲಿಕ್ಕೆ ಇಷ್ಟಿಲ್ಲಾ. ನೀನು ಒಂದ ವೇಳೆ ಮಾಡಿದ್ರೆ ನನ್ನ ಹೆಣದ ಮ್ಯಾಲೆ ಮಾಡಬೇಕಾಕತಿ. ಮರ್ಯಾದಿಲೇ ಆ ನೀಚ ಗೌಡನ ದುಡ್ಡು ವಾಪಸು ಕೊಟ್ಟು ಬಾ, ಮುಖ ಗಂಟಿಕ್ಕಿ ಸಿಡಿಕಿದಳು.

ಹುಲಿಗೆವ್ವನಿಗೂ ಮಗಳ ಉಪದೇಶ ಕೇಳೀ, ಕೇಳೀ ಸಾಕಾಗಿ ಸಿಟ್ಟು ಬಂದು ಮೂಲೆಯಲ್ಲಿದ್ದ ಕಸಬರಿಗಿ ತಗಂಡು ಚಡ್.... ಚಡ್........ ಸಾಕಾಗ ವರಿಗೂ ಬಾರಿಸಿದಳು. ಯವ್ವಾ........ ಯವ್ವಾ........ ಅಂತ ಹೊಡೆತಕ್ಕೆ ಅಳ ಹತ್ತಿದಳು. ಬಾಳಿ ಸುಳಿ ದಪ್ಪೆಂದು ನೆಲಕ್ಕ ಬಿಪ್ಡಂಗ ಬಿದ್ಲು. "ನಾಳಿಲ್ಲ ನಾಡದ ಸವದತ್ತಿಗೆ ಗಾಡಿ ಹತ್ತಿದ್ಯಾ ಸರಿ, ಇಲ್ಲದ್ರೆ ಆ ದೇವಿಗೆ ಇಲ್ಲೇ ನಿನ್ನ ಹಾರಾ ಕೊಟ್ಟುಬಿಡ್ತಿನಿ" ಕಂಗೆಣ್ಣು ಬಿಟ್ಟು ರೋಷದಿಂದ ಕೈಯಾಗ ಹಿಡಿದಿದ್ದ ಕಸಬರಿಗಿನ ಬಿಸ್ಯಾಕಿದಳು.

ಚುಕು ಬುಕು, ಚುಕು, ಬುಕು, ಚುಕು ಬುಕು........ ರೈಲು ದಟ್ಟನೆಯ ಕಪ್ಪು ಹೊಗೆ ಉಗುಳುತ್ತಾ ಓಡುತ್ತಿತ್ತು, ರಾಶಿ ರಾಶಿ ಕಪ್ಪು ಹೊಗೆ ಆಕಾಶದಲ್ಲಿ ಮಲ್ಲಿಗೆ ಹೂವಿನಂತಿರುವ ಮೋಡಗಳನ್ನು ಅಡ್ಡಗಟ್ಟಿ ಆವರಿಸಿತು. ಇಡೀ ಆಕಾಶವೇ ಕಪ್ಪಾಗಹತ್ತಿತ್ತು, ಕಿಟಿಕಿ ಪಕ್ಕದಲ್ಲಿ ಪಟ್ಟಿ ಗಲ್ಲಕ್ಕೆ ಕೈ ಇಟ್ಟು ಮೌನವಾಗಿ ಕುಳಿತಿದ್ದಳು. ಅತ್ತು ಅತ್ತು ಕಣ್ಣುಗಳು ಬಾತು ಕೆಂಪಾಗಿದ್ದವು. ಜೋಗತಿ ಗಾಳೆವ್ವಾ, ರೇಣುಕವ್ವಾ, ಮಾಳವ್ವ ಎಲ್ಲರೂ ಕಿಸಿಕಿಸಿ ನಗುತ್ತಾ ತಮ್ಮ ಅನುಭವಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು. ತಾವೂ ಹಂಗಾಮದಾಗೆ ಏನೂ ಕಡಿಮೆ ಉಳುದುಲ್ಲಾ ಎಂದು ಪರಸ್ಪರ ಹರಟೆ ಕೊಚ್ಚುತ್ತಿದ್ದರು. ಮಾಳವ್ವ ನಡುವೆ ಬಾಯಾಕಿ

"ನಿನ್ನ ಹಣೀ ಬಹಳಾ ಪುಣ್ಯವಂತಿ ಹುಲಿಗೆವ್ವಾ ಜಮೀನ್ದಾರ ಗೌಡ್ರು ನಿನ್ಮಗಳಿಗೆ ಆರಿಗೇನು ಇಷ್ಟು ತೊಕ್ಕ ಬಂಗಾರ ದಾಗೀನಕ್ಕೂ ಕಡಿಮೆ ಇಲ್ಲ".

ಇಂತಾವ್ನೆಲ್ಲಾ ಪಡಕಂಡು ಬರಾಕೇ ಪುಣ್ಯಬೇಕು ಎಂದು ಗಾಳೆವ್ವ ಹೇಳಿದ್ದನ್ನ ಕೇಳಿ ಪದ್ದಿಗೆ ಒಮ್ಮೆಲೇ ಕಿವಿಯಾಗ ಕಾದ ಸೀಸ ಹಾಕಿದಂತಾತು. ಎದುರಿಗೆ ಕಾಣುತ್ತಿದ್ದ ಪ್ಲಾಸ್ಟಿಕ್ ಚೀಲದಾಗಿದ್ದ ಜರೀ ಸೀರೆ, ತೆಳ್ಳನೆಯ ಮಡಿ ಸೀರೆ, ಕುಬಸಾ ಲಂಗಾ ಎಲ್ಲವನ್ನೂ ನೋಡಿ ಮೈಯಲ್ಲಾ ಬೆಂಕಿ ಹತ್ತಿ ಉರಿದಂತಾಯಿತು.

ಚುಕು ಬುಕು, ಚುಕು ಬಕು ಕೂ.... ಎಂದು ಕೂಗುತ್ತಾ ಬೆಟ್ಟದಷ್ಟು ಗಾತ್ರದ ಕಪ್ಪು ಹೊಗೆ ಚೆಲ್ಲುತ್ತಾ ರೈಲು ಓಡುತ್ತಿತ್ತು.

ನಸುಕಿನಲ್ಲಿಯೇ ಎಣ್ಣೆ ಹೊಂಡದಲ್ಲಿ ಪದ್ದಿ ಸ್ನಾನ ಮಾಡಿದಳು. ಒಳಗಿನ ಮೈಯಲ್ಲಾ ಕಾಣುವಂತ ಬಿಳೀ ಮಡಿ ಸೀರೆ ಉಟ್ಟು ದೇವಿಗುಡಿಯನ್ನ ಕೈ ಮುಗಿದುಕೊಂಡು ಮೂರು ಸಾರಿ ಸುತ್ತಿದಳು. ನಂತರ ಜೋಗತಿಯರಿಗೆಲ್ಲಾ ಊಟ ಬಡಿಸಿದಳು.

ಜೋಗತಿಯರು ಪದ್ದಿಗೆ ತಂದಿದ್ದ ಹೊಸ ಜರಿ ಸೀರೆ ಕುಪ್ಪಸ ತೊಡಿಸಿದರು. ಕೈಗಳಿಗೆ ಹಸಿರು ಬಳೆಗಳಿಟ್ಟು ತಲೆತುಂಬಾ ಹೂ ಮುಡಿಸಿದರು. ಹಣೆಗೆ ಹರಿಸಿನ ಬಂಡಾರವನ್ನು ಹಚ್ಚಿದಾಗ ಪದ್ದಿ ಒಂದೇಸವನೆ ಬಿಕ್ಕಿ ಬಿಕ್ಕಿ ಅತ್ತಳು.

ಅಂಗಲ್ಲಾ ಅಳುಬಾರ್ದು ಪದ್ದಮ್ಮ ಇದು ನಿನ್ನ ಅದೃಷ್ಟ ಅಂತ ತಿಳ್ಕ. ನಮ್ಮ ವಂಶಕ್ಕೆ ಬಂದಿರುವ ಪವಿತ್ರ ಕಸಬು. ಏಳುಕೊಳದೆಲ್ಲಮ್ಮನ ಜಾಗದಾಗ ಅದಿಯಾ, ಅಂಗಲ್ಲಾ ಅಳಬಾರದು" ಎಂದು ಕಣ್ಣೀರೊರಸಿದಳು.

ಯವ್ವಾ ನಾ ಬದುಕಾಕಿಲ್ಲ ಸಾಯ್ತಿನಿ. ನಾ ಈ ಕೆಲ್ಸ ಒಲ್ಲೆ, ನನ್ನ ಕೈ ಬಿಟ್ಟು ಬಿಡು, ಎಲ್ಲಾದ್ರೂ ಹೋಗಿ ಬದುಕಿಕೊಳ್ಳುತ್ತೇನೆ. ಗೋಳೋ ಎಂದು ಅತ್ತಳು. ಪೂಜಾ ಸಾಮುಗ್ರಿಯನ್ನ ಜೋಡಿಸುತ್ತಿದ್ದ ಹುಲಿಗೆವ್ವಾ ಮುಖ ಎತ್ತಿ "ಪದ್ದೀ ಮೈ ಚವರ್ಾ ಸುಲಿತಿನಿ ಹೆಚ್ಚಾಗಿ ಮಾತಾಡಿದ್ರೆ" ಬಿರ ಬಿರ ಕೆಂಗಣ್ಣು ಬಿಟ್ಟಳು.

ಕರೀ ಕಂಬಳಿ ಗದ್ದುಗೆಯ ಮೇಲೆ ನಾಲ್ಕು ಮೂಲೆಯ ಸುತ್ತಲೂ ಹರಿಷಣದ ಕೊಂಬುಗಳನ್ನ, ಅಕ್ಕಿ ಉತ್ತತ್ತಿ ತುಂಬಿದ ಕೊಬ್ಬರಿ ಬಟ್ಟಲು ಗಳನ್ನು ಇಟ್ಟು ಸುರಿಗಿ ಕಟ್ಟಿದ್ದರು. ತಟ್ಟೆಯಲ್ಲಿ ಪೂಜೆಗೆ ಬೇಕಾದ ಸಾಮುಗ್ರಿಗಳು ಮತ್ತು ತಟ್ಟೆಯಲ್ಲಿ ಬೇವಿನ ಸೊಪ್ಪು ಇಟ್ಟಿದ್ದರು. ಕೆಂಪು ಬಿಳಿ ಮಣಿಗಳನ್ನ

ಪ್ರೋಣಿಸಿದ ಚಿನ್ನದ ತಾಳಿ ಪದ್ದಿಯ ಕಣ್ಣುಗಳನ್ನ ರಣಹದ್ದಿನಂತೆ ಕುಕ್ಕಿ ತಾನೇ ಗೆದ್ದೆ ಎಂದು ಅಣಕಿಸುತ್ತಿತ್ತು.

ಪದ್ದಿಯನ್ನ ಮಧ್ಯದಲ್ಲಿ ಕೂಡಿಸಿದರು. ಪಕ್ಕದಲ್ಲಿ ವರನ ಸಂಕೇತವಾಗಿ ಒಂದು ಕತ್ತಿ ಇಟ್ಟರು. ಮದುವೆಯಂತೆಯೇ ಎಲ್ಲಾ ವಿಧಿಗಳು ನಡೆದವು; ಜೋಗತಿಯರು ಪದ್ದಿ ಕೊರಳಿಗೆ ತಾಳಿ ಬಿಗಿದು "ನಮ್ಮ ಪದ್ದನ್ಮ ಇವತ್ತಿನಿಂದ ನಿತ್ಯ ಸುಮಂಗಲಿಯಾದಳು" ಎಂದು ಎಲ್ಲರೂ ಹರಸಿ ಅಕ್ಷತೆ ಹಾಕಿದರು.

"ಏಳುಕೊಳದೆಲ್ಲಮ್ಮನಿಗೆ ಅರ್ಪಿಸಿಕೊಂಡಳು. ಉಧೋ.... ಉಧೋ.... ಎಂದು ಕೂಗಿ ಎಲ್ಲರೂ ಆಶೀರ್ವದಿಸಿದರು"

ಎಲ್ಲಮ್ಮನಿಗೆ ಅರ್ಪಿಸಿದ ನಂತರ ಅಕ್ಕ ಪಕ್ಕದ ಐದು ಹಳ್ಳಿಗಳಿಗೆ ಭಿಕ್ಷೆ ಬೇಡಲು ಜೋಗತಿಯರು ಪದ್ದಿಯನ್ನು ಕರೆದುಕೊಂಡ ಹೋದರು. ಭಿಕ್ಷೆಯಲ್ಲಿ ಬಂದ ಅಕ್ಕಿ ಜೋಳಗಳನ್ನ ಸೇರಿಸಿ ಅಂಬಲಿ ಮಾಡಿ ರೇಣುಕೆಲ್ಲಮ್ಮನ ಪ್ರಸಾದವೆಂದು ಎಲ್ಲರಿಗೂ ಹಂಚಿದರು.

ಪದ್ದಮ್ಮ ದೇವರೊಡನೆ ಮದ್ವಿಯಾಗಿದ್ವಾಳೆಂದು ನೆರೆದಿದ್ದವರೆಲ್ಲರೂ ಘೋಷಿಸಿದರು.

ಹೊತ್ತು ಮುಳುಗುತ್ತಿದ್ದಂತೆ ಪದ್ದಿಯ ಮೈ ಕಂಪಿಸತೊಡಗಿತು. "ಆ ಕ್ರೂರಿ ಬರ್ಮನಗೌಡನನ್ನು ಸೇರುವುದಕ್ಕಿಂತ ಎಲ್ಲಿಗಾದರೂ ಓಡಿ ಹೋಗಬೇಕೆಂದು ಯೋಚಿಸುತ್ತಿರುವಲ್ಲಿಯೇ ಹುಲಿಯು ಕುರಿಯನ್ನ ತಿನ್ನುವ ಸಮಯ ಬಂದೇ ಬಿಟ್ಟಿತು.

ಕರಿ ಕಂಬಳಿ ಮ್ಯಾಲೆ ಪದ್ದಿಯನ್ನ ಕೂಡಿಸಿ ಎಲ್ಲರೂ ಶೋಬಾನ ಹಾಡಿದರು.

ಎಲ್ಲರೂ ಪದ್ದಿಯನ್ನ ಕೋಣೆಯೊಳಗೆ ತಳ್ಳಿ ಬಾಗಿಲು ಮುಚ್ಚಿಕೊಂಡು ಗೊಳ್ ಎಂದು ನಗುತ್ತಾ ಆಚೆ ಹೋದರು.

ಹುಲಿಯ ಬೋನಿನಲ್ಲಿ ಹೊಕ್ಕಂತಾಯಿತು. ಗಡ ಗಡ ನಡುಗಹತ್ತಿದಳು. ಬರ್ಮನಗೌಡ ಮೀಸೆ ತಿರುವುತ್ತಾ "ಬಾ ಪದ್ದೀ ಕೂತ್ಗ ಬಾ ಯಾಕೆ ಹೆದುರ್ತಿ" ವಯ್ಯಾರದ ನಗೆಯಿಂದ ಕರೆದ.

ಗೌಡನ ಕ್ರೂರ ಮುಖ ಹಲ್ಲುಗಳನ್ನ ನೋಡಿ ಗಾಬರಿ ಮತ್ತು ಅಸಹ್ಯದಿಂದ ಮುಖ ತಗ್ಗಿಸಿದಳು.

ಮೆಲ್ಲನೆ ಅವಳ ಹತ್ತಿರಕ್ಕೆ ಬಂದು ಗಟ್ಟಿಯಾಗಿ ಅಪ್ಪಿಕೊಂಡ. ಹುಲಿಯ ಬಾಯಲ್ಲಿರುವ ಕುರಿಮರಿ ಇಲಿಬಿಲಿ ಒದ್ದಾಡಿತು. ಒಮ್ಮೆಲೇ ಯವ್ವೋ.... ಎಂದು ಚೀರಿದಳು.

ಮಲಗಿದ್ದ ಪದ್ದಿ ಒಮ್ಮೆಲೇ ಗಕ್ ಎಂದು ಎದ್ದಳು. ಮೈಯೆಲ್ಲಾ ಬೆವತು ನೀರಾಗಿತ್ತು. ಸೀರೆಯ ಸೆರಗಿನಿಂದ ಗಾಳಿ ಹೊಡೆದುಕೊಳ್ಳುತ್ತಾ ಗೊರಕೆ ಹೊಡೆಯುತ್ತಿದ್ದ ಅವರಪ್ಪನ್ನ ನೋಡಿದಳು. ಬೆಳಕರಿದರೆ ಸೌದತ್ತಿಗೆ ಹೋಗಬೇಕು, ಎಲ್ಲಮ್ಮನ ಗುಡಿಯಲ್ಲಿ ಪೂಜೆ ಮಾಡಿಸಿಕೊಂಡು ಎಲ್ಲವನ್ನೂ ಆ ನೀಚ ಗೌಡನಿಗೆ ಅರ್ಪಿಸಬೇಕು". ಮನಸಿನಲ್ಲಿ ಒತ್ತಿಬಂದ ತಳಮಳವನ್ನ ತಡೆದುಕೊಂಡು ಸ್ವಲ್ಪ ಹೊತ್ತು ಕಲ್ಲು ಕೂತ ಹಾಗೆ ಕೂತು ನಿಟ್ಟುಸಿರು ಬಿಟ್ಟಳು. ಗೊರ್.... ಗೊರ್ ಗೊರಕೆಯ ಕರ್ಕಶ ಶಬ್ದ ಪದ್ದಿಯ ಕಿವಿಯ ಪೊರೆಯನ್ನ ಹರಿಯುತ್ತಿರುವಂತೆ ಭಾಸವಾಗುತ್ತಿತ್ತು.

ಮೆಲ್ಲನೇ ಎದ್ದು ಸಪ್ಪಳವಾಗದಂತೆ ಬಾಗಿಲ ಚಿಲಕ ತೆಗೆದು ತಾಯಿಯ ನ್ನೊಮ್ಮೆ ನೋಡಿದಳು. ಗೊರಕೆ ಇನ್ನೂ ಹೆಚ್ಚಾಯಿತು. ಬಾಗಿಲು ದಾಟಿ ಶಬ್ದವಾಗದಂತೆ ಹೊರಗಿನ ಚಿಲಕ ಹಾಕಿಕೊಂಡು ಅಂಗಳಕ್ಕೆ ಕಾಲಿಟ್ಟಳು. ಸುತ್ತಲೂ ಕಪ್ಪು ಕತ್ತಲು. ಕರಾಳ ಕತ್ತಲೆಯಲ್ಲೇ ದಾರಿಬಿಟ್ಟಳು. ಮನಸ್ಸು ಬಂಧನದಿಂದ ಹೊರಬಂದ ಹಕ್ಕಿಯಂತಾಗಿತ್ತು. ಬರ ಬರ ಸ್ಟೇಷನ್ನಿನ ಕಡೆಗೆ ಹೆಜ್ಜೆ ಹಾಕಿದಳು.

"ಊಕ.... ಕೂ...." ಎಂದು ಕೂಗಿ ಇನ್ನೇನು ಹೊರಡಲು ಗುಸ್, ಗುಸ್ ಶಬ್ದ ಮಾಡುತ್ತಿತ್ತು. ಓಡಿ ಬಂದು ಹತ್ತಿದಳು. ಡಬ್ಬಿಯಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಸುತ್ತಲೂ ಕಣ್ಣಾಯಿಸಿದಳು, ಅವರಾರೂ ಇವಳಿಗೆ ಪರಿಚಯವಿಲ್ಲ. ಇವಳಾರೆಂದು ಅವರಿಗೂ ಗೊತ್ತೇ ಇಲ್ಲ.

ಮತ್ತೊಮ್ಮೆ ರೈಲು ಕೂ.... ಅಂದು ಚುಕ್.... ಬುಕ್ ಶಬ್ದದೊಂದಿಗೆ ಮೆಲ್ಲನೆ ಚಲಿಸಿತು. ಪದ್ದಿ ಹಗುರವಾಗಿ ನಿಟ್ಟುಸಿರು ಬಿಟ್ಟು ಕಿಟಕಿಯಲ್ಲೊಮ್ಮೆ ಇಣಕಿ ನೋಡಿದಳು. ಕತ್ತಲುಮಯ, ರೈಲು ಯಾವ ದಿಕ್ಕಿನಲ್ಲಿ ಹೋಗುತ್ತಿದೆ, ದಾರಿ ಯಾವ ಕಡೆಗಿದೆ ಎಂಬುದು ಗೊತ್ತಾಗುತ್ತಿರಲಿಲ್ಲ. ರೈಲು ರಭಸದಿಂದ ಕತ್ತಲೆಯನ್ನ ಸೀಳಿ ಹೋಗುತ್ತಿತ್ತು.

ಕಪ್ಪು ಕುಡುಗೋಲು ಕೆಂಪಾಯಿತು

"ಏನು ಉಂಡಾಡೆಪ್ಪಾ ಹೊಲ ಹರಗದು ಮುಗಿತಾ" ವೀರಣ್ಣ ಮೇಷ್ಟ್ರು ಕೇಳಿದ್ದಕ್ಕೆ ಉಂಡಾಡಿ ತಿರುಗಿ ನೋಡಿ ಎತ್ತುಗಳ ಮುಗುದಾಣ ಎಳೆದು ನಿಲ್ಲಿಸಿ "ನಾಳೊಂದಿನ ಆಕತ್ರಿ" ಅಂದ ವಿನಯದಿಂದ.

"ಪರವಾಗಿಲ್ಲ ಬಿಡು ನಿನ್ನ ಗಿಡ್ಡಗಳನ್ನ ಏನೋ ಅಂತ ತಿಳ್ಕಂಡಿದ್ದ, ಜಬರ್ದಸ್ತಾಗಿ ಎಳಿತಾವೆ."

"ನಾವೆಂಗೆಂಗೆ ಅವ್ರುಗಳ್ನ ಆರೈಕಿ ಮಾಡ್ತಿವ್ರೊ ಅಂಗಂಗ ಜಗ್ತಾವಲ್ರಿ ಬುದ್ಧಿ."

''ಇರದಲ್ಲೇ ನೋಡು ನಾವು ಅವುನ್ನ ಜ್ವಾಪಾನ ಮಾಡಿದ್ರೆ ಅವೂ ನಮ್ನ ಅಂಗೆ ಜ್ವಾಪಾನ ಮಾಡ್ತವೆ. ಉಂಡಾಡೆಪ್ಪ ಅಂದಂಗೆ ಈ ಊರಿಗೆ ಏತ ನೀರಾವರಿ ಬರ್ತಾತಂತೆ. ಸುಮಾರು ಮುನ್ನೂರು–ನಾನ್ನೂರು ಎಕ್ರೆ ನೀರಾವರಿ ಆಗಬಹುದಂತೆ. ನೋಡು ಈ ಕಡಿ ಸಿಟ್ಟೆಲ್ಲಾ ನೀರಾವರಿ ಆಕತಂತೆ, ನೀನೇನು ಗೆದ್ದಂಗೆ ನಿನ್ನ ಹೊಲಕ್ಕೂ ನೀರು ಬರ್ತಾತಿ."

ಹೊಲದಲ್ಲಿ ದಣಿದು ಮುಖ ಬಾಡಿದ್ದರೂ ಉಬ್ಬು ಕುಣಿಸಿ "ಹೌದೇನ್ರಿ ಬುದ್ಧಿ....!" ಅಂದು ಮುಖ ಅರಳಿಸಿದ.

ನೀರಾವರಿ ಇಲಾಖೆಯವರು ಇವತ್ತು ಸರ್ವೆ ಮಾಡಾಕತ್ತಿದ್ರು. ಅವರತ್ತಿರ ಹೋಗಿ ಕೇಳಿದೆ. ವಿಷಯ ಗೊತ್ತಾತು ನೋಡು.

ವೀರಣ್ಣ ಮೇಷ್ಟ್ರು ಮಾತು ಕೇಳಿ ಉಂಡಾಡಿ ಮುಖ ಮಲ್ಲಿಗೆ ಹೂವು ಅರಳಿದಂಗೆ ಅರಳಿತು. "ನಮ್ಮೂರಿನ ನಸೀಬ ಬಿಡ್ರಿ ಈ ಸವಲತ್ತು ಬರ್ತಾತಿ ಅಂದ್ರೆ. ಅಂಗಾರೆ ಮುಂದಿನ ವರ್ಷದಷ್ಟೊತ್ತಿಗೆ ತಯಾರಿ ಮುಗಿದು ನೀರು ಬರಬಹುದು" ಎಂದು ಪ್ರಶ್ನಾರ್ಥಕವಾಗಿ ಕೇಳಿದ.

ಅಯ್ಯೋ ಅಲ್ಲಿತನಕ ಯಾಕೆ ಮಂತ್ರಿಗಳು ಬಂದು ಮುಂದಿನ ತಿಂಗಳಾ ದಾಗೆ ಅಡಿಗಲ್ ಹಾಕ್ತಾರಂತೆ, ಅದಕ್ಕೆ ಕೆಲಸ ಇಷ್ಟು ಜರೂರಾಗಿ ನೆಡ್ದಿರೋದು.

"ಬಾಳಾ ದಿನದಿಂದ ಇವತ್ತು ಆಕತಿ, ನಾಳೆ ಆಕತಿ ಅಂತ ಹೇಳ್ತಾನೇ ಇದ್ರು. ಇವತ್ತು ಖರೇ ಆದಂಗಾತು ನೋಡ್ರಿ" ಎಂದು ಹಿರಿ ಹಿರಿ ಹಿಗ್ಗಿದ.

"ನಡಿಯಪಾ ಉಂಡಾಡಿ ಎತ್ತುಗಳು ಮನಿ ಕಡಿಗೆ ಎಳಿಯಾಕತ್ತಾವೆ, ನೀನೂ ಕೂಡಾ ಹಸ್ಗಂಡಿರಬಹುದು ಆಮೇಲೆಲ್ಲಾ ಕುಂತು ಮಾತಾಡನಂತೆ ಮನಿಗೋಗಿ ಎತ್ತು ಕಟ್ಟಿ ಊಟ ಮಾಡ್ನಡಿ."

ನಾಲ್ಕೆಕರಿ ಸರ್ಕಾರಿ ಭೂಮಿಯನ್ನ ಉಂಡಾಡಿ ಸುಮಾರು ಎಂಟು ಹತ್ತು ವರ್ಷಗಳಿಂದಲೂ ಮಾಡಿಕೊಂಡು ಬಂದಿದ್ದ. ಆಯಾಸವಿಲ್ಲದೇ ಗಂಡ ಹೆಂಡತಿ ಇಬ್ಬರೂ ಹೊಲದಲ್ಲಿ ದುಡಿಯುತ್ತಿದ್ದರು. ಇರುವಷ್ಟೇ ಹೊಲದಲ್ಲಿ ಜೋಳ, ನವಣಿ, ಹೆಸರು, ಮಡಿಕೆ ಏನೆಲ್ಲಾ ಬೆಳೆದುಕೊಳ್ಳುತ್ತಿದ್ದ. ಗಂಡ ಹೆಂಡತಿ ಮತ್ತು ಒಬ್ಬ ಮಗಳು ಇದರಲ್ಲೇ ಹಾಯಾಗಿ ಜೀವನ ಮಾಡುತ್ತಿದ್ದರು.

ತನ್ನ ಹೊಲದಲ್ಲಿ ಕೆಲಸವಿಲ್ಲದಾಗ ಬೇರೆಯವರ ಹೊಲಕ್ಕೆ ಹರಗಲು, ಮಡಿಕೆ ಹೊಡೆಯಲು ಹೋಗುತ್ತಿದ್ದ. ಎಂದೂ ಸುಮ್ಮನೆ ಕುಳಿತುಕೊಂಡವನಲ್ಲ.

ಎತ್ತುಗಳನ್ನ ಕೊಟ್ಟಿಗೆಯಲ್ಲಿ ಕಟ್ಟಿ ಮೇವು ಮುಸುರಿ ಹಾಕಿ ಅವುಗಳ ಬೆನ್ನು ಚಪ್ಪರಿಸಿ ಹೆಂಡತಿ ತಂದ ನೀರಿನ ತಂಬಿಗೆ ಇಸಿದುಕೊಂಡು ಕೈಕಾಲು ಮುಖ ತೊಳೆದು ಗುಡಿಸಲೊಳಗೆ ಹೋದ.

"ಜಲ್ದಿ ಮಕ ವರಿಸಿಕೊಂಡು ಬರ್ರೀ, ಮುದ್ದಿಗೆ ಹಿಟ್ಟು ಇಟ್ಟೀನಿ. ಬಿಸಿ ಮುದ್ದಿ ಉಂಡು ಸ್ವಲ್ಪ ಅರಾಮು ತಗವಂತ್ರಿ, ಅಂಗ ರತ್ನನ್ನ ಎಬಿಸ್ಗ್ಯಂಡು ಬರ್ರಿ, ಅಲ್ಲೆ ಮಲಗ್ಯಾಳೆ."

ಪಟ್, ಪಟ್ ಮುದ್ದಿ ತಟ್ಟಿ, ತಟ್ಟೆಗಾಕಿ ಹೆಸರುಕಾಳು ಸಾರು ಗುರಪುಡಿ ಬುಂಚಿಕಾಯಿ ಚಟ್ನಿ ಹಾಕಿದಳು.

"ಸಂಗೀ ನಮ್ಮೂರಿಗೆ ಏತ ನೀರಾವರಿ ಬರ್ತಾತಂತೆ. ಮುಂದಿ ಬ್ಯಾಸ್ಗಿಗೆ ಹೊಲಗಳಿಗೆ ನೀರು ಕೊಡ್ತಾರಂತೆ ನಾನ್ನೂರು ಎಕ್ರೆಗೆ ನೀರಾಕತಂತೆ. ನಮ್ಕ್ರ ಹೊಲನೂ ನೀರಾವರಿ ಆಗ್ತತಂತೆ" ಒಂದೇ ಸವನೇ ಉಸಿರು ಬಿಡ್ದಂಗೆ ಹೇಳಿದ.

ಸಂಗ ಕಣ್ಣರಳಿಸಿ "ಹೌದಂತ್ಯಾ.... !" ಈ ಸಮಾಚಾರ ನಿಮಿಗ್ಯಾರು ಹೇಳಿದ್ರು.

"ಹೊಲದಿಂದ ಬರಾಕರೆ ವೀರಣ್ಣ ಮೇಷ್ಟ್ರು ಹೇಳಿದ್ರು. ಸರ್ಕಾರದ್ದು ಆಗ್ಲೆ ಅಳತಿ ಮಾಡಾಕೆ ಬಂದಾರೆ.''

"ಹಿಂಗೇನು.... !'' ಕುಂತಲ್ಲೆ ಕುಣಿದು ಕುಪ್ಪಳಿಸಿದಳು.

ಊರ ಬಾಗಿಲಿನಲ್ಲಿ ಮಾವಿನ ತೋರಣಕಟ್ಟಿ ಸಿಂಗರಿಸಿದ್ದರು. ಹಲಗಿ, ಡೊಳ್ಳುಗಳನ್ನ ಬಾರಿಸುತ್ತಾ ನೆರೆದಿದ್ದ ಜನ "ನಮ್ಮ ಹೊಲಕ್ಕೆಲ್ಲಾ ನೀರು ಬಂತ್ರಣ್ಣ ! ನಮ್ಮ ಹಳ್ಳಿಗೀಗ ಮಂತ್ರಿಗಳು ಬರ್ತಾ ಅವ್ರಣ್ಣ.... !'' ಹಾಡಿ ಕುಣಿಯುತ್ತಿದ್ದರು.

"ಓ ಕಾರು ಬಂತು ! ಕಾರು ಬಂತು ! ಮಂತ್ರಿಗಳು ಬಂದ್ರು ! ಒಂದೆರಡು ಫರ್ಲಾಂಗ್ ದೂರದಲ್ಲಿ ಕಾರುಗಳು ಬರುವುದನ್ನು ನೋಡಿ, ಒಬ್ಬ ಕೂಗಹತ್ತಿದ.''

ಎಲ್ಲರೂ ಆಕಡೆ ತಿರುಗಿ ಓ........ ಎಂದು ಚಪ್ಪಾಳೆ ತಟ್ಟಿ "ಮಂತ್ರಿಗಳು ಬಂದ್ರು ! ಮಂತ್ರಿಗಳು ಬಂದ್ರು.... !" ಎಲ್ಲರೂ ಕೇಕೆ ಹಾಕಿ ಕುಣಿದರು.

ಕಾರಿನಿಂದ ಇಳಿಯುತ್ತಿದ್ದಂತೆ ಮಂತ್ರಿಗಳ ಕೊರಳಿಗೆ ಹಾರ ಹಾಕಿ, ಆರತಿ ಮಾಡಿ, ಹಣೆಗೆ ಕುಂಕುಮದ ತಿಲಕವಿಟ್ಟು ಡೊಳ್ಳಿನ ಮೆರವಣಿಗೆಯಲ್ಲಿ ಕರೆದುಕೊಂಡು ಹೋದರು.

ಮಂತ್ರಿಗಳು ಗುಂಡಿ ಒತ್ತಿ ನೀರು ಬಿಟ್ಟರು. ಎಲ್ಲರೂ ಚಪ್ಪಾಳೆ ತಟ್ಟಿ ಆನಂದದಿಂದ ಜೈಕಾರ ಹಾಕಿದರು.

ಮಂತ್ರಿಗಳು ಎದ್ದು ನಿಂತು "ನೀವೆಲ್ಲರೂ ಶ್ರಮವಹಿಸಿ ದುಡಿದರೇನೆ ಹಳ್ಳಿಗಳ ಪ್ರಗತಿ ಸಾಧ್ಯ. ಹಳ್ಳಿಗಳೇ ದೇಶದ ಆಸ್ತಿ. ನಿಮ್ಮೆಲ್ಲರ ದುಡಿಮೆಯ ಪ್ರತಿಫಲವೇ ಸಾಕ್ಷಿ ಈ ದೇಶದಲ್ಲಿ ಇದುವರೆಗೂ ಆದ ಪ್ರಗತಿಗೆ........" ಒಡಾಯಿ ಭಾಷಣವನ್ನೆ ಮಾಡಿ ಮುಗಿಸಿದ ನಂತರ ತಮ್ಮ ಹಳ್ಳಿನ ನೀರಾವರಿ ಮಾಡಿದ್ದಕ್ಕೆ ವಂದನೆ ಸಲ್ಲಿಸುತ್ತಾ ರುದ್ರಗೌಡ "ನಮ್ಮೆಲ್ಲರ ಮೆಚ್ಚಿನ ನೀರಾವರಿ ಮಂತ್ರಿಗಳು ಉದಾರ ಮನಸ್ಸಿನಿಂದ ನಮಗೆ ಏತ ನೀರಾವರಿ ಮಾಡಿಸಿದ್ದಾರೆ. ಇವರಿಗೆ ನಮ್ಮ ಹಳ್ಳಿಯ ಪರವಾಗಿ ತುಂಬಾ ಧನ್ಯವಾದಗಳು.'' ಎಂದು ತೊದಲ್ತ ಬದ್ಲ ಹೇಳಿ ಮುಗಿಸಿದ.

ಉಂಡಾಡಿ ಹುಚ್ಚಣ್ಣ ಶೆಟ್ಟರ ದಲಾಲಿ ಅಂಗಡಿಯಲ್ಲಿ ಸಾಲ ಮಾಡಿ ಬೀಜ ಗೊಬ್ರ ತಂದು ನಾಲ್ಕೆಕರೆಗೂ ಸೇಂಗ ಬಿತ್ತಿದ.

ನೀರು ಜುಳು, ಜುಳು, ಹರಿದು ಹೊಲವನ್ನೆಲ್ಲಾ ತೋಯಿಸುವಾಗ ತಮ್ಮ ಮನೆ ಬಾಗಿಲಿಗೆ ಬಂದ ಅದೃಷ್ಟವನ್ನು ನೆನೆದು ಗಂಡ ಹೆಂಡತಿ ಇಬ್ಬರೂ ಕಲರವದಿಂದ ಹರಿಯುವ ನೀರಿನಂತೆಯೇ ಹಾಡಿ ಕುಣಿದರು.

ಸೇಂಗ ಬೆಳೆಯಂತೂ ನಿರೀಕ್ಷೆಗೂ ಮೀರಿ ಬೆಳೆಯಿತು. ಉಂಡಾಡಿಯ ಪರಿಶ್ರಮವನ್ನು ನೋಡಿ ಎಲ್ಲರೂ ನಿಬ್ಬೆರಗಾದರು.

"ಉಂಡಾಡೆಪ್ಪಾ, ಏ ಊಂಡಾಡೆಪ್ಪ ಬಾ ನಿನಗೆ ನೋಟೀಸ್ ಬಂದಾತಿ'' ಗ್ರಾಮಲಖ್ಖಿಗರ ಜವಾನ ಮನೆಯೊಳಗಿದ್ದ ಉಂಡಾಡಿಯನ್ನ ಕೂಗಿ ಕರೆದ.''

ಗಾಭರಿಯಿಂದ ಹೊರಗೆ ಬಂದು "ಯಾಕಂತೆ ನೋಟೀಸು" ಕೊಂಚ ಅನುಮಾನದಿಂದ ಕೇಳಿದ.

''ಯಾಕೋ ಗೊತ್ತಿಲ್ಲ ರೆವೆನ್ಯೂ ಇನ್ಸ್‌ಪೆಕ್ಟ್ರು, ವಿಲೇಜ್ ಅಕೌಂಟ್ರು ತಾಲೂಕು ಕಚೇರಿಯಿಂದ ನೋಟೀಸ್ ಬಂದಾತಂತ ಹೇಳಿ ಕೊಟ್ಟು ಬಾ ಅಂದ್ರು" ತಳವಾರ ಹೇಳಿ ಉಂಡಾಡಿಗೆ ನೋಟೀಸ್ ಕೊಟ್ಟು ಮುಟ್ಟಿದಂಗೆ ಇನ್ನೊಂದರಲ್ಲಿ ಹೆಬ್ಬೆಟ್ಟು ಒತ್ತಿಸಿಕೊಂಡು ಹೋದ''

ವೀರಣ್ಣ ಮೇಷ್ಟ್ರ ಹತ್ತಿರ ನೋಟೀಸ್ ತಗಂಡೋಗಿ ತೋರಿಸಿದ. ಮೇಷ್ಟ್ರು ಕವರ್ ಒಡೆದು ಓದಿದ ನಂತರ ''ಇದೇನು ಉಂಡಾಡೆಪ್ಪ ನಿನ್ನ ಹೊಲ ಆ ಸಕ್ರವ್ವಂದಂತೆ! ಎಂಟು ವರ್ಷಗಳಿಂದಲೂ ಆಕಿನೇ ಹೊಲ ಮಾಡ್ತಾ ಅದಳಂತೆ!"

''ಯಾವ ಸಕ್ರವ್ವ....'' ? ಉಂಡಾಡಿ ಕೊಂಚ ಧ್ವನಿ ಏರಿಸಿ ಕೇಳಿದ

''ಅದೆ ಆ ರುದ್ರಗೌಡನ ಸೂಳಿ. ತ್ವಾಟದ ಮನಿಯಾಗ ಗೌಡ್ರು ಇಟ್ಗಂಡರಲ್ಲ ಆಕಿ''

"ನೀ ಮಾಡಿದ ಹೊಲ ಆಕಿಗೇ ಸೇರಬೇಕಂತೆ. ನೀನೇ ಭೂಮಿ ಅತಿಕ್ರಮಣ ಮಾಡಿದೆಯಂತೆ. ಪಾಣಿ ಕಾಲಂನಗೆ ಆಕಿ ಹೆಸರೇ ಐತಂತೆ....? ಹೊಲನಾ ಆಕಿಗೆ ಬಿಟ್ಟುಕೊಡಬೇಕಂತ ಈ ನೋಟೀಸ್ ಜಾರಿ ಮಾಡ್ಯಾರೆ."

ವಿಷಯ ಕೇಳಿ ಉಂಡಾಡಿಗೆ ಒಮ್ಮೆಲೇ ಆಕಾಶನೇ ಮೇಲೆ ಬಿದ್ದಂಗಾತು. ತಲೆ ಗರ್ ಎಂದು ತಿರುಗಿತು. ಸ್ವಲ್ಪ ಹೊತ್ತಿನ ನಂತರ ಚೇತರಿಸಿಕೊಂಡು ಕೆಂಗಣ್ಣು ಮಾಡಿಕೊಂಡು ''ಇದೆಲ್ಲಾ ಆ ಹಲ್ಕಾ ರುದ್ರಗೌಡನ ಕಿತಾಪತಿ.

ಹೊಲ ನೀರಾವರಿ ಆದಮ್ಯಾಲೆ ದಕ್ಕಿಸಿಗ್ಯಣಕಂತ ಮಸಲತ್ತು ಮಾಡಿ ಅನ್ನ ಹೊಳಿ ಸಕ್ರಪ್ಪನಿಂದ ಅರ್ಜಿ ಕೊಡಸ್ಯಾನೆ.''

"ಅಂಗಾರ ಪಾಣಿಗೆ ಆಕಿ ಹೆಸರೆಂಗ ಬಂತೂ"? ಎಂದು ಮೇಷ್ಟ್ರು ಕೇಳಿದ್ದಕ್ಕೆ "ಆ ಮಲ್ಲಪ್ಪ ವಿಲೇಜ್ ಅಕೌಂಟ್ರನ್ನ ಒಳಗಾಕ್ಕೊಂಡು ಆ ರುದ್ರಗೌಡ ನಾಟ್ಗ ಮಾಡ್ಯಾನೆ" ಉಂಡಾಡಿ ಸಿಟ್ಟಿನಿಂದ ಮೂಗು ಅರಳಿಸಿ ಹಲ್ಲು ಕಡಿದು ಹೇಳಿದ.

"ಹೌದು ಉಂಡಾಡೆಪ್ಪಾ ಇದೆಲ್ಲಾ ಆ ಗೌಡ ಬಡ್ಡಿಮಗನ್ನ ಕರಾಮತ್ತು. ಏನೋ ಊರಿನ ಗೌಡ, ಹಿರಿಯ ಅಂತ ಮರ್ಯಾದಿ ಕೊಟ್ರೆ ಆ ನರಿ ಬುದ್ಧಿ ಗೌಡ ಊರಿಗೆ ದ್ರೋಹ ಮಾಡದು ಇನ್ನೂ ಬಿಡ್ಲಿಲ್ಲ" ಮೇಷ್ಟ್ರೂ ಸಹಿತ ಕೋಪ ಮಾಡಿಕೊಂಡು ಹೇಳುತ್ತಿರುವಾಗ ಅಲ್ಲಿಯ ಸುತ್ತಮುತ್ತಲ ಮನೆಗಳ ಜನ ಜಮಾಯಿಸಿದರು.''

ಸುಮಾರು ಎಂಟೆತ್ತು ವರ್ಷದ ಲಗಾತಿ ನಮ್ಮ ಉಂಡಾಡಿನೇ ಹೊಲ ಸಾಗು ಮಾಡ್ತಾ ಬಂದಾನೆ. ಆ ಸಕ್ರಪ್ಪೆಂದು ಹೊಲದಾಗ ಕಾಲಿಟ್ಟಿಳಂತೆ, ವಿಲೇಜ್ ಅಕೌಂಟ್ರಿಗೆ ಲಂಚ ಕೊಟ್ಟು ಆಕಿ ಹೆಸಿರಿಗೆ ಪಾಣಿ ಬರಿಸ್ಯಾನೆ ನೋಡು ಆ ಗೌಡ" ಎಂದು ಸಾದ್ರ ಭೀಮಜ್ಜ ಹೇಳಿದ.

"ನೋಟೀಸ್ ಕೊಟ್ರೇನಾತು. ನೀನೂ ತಕರಾರು ಅರ್ಜಿ ಹಾಕು. ನಾಲ್ಕು ದಿಕ್ಕಿನ ಜನ ಎಂಗಾರ ನಿನ್ನ ಕಡಿಗೆ ಸಾಕ್ಷಿ ಹೇಳ್ತಾರೆ. ನೀನು ಮದ್ಲು ತಕರಾರು ಅರ್ಜಿ ಹಾಕು, ಆಮ್ಯಾಲೆ ಎಲ್ಲಾ ನೋಡ್ಕ್ಯಣನಂತೆ" ವೀರಣ್ಣ ಮೇಷ್ಟ್ರು ನಡುವೆ ಬಾಯಿ ಹಾಕಿ ಹೇಳಿದರು.''

ಅಕ್ಕಪಕ್ಕದ ಹೊಲಗಳ ರೈತರ ಹೇಳಿಕೆಯ ಪತ್ರಗಳನ್ನು ತಕರಾರು ಅರ್ಜಿಗೆ ಲಗತ್ತಿಸಿ ತಾಲೂಕು ಕಚೇರಿಗೆ ಖುದ್ದಾಗಿ ಹೋಗಿ ತಹಸೀಲ್ದಾರರನ್ನ ಭೆಟ್ಟಿಯಾಗಿ ಅರ್ಜಿ ಸಲ್ಲಿಸಿ ರುದ್ರಗೌಡನ ಪಿತೂರಿಯನ್ನ ಸವಿವರವಾಗಿ ಹೇಳಿದ. ಅಲ್ಲದೇ ತಾನು ದಲಿತನೆಂದು ಅವರೆಲ್ಲಾ ಸೇರಿಕೊಂಡು ತಾನು ಮಾಡುತ್ತಿರುವ ನಾಲ್ಕು ಎಕರೆ ಹೊಲವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು, ತಾವು ಒಮ್ಮೆ ಗ್ರಾಮಕ್ಕೆ ಭೇಟಿ ನೀಡಿ ತನಿಖೆ ಮಾಡಿ ಆದಷ್ಟು ಬೇಗ ತನಗೆ ನ್ಯಾಯ ದೊರಕಿಸಿ ಕೊಡಬೇಕೆಂದು, ಇಲ್ಲದಿದ್ದರೆ ಹೊಲದಲ್ಲಿ ಬೆಳೆದು

ನಿಂತ ಸೇಂಗ ಬೆಳೆಯನ್ನ ಆ ರುದ್ರಗೌಡ ಕಿತ್ತುಕೊಳ್ಳಲು ಸಾಧ್ಯವಿದೆ. ಸಾಲ ಮಾಡಿ ಹೊಲಕ್ಕೆ ಬೀಜಗೊಬ್ರ ತಂದುಹಾಕಿನಿ. ಹರಿಜನ ಜಾತಿಗೆ ಸೇರಿದ ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಬೇಡಿಕೊಂಡ.

ರುದ್ರಗೌಡ ಹೊಲ ದಕ್ಕಿಸಿಕೊಳ್ಳಲು ಕೆಳಗಿನಿಂದ ಹಿಡಿದು ಹಣಸುರಿದ. ರಾತ್ರೋರಾತ್ರಿ ಕೇರಿಗೆ ಹೋಗಿ ಹಣದ ಆಮಿಷ ಒಡ್ಡಿ ಸಾಕ್ಷಿಗಳನ್ನು ತನ್ನ ಕಡೆಗೆ ಎಳೆದುಕೊಳ್ಳಲು ಪ್ರಯತ್ನಿಸಿದ. ಸಾಧ್ಯವಾಗದೇ ಹೋದಾಗ ಬೆದರಿಕೆ ಹಾಕಿದ. ಯಾರೊಬ್ಬರೂ ಬಗ್ಗಲಿಲ್ಲ.

ಅಸಿಸ್ಟೆಂಟ್ ಕಮೀಷನರ್ ಹಾಗೂ ತಹಸೀಲ್ದಾರರು ಗ್ರಾಮಕ್ಕೆ ಭೇಟಿ ಕೊಟ್ಟು ತನಿಖೆ ನಡೆಸಿದರು. ''ಎಲ್ಲರೂ ಸುಮಾರು ಎಂಟತ್ತು ವರ್ಷಗಳಿಂದ ಉಂಡಾಡಿನೇ ಆ ಹೊಲ ಮಾಡ್ತಾ ಬಂದಾನೆ'' ಎಂದು ಸಾಕ್ಷಿ ಹೇಳಿದರು.

ಕೊನೆಗೆ ಉಂಡಾಡಿ ವ್ಯಾಜ್ಯದಲ್ಲಿ ಗೆದ್ದ. ಅವನ ಕಡೆಗೆ ತೀರ್ಪಾಗಿದ್ದರಿಂದ ಆ ನಾಲ್ಕೆಕರೆ ಹೊಲವನ್ನ ಅವನ ಹೆಸರಿಗೆ ಪಟ್ಟ ಮಾಡಲಾಯಿತು.

ರುದ್ರಗೌಡ ಸಿವಿಲ್‌ಕೋರ್ಟ್ ಕಟ್ಟೆ ಹತ್ತಿದ. ಅಲ್ಲಿಯೂ ಅರ್ಜಿ ತಿರಸ್ಕೃತವಾಯಿತು.

ಎಲ್ಲವಲ್ಲಿಯೂ ತನಗೆ ಸೋಲಾದುದ್ದಕ್ಕೆ ರುದ್ರಗೌಡ ಗಾಯಗೊಂಡ. ನಾಗರಹಾವಿನಂತಾದ. ಉಂಡಾಡಿಯ ಮೇಲೆ ಕತ್ತಿ ಮಸೆಯಲಾರಂಭಿಸಿದ.

ಆ ರುದ್ರಗೌಡ ಬಹಳಾ ಕ್ರೂರಿ, ಉಂಡಾಡೆಪ್ಪಾ ನೀನು ಸ್ವಲ್ಪ ಉಷ್ಯಾರಿ. ಯಾ ಟೈಮಿನಾಗ ಏನ್ ಮಾಡ್ತಾನೋ ಗೊತ್ತಾಗದಿಲ್ಲ. ನೀನು ಒಂಟಿಯಾಗಿರಬ್ಯಾಡ.

''ಆ ಹೇಡಿ ಗೌಡ ನನ್ನೇನ್ಮಾಡ್ತಾನೆ. ಕುಡುಗೋಲು ಹಿಡಿದು ಹೊಲ ಕಾಯ್ತಿನಿ. ನಮ್ಮಂತ ಹಿಂದುಳಿದ ಜನ ಎದ್ದು ನಿಂತ್ರನೇ ಈ ಗೌಡಾಳ್ಕಿ ಜನ ಬಗ್ಗದು. ಇಲ್ಲದ್ರೆ ನಮ್ಮನ್ನ ಹರ್ಕಂಡು ತಿಂದು ಬಿಡ್ತಾರೆ. ನಾನು ಈ ನೀಚ ಗೌಡಸಿಗೆ ಹೆದರಲ್ಲಾ ಮೇಷ್ಟ್ರೇ....'' ಎಂದು ಉತ್ತರ ಕೊಡುವಾಗ ಭೋರ್ಘರಿಯುವ ಪ್ರವಾಹದಂತಿದ್ದ ಉಂಡಾಡಿ.

''ಯಾವುದಕ್ಕೂ ದುಡುಕುಬ್ಯಾಡ. ಆ ಗೌಡ ನಿನ್ನೇನು ಮಾಡದಿಲ್ಲ. ಆದ್ರೂ ನಮ್ಮ ಉಷಾರಿ ನಮಿಗಿರಬೇಕು. ಅವನ ಹತ್ತಿರ ಹಣ ಇದೆ. ಸಾಕಿದ

ರೌಡಿಗಳಿದ್ದಾರೆ. ಹೊಲದಾಗಿನ ಬೆಳೆನೂ ಉಷಾರಿ. ಸ್ವಲ್ಪ ಹೊಲದ ಕಡಿಗೆ ನಿಗಾ ಜಾಸ್ತಿ ಇಡು'' ಎಂದು ಮೇಷ್ಟ್ರ ಸಲಹೆ ನೀಡಿದರು.

ಕೈಗೆ ಬಂದ ಬೆಳೆಯನ್ನು ಬಾಯಿಗೆ ಬರದಂಗೆ ಮಾಡಿಯಾನೆಂದು ಮುಂಜಾಗ್ರತೆಯಿಂದ ಕೈಯಲ್ಲಿ ಕುಡುಗೋಲು ಹಿಡಿದು ಉಂಡಾಡಿ ರಾತ್ರಿಯೆಲ್ಲಾ ಹೊಲ ಕಾಯಹತ್ತಿದ.

''ಉಂಡಾಡೀ........ ಓ ಉಂಡಾಡೀ........ ಬಾ ನಿನ್ನ ಗುಡಿಸಲಿಗೆ ಬೆಂಕಿ ಹತ್ಯತಿ ಓಡಿಬಾ'' ಕೇರಿಯ ಬೀರ ದಸ ದಸ ತೇಕುತ್ತಾ ಓಡಿ ಬಂದು ಹೇಳಿದ.

''ಇದೆಲ್ಲಾ ಆ ಸೂಳೆ ಮಗ ರುದ್ರಗೌಡನ ಕೆಲಸಲ್ಲದೇ ಬೇರೆ ಯಾರ್‍ದೂ ಅಲ್ಲ'' ದಿಗಿಲುಗೊಂಡು ಕೈಯಲ್ಲಿ ಹಿಡಿದಿದ್ದ ಕುಡುಗೋಲನ್ನು ಗಟ್ಟಿಯಾಗಿ ಹಿಡಿದು ''ಅಯ್ಯೋ ನನ್ನ ಹೆಂಡಿತಿ ನನ್ನ ಮಗಳು, ನನ್ನ ಎತ್ತುಗಳು'' ಎಂದು ಚೀರುತ್ತಾ, ಮನೆಕಡೆ ಎದ್ದೇನು ಬಿದ್ದೆನೆಂದು ಓಡ ಹತ್ತಿದ. ಕತ್ತಲಲ್ಲಿ ಹೊಲದ ಅಡ್ಡ ದಾರಿ ಹಿಡಿದು ಓಡುತ್ತಿದ್ದ. ಕಲ್ಲು ಮುಳ್ಳುಗಳನ್ನ ಲೆಕ್ಕಿಸದೇ ನನ್ನ ಹೆಂಡ್ತಿ ಮಗಳು ಗತಿ ಏನಾತೋ ಎಂದು ಏಳುತ್ತಾ ಬೀಳುತ್ತಾ ಓಡಿದ.

ಗುಡಿಸಲಿಗೆ ಬೆಂಕಿ ಹತ್ತಿ ಧಗ ಧಗ ಉರಿಯುತ್ತಿರುವುದು ಅಷ್ಟು ದೂರ ದಿಂದಲೇ ಕಾಣುತ್ತಿತ್ತು. ಅಯ್ಯೋ.... ಅಯ್ಯೋ.... ಎಂದು ಜನಗಳ ರೋಧನದ ಕೂಗು ಕೇಳುತ್ತಿತ್ತು. ಕಾಲಲ್ಲಿ ಉಸಿರಿಲ್ಲದಿದ್ದರೂ ರಭಸದಿಂದ ಓಡಿದ.

ಹೆಂಡತಿ, ಮಗಳು, ಎತ್ತುಗಳು ಬೆಂದು ಬದನೇಕಾಯಿ ಆಗಿದ್ದರು. ಆದದ್ದು ಆಯಿತು ಎಂದು ಸೆರೆದ ಜನ ಸಮಾಧಾನ ಹೇಳಿದರು. ಉಂಡಾಡಿ ಗೋಳೋ ಎಂದು ಅತ್ತ. ನಂತರ ನಿಮಿರಿ ನಿಂತು "ರುದ್ರಗೌಡಾ.... !" ಎಂದು ಕಟ ಕಟ ಹಲ್ಲು ಕಡಿದ. ಕೈಯಲ್ಲಿರುವ ಕುಡುಗೋಲು ಜ್ವಾಲೆಯ ಬೆಳಕಿನಲ್ಲಿ ಫಳ ಫಳ ಹೊಳೆಯುತ್ತಿತ್ತು. ಉಬ್ಬು ಗಂಟೆಕ್ಕಿದ್ದನು, ಶಾಂತ ಹೃದಯದಲ್ಲಿ ಜ್ವಾಲಾಮುಖಿ ತುಂಬಿಕೊಂಡಿತ್ತು.

"ನೇರವಾಗಿ ರುದ್ರಗೌಡನ ತೋಟಕ್ಕೆ ಹೋದ, ಬಾಗಿಲ ಕಿಂಡಿಯಲ್ಲಿ ಇಣಿಕಿ ಹಾಕಿದಾಗ, ಮಂದ ಬೆಳಕಿನಲ್ಲಿ ರುದ್ರಗೌಡ ಸಕ್ರವ್ವ ನಗ್ನರಾಗಿ ಮೈಯಿಗೆ ಮೈ ಅಂಟಿಸಿಕೊಂಡಿದ್ದರು.

"ಇವತ್ತು ಸರ್ವನಾಶ ಆದ ಆ ಉಂಡಾಡಿ. ಅವನ ಸೊಕ್ಕು ಮುರಿತು" ಅಟ್ಟಹಾಸದ ಕಿಲಕಿಲ ನಗೆಯಾಡುತ್ತಿದ್ದರು.

ಪಂಪ ಸೆಟ್ ರೂಮಿನ ಕದಗಳನ್ನ ಜಾಡಿಸಿ ಒದ್ದ. ಥಡ್ ಎಂದು ಕದಗಳು ತೆರೆದವು. ಕದ ಥಡ್ ಎನ್ನುವ ಶಬ್ದಕ್ಕೆ ಬೆದರಿ "ಯಾರೂ....? ಯಾರದೂ....?" ಎಂದು ಕೂಗುತ್ತಿದ್ದಂತೆಯೇ ರಕ್ತ ಚಲ್ ಚಲ್ ರೂಮಿನ ತುಂಬಾ ಸಿಡಿಯಿತು. "ಕಚ್.... ಕಚ್...." ಬಹಳಾ ಹೊತ್ತು ಕೊಚ್ಚಿದ ನಂತರವೇ ಕುಡುಗೋಲಿನ ರೋಷ ಇಳಿಯಿತು. ಕಪ್ಪಾಗಿದ್ದ ಕುಡುಗೋಲು ಕೆಂಪಾಗಿ ಅನ್ಯಾಯವನ್ನ ಪ್ರತಿಭಟಿಸಿ ಕೂಗುತ್ತಿತ್ತು.

ಓ. ಸಿ.

ಉಂಚಿ ಕಟ್ಟೆಯ ಸಿದ್ದ ಹೋದ ಮೇ ತಿಂಗಳಲ್ಲಿ ತನ್ನ ಗ್ರಾಮಕ್ಕೆ ಸ್ವಲ್ಪ ದೂರವಿರುವ ಮುಂಗಾಪುರ ಗ್ರಾಮದ ಬಸಪ್ಪನ ಮಗಳು ನಿಂಗಿಯನ್ನು ಮದುವೆಯಾಗಿ ತನ್ನ ಮನೆಗೆ ಕರೆದುಕೊಂಡು ಬಂದಿದ್ದ. ಉಂಚಿ ಕಟ್ಟೆಯ ಗ್ರಾಮದಲ್ಲಿ ಹತ್ತು ಎಕರೆ ಫಲವತ್ತಾದ ಎರೀ ಭೂಮಿ ಮತ್ತು ಒಂದು ಸಣ್ಣ ಮನೆ ಇತ್ತು. ಅದಲ್ಲದೆ ಎಸೆಸೆಲ್ಸಿವರೆಗೂ ಬಂದು ಫೇಲ್ ಆಗಿದ್ದ. ಹಳ್ಳಿಯಲ್ಲಿ ಅಲ್ಪ ಸ್ವಲ್ಪ ಓದಿದವನೆಂದರೆ ಇವನೊಬ್ಬನೆ. ಆದರೆ ಮದುವೆ ಮಾಡಿಕೊಂಡು ಹೆಂಡತಿಯನ್ನು ಕರೆದುಕೊಂಡು ಬಂದ ಮೂರು ತಿಂಗಳೊಳಗೆ ಕಾಲುಬಾಧೆಯಿಂದ ನರಳುತ್ತಿದ್ದ. ಇವನ ತಾಯಿ ಸತ್ತುಹೋದಳು. ಕೂಡಿಟ್ಟ ನಾಲ್ಕು ಸಾವಿರ ರೂಪಾಯಿಗಳಲ್ಲಿ ಮದುವೆಗೆ ಎರಡು ಸಾವಿರ, ಹೊಲಕ್ಕೆ ರಂಟೆ, ಬಿತ್ತನೆ ಅಂತ ಒಂದು ಸಾವಿರ, ಉಳಿದ ಸಾವಿರದಲ್ಲ ತಾಯಿಯ ದಿವಸ, ಹೊಸ ಬಾಳ್ವೆಗೆ ಬೇಕಾಗುವ ಪಾತ್ರೆ, ಪಗಡೆ ಮನೆ ಸಾಮಾನುಗಳಿಗಾಗಿ ಖರ್ಚು ಮಾಡಿದ್ದ.

ಇವನು ಶ್ರದ್ಧೆಯಿಂದ ಹೊಲದಲ್ಲಿ ದುಡಿದು ತಿನ್ನುವ ರೈತ. ಕಟ್ಟು ಮಸ್ತಾದ ಎರಡು ಹೋರಿಗಳಿದ್ದವು. ತನ್ನ ಹೊಲದಲ್ಲಿ ಕೆಲಸವಿದ್ದರೆ ಕಷ್ಟಪಟ್ಟು ಎತ್ತುಗಳೊಂದಿಗೆ ದಣಿಯುತ್ತಿದ್ದ. ಇಲ್ಲದಿದ್ದರೆ ಬೇರೆಯವರ ಹೊಲಕ್ಕೂ ಭಾಡಿಗೆಯಂತೆ ಹರಗಲು, ಮಡಿಕೆ ಹೊಡೆಯಲು ಹೋಗುತ್ತಿದ್ದ, ಎಂದೂ ಖಾಲಿ ಕೂಡುತ್ತಿರಲಿಲ್ಲ. "ಕೈ ಕೆಸರಾದರೆ ಬಾಯಿ ಮೊಸರು" ಎಂಬ ಗಾದೆಗೆ ಒಪ್ಪಿದ ನಿಯತ್ತಿನ ಶ್ರಮಜೀವಿಯಾಗಿದ್ದ.

ನಿಂಗಿಯೂ ಅಷ್ಟೆ ಶ್ರಮಜೀವಿ. ಗಂಡನಿಗೆ ತಕ್ಕ ಹೆಂಡತಿಯಾಗಿದ್ದಳು. ಹೊಲಕ್ಕೆ ಹೋಗುವುದರೊಳಗೆ ಅಡಿಗೆ ಮಾಡಿ, ಬುತ್ತಿ ಕಟ್ಟಿ, ಹೊಲದ ಕೆಲಸಕ್ಕೆ ಹೋಗುವ ಗಂಡನ ಕೈಗೆ ಕೊಡುತ್ತಿದ್ದಳು, ಮತ್ತು ತಾನು ಉಳಿದ ಮನೆಕೆಲಸ ಮಾಡಿ ಮುಗಿಸಿ ಹೊಲಕ್ಕೆ ಹೋಗಿ ಕಳೆ ಕಸಕಡ್ಡಿಗಳನ್ನು ಕಿತ್ತು ಹಾಕುತ್ತಿದ್ದಳು. ಒಟ್ಟಿನಲ್ಲಿ ಇವನ ಸಂಸಾರ ಆನಂದಸಾಗರವಾಗಿತ್ತು. ನೆರೆಹೊರೆಯವರೆಲ್ಲಾ ಇವರ ದುಡಿಮೆ ಕಂಡು ಬೆರಳು ಕಚ್ಚುತ್ತಿದ್ದರು.

ಈ ಸಲ ಮಳೆ ಚನ್ನಾಗಿ ಬಂದು, ಸುಗ್ಗಿ ಒಳ್ಳೆ ಲಾಭ ತಂದಿತ್ತು. ಇದರಿಂದ ಹೊಲದಲ್ಲಿ ಐದು ಸಾವಿರ ರೂಪಾಯಿ ವರಮಾನ ಬಂತು. ಸಿದ್ದನ ಸಂತೋಷಕ್ಕೆ ಪಾರವೇ ಇಲ್ಲ.

ರಾತ್ರಿ ನಿಂಗಿ ಗಂಡನಿಗೆ ಮುದ್ದೆ ಹಾಕುತ್ತಾ "ಏನ್ರಿ ಹೊಲದಲ್ಲಿ ಬಂದ ಐದು ಸಾವಿರ ರೂಪಾಯಿ ಲಾಭದಲ್ಲಿ ನನಗೊಂದು ಸಣ್ಣ ಚಿನ್ನದ ಸರ ಮಾಡಿಸಿ ಕೊಡ್ರಿ, ಮತ್ತೆ ಎತ್ತಿಗೆ ಹತ್ತಿಕಾಳು, ಹುಳ್ಳಿಹಿಂಡಿ ತಗೊಂಡು ಬರ್ರಿ, ಉಳಿದ ಹಣವನ್ನು ಹೊಲದ ಖರ್ಚಿಗಾಗಿ ಇಟ್ಕೊಳ್ರಿ."

ಸಿದ್ದ ಮುದ್ದೆ ತಿನ್ನುತ್ತಾ ಮುಖ ಮೇಲೆತ್ತಿ ನಿಂಗಿ ಕಡೆ ನೋಡಿ "ಚಿನ್ನಕ್ಕಿಂತಲೂ ನೀನೇ ಅದೆಷ್ಟೊ........ಚೆನ್ನಾಗಿದ್ದಿ. ನಿನಗ್ಯಾಕೆ ಆ ಚಿನ್ನದ ಮ್ಯಾಲೆ ಆಸಿ, ನೀನೆಷ್ಟು ತೂಕ ಇದ್ದಿಯೋ ಅಷ್ಟೇ ಕೆ. ಜಿ. ಬಂಗಾರನೇ ನೀನು."

ನಿಂಗಿ ಗಂಡನ ಮಾತಿಗೆ ನಾಚಿ ಮುದ್ದೆಯಾದಳಲ್ಲದೆ, ಮತ್ತೇ ಮುಖ ಗಡಸು ಮಾಡಿಕೊಂಡು "ನನಗೆ ಒಂದೆಳೆ ಬಂಗಾರದ ಸರ ಮಾಡ್ಸಿ ಕೊಡಲೇ ಬೇಕು ನೋಡು. ಇಲ್ಲಿಕಂದ್ರೆ ನಾನು ಬಿಡಲ್ಲ."

"ನಿಂಗಿ ಬಂಗಾರ ರೇಟ್ ಹ್ಯಾಂಗೈತಿ ಅಂತಾರ ನಿನಗೆ ಗೊತ್ತೇನು? ಒಂದು ತೊಲಿಗೆ ಎರಡು ಸಾವಿರ ರೂಪಾಯಿ ಆಗೈತಿ. ನಮ್ಮಂತವರಿಗೆಲ್ಲಾ ಯಾಕೆ ಬಂಗಾರದ ಮೋಹ. ಈನ್ನೊಂದ್ಯಾಕು ವರ್ಷ ಹೋಗಲಿ ತಡಿ. ಒಂದೆಳಿದ್ಯಾಕೆ ಎಂಟೆಳಿ ಸರ ಮಾಡ್ಸಿ ಮೇಲೆ ಒಂದು ಜತೆ ಬಳಿ ಮಾಡುಸ್ತಿನಿ" ಎಂದು ಸಮಾಧಾನದ ನಟನೆ ಮಾಡಿದ.

ಅಷ್ಟೊಂದು ರೊಕ್ಕನಾದರೂ ಇಟ್ಕೊಂಡು ಏನ್ಮಾಡ್ತಿ? ರೊಕ್ಕ ಕೈಯಾಗ ಇದ್ರೆ ಚಲ್ಲಕ್ ದಿಮಿ ದಿಮಿ ಅಂತ ಖರ್ಚು ಮಾಡಿ ಬಿಡ್ತಿವಿ. ಅದಕ್ಕಾಗಿನೆ ಬಂಗಾರ ಕೈಯಾಗಿದ್ರೆ ಒಂದಾಸ್ತಿಯಾಗಿ ಬಿದ್ದಿರತೈತಿ" ಎಂದು ನಿಂಗಿ ಗಂಡನಿಗೆ ಉಪದೇಶ ಹೇಳಿದ್ಲು.

"ಈಗೇನೈತಿ ಬುಡು ಅವಸರ, ರೊಕ್ಕ ಕೈಯಾಗಿದ್ದರೆ ನಾಳೆ ಯಾರ್ನೂ ಕೇಳೋ ಹೊತ್ತು ಬರಲ್ಲಾ, ಇಲ್ಲಕ್ಕಂದ್ರೆ ಅವರಿವರತ್ರ ಪರದಾಡಕಾ ಗೈತ್ಗೊತ್ತಾ"? ಎಂದು ಕೈ ತೊಳೆದು ವಸ್ತ್ರದಿಂದ ಒರ್ಸಿಕೊಂಡು ಗಂಭೀರವಾಗಿ ಹೇಳಿ ಮೇಲಕ್ಕೆದ್ದ.

ಮೊದಲೇ ಮುನುಸುಗೊಂಡಿದ್ದ ಸಿಂಗಿಗೆ ಗಂಡನ ಮಾತಿನಿಂದ ಕಣ್ಣಲ್ಲಿ ನೀರು ತುಂಬಿ ಕೆಂಪಾದ ಕೆನ್ನೆಯ ಮೇಲೆ ಬಳ ಬಳ ಉದುರಿದವು.

ಹೆಂಡತಿ ಕಣ್ಣಲ್ಲಿ ನೀರು ಬಂದದ್ದು ನೋಡಿ ಸಿದ್ದನ ಮನಸ್ಸು ಮೇಣದ ಬತ್ತಿಯೆಂಗೆ ಕರಗಿ ನೀರಾಯಿತು. "ಅದಕ್ಯಾಕಿರಾ ಯಾಕೆ ಅಳ್ತಿಯೇ ನಾಳೆನೇ ಕೊಟ್ಟೂರಿಗೆ ಹೋಗಿ ಸರ ಮಾಡ್ಸಿಕೊಂಡು ಬರ್ತಿನೇಳು" ಸಿಂಗೀನ ಸಮಾಧಾನ ಮಾಡುತ್ತಾ ಅವಳ ಕೆನ್ನೆ ಮೇಲಿನ ನೀರೊರೆಸಿ ಹತ್ರಕ್ಕ ಎಳ್ಕಂಡು ಮುಖವ ತನ್ನೆದೆಗೆ ಒತ್ತಿಕೊಂಡ. "ಅಂಗಾ ನಿನಗೂ ಹೊಸ ಪಂಜಿ ಅಂಗಿ ಕೊಟ್ಟೂರಾಗ ತಗೊಂಡು ಬಾ ಅಂಗ."

"ನನಿಗೇನೂ ಬ್ಯಾಡ ಸಿಂಗಿ, ಮೊನ್ನೆ ಮದ್ವಿಗೊಲ್ಸಿದಾವೇ ಇನ್ನೂ ಎರಡು ಜತೆ ಅವೆ. ಅವು ಹರದ ವ್ಯಾಲೆ ನೋಡೋಣಂತೆ.

"ಪಂಜಿ ಇಲ್ಲಿಕ್ಯಾಂದ್ರ ಅಷ್ಟ ಹೋತು, ಒಂದು ತೆಲಿಕಾಟ್ ಅಂಗಿನಾರ ಹೊಲಿಸಿಗ್ಯಾ."

ಆಗ್ಲಿ ಬಿಡು ನಾನೊಂದಂಗಿನೂ ಆಕಿ ಬರ್ತಿನಿ, ನೀನು ಜಲ್ದಿ ಉಣ್ಣು ಗಡಾನ ಮಲ್ಗನಂತೆ.

....

ಬೆಳಿಗ್ಗೆನೇ ಎದ್ದು ಹೊಲಕ್ಕೆ ಹೋಗಿ ಬಂದು ಮೈ ತೊಳ್ಕೊಂಡು ಮದ್ವೇಗೆ ತಂದಿದ್ದ ಬಿಳೀ ಪಂಜಿ, ಬಿಳಿ ಅಂಗಿ ತೊಟ್ಕೊಂಡು ದೇವರ ಮನಿಗೋಗಿ ಟ್ರಂಕಿನ ಬೀಗ ತೆಗೆದು ಎರಡುವರಿ ಸಾವಿರ ರೂಪಾಯಿ ತಗೊಂಡು ಡ್ರಾಯರ್ ಜೇಬಿನಾಗಿಟ್ಕೊಂಡ.

ನಿನಗೆಂತಾ ಮಾಟದ ಸರ ಬೇಕು ಹೇಳು ಅಂತರ್ದೇ ಮಾಡ್ಲಿಕ್ಕೆ ಹೇಳಿ ಬರ್ತೀನಿ ಕೊಟ್ಟೂರಗ.

ಅಂತಾದ್ದು ಇಂತಾದ್ದು ಅಂತಾದು ಏನೂ ಇಲ್ಲ. ಒಂದೇಳದು ಒಂದ್ಸರ ಕೇಳಗೊಂಡು ಪದಕಾ ಅಂದ್ರೆ ಅಕ್ಸಾಲಿರಿಗೆಲ್ಲಾ ಗೊತ್ತಾಕತಿ.

ನೀನೇನು ಓದ್ಕ್ಯಂಡನಲ್ಲೇನು? ಯಾದು ಹೊಸ ಮಾಟ, ಯಾದು ಹಳೇ ಮಾಟ ಅಂತ ನಿನಗೆಲ್ಲಾ ತಿಳಿತೈತಿ. ತಿಳಿಲ್ಲಕ್ಕಾರೆ, ಈಗಿನ ಹೊಸ ಮಾಟದ ತರ ಮಾಡ್ರಿ, ಅಂತ ಅಕ್ಕಸಾಲಿಂಗೆ ಹೇಳಿದ್ರೆ ಮಾಡಿ ಕೊಡ್ತಾರೆ."

"ಅಕ್ಕಸಾಲಿನ ಕೇಳಿದ್ರೆ ಎಲ್ಲಾ ಹೇಳ್ತಾನೇಳು. ನನಿಗೆ ಅದ್ರದು ಅಷ್ಟೊಂದು ವೈವಾಟಿಲ್ಲ. ಆ ಅಕ್ಕಸಾಲಿ ರಾಮಚಂದ್ರಪ್ಪನ್ನ ಕೇಳಿದ್ರೆ ಗೊತ್ತಾಕತಿ" ಎಂದವನೇ ನಿಂಗಿಯ ಜಡೆ ಎಳ್ದು ಅವಳ ಮುಖ, ತುಟಿ, ಕೆನ್ನೆಗೆ ಮುದ್ದು ಕೊಟ್ಟು "ನಾನು ಬರ್ತಿನಿ ನಿಂಗಿ ಮನೆ ಕಡಿಗೆ ಜ್ವಾಪಾನ" ಅಂತ ಹೇಳಿ ಎರಡೇ ಮೈಲು ದೂರದ ಕೊಟ್ಟೂರಿಗೆ ಹೋದ.

"ಏನು ಸಿದ್ದಪ್ಪ ಏನು ಅಪರೂಪಕ್ಕ ಕೊಟ್ಟೂರು ಪ್ಯಾಟಿಗೆ ಬರ್ತಿದ್ದೀಯಲ್ಲ....?" ಎಂದು ಚನ್ನನಗೌಡ ಕೇಳಿದ್ದಕ್ಕೆ

"ಇಲ್ರೀ ಗೌಡ್ರೆ ಬಾಳ ದಿವಸ ಆಗಿತ್ತು ಈ ಕಡೆ ಬಂದೆ ಇರ್ಲಿಲ್ಲಾ, ಸ್ವಲ್ಪ ಕೊಳ್ಳೋದು ಇತ್ತು, ಅದಕ್ಕಾದ್ರೂ ಬರ್ಲೆ ಬೇಕಲ್ಲ ಗೌಡ್ರೆ."

"ನೀನೆನಪ ಐದಾರು ಸಾವಿರ ರೂಪಾಯಿ ಸುಗ್ಗಿ ಮಾಡಿ ಏನಾದರೂ ಕೊಳ್ತೀಯಪ್ಪ" ಎಂದು ಸಿದ್ದಪ್ಪನಿಗೆ ಶಭಾಸ್‌ಗಿರಿ ಹಾಕಿದ ಚೆನ್ನನಗೌಡ.

"ಗೌಡ್ರೆ ನನ್ನ ಹೆಂಡತಿಗೆ ಒಂದು ಬಂಗಾರದ ಸರ ಮಾಡ್ಸಬೇಕಾಗೈತಿ ಯಾರು ಚಲೋ ಮಾಡ್ತಾರೆ ಅಂತ ನಿಮಗೆ ಗೊತ್ತಿರಬೇಕಲ್ಲ.

"ಕೊಟ್ಟೂರಾಗೆ ಅಕ್ಕಸಾಲಿ ರಾಮಚಂದ್ರಪ್ಪನ್ನ ಬಿಟ್ರೆ ಬೇರೆ ಯಾರದರೆ ಅಷ್ಟು ಚಲೋ ಮಾಡೋರು. ಆತನತ್ರನೇ ಹೋಗಬೇಕು. ಸಿದ್ದ ಮತ್ತು ಚನ್ನನಗೌಡ ಅಕ್ಕಸಾಲಿ ರಾಮಚಂದ್ರಪ್ಪನ್ನ ಅಂಗಡಿಗೆ ಹೋಗಿ ಎಲ್ಲಾ ವಿಚಾರ ಮಾಡಿ, ಹೊಸ ಮಾಟದ ಸರಕ್ಕೆ ಎರಡು ಸಾವಿರ ರೂಪಾಯಿ ಅಡ್ವಾನ್ಸ್ ಕೊಟ್ಟು ಸೀದ ಅಡ್ಡೋಲೇರ ಹೋಟ್ಲಿಗೆ ಹೋಗಿ ದ್ವಾಸಿ ತಿಂದು ಚಾ ಕುಡಿದ್ರು. ಅಂಗಾನೆ ಸುಮೇರ್‌ಮಲ್‌ನ ಜವಳಿ ಅಂಗಡಿಗೆ ಹೋಗಿ ಒಂದು ತೆಲಿಕಾಟ್ ಬಟ್ಟೆ ತಗೊಂಡು ರಾಟಿ ಪರಶುರಾಮಪ್ಪನ ಹತ್ತಿರ ಹೊಲಿಯಾಕ ಕೊಟ್ಟು, ಚೆನ್ನನಗೌಡ್ರಿಗೆ ಬರ್ತೀನಂತ ಹೇಳಿ, ಸಿದ್ದ ರೇಣುಕಾ ಟಾಕೀಸಿನ ಕಡೆಗೆ ನಡೆದ. ರಾಜಕುಮಾರನ ಹಾವಿನ ಹೆಡೆ ಸಿನಿಮಾ ನಡೆದಿತ್ತು. ಹೊರಗಡೆ ಗ್ವಾಡಿಗೆ ಅಂಟಿಸಿದ್ದ ಸಿನಿಮಾದ ವಾಲ್‌ಪೋಸ್ಟರ್ ನೋಡುತ್ತಾ ನಿತ್ಕಂಡ.

"ಏನು ಸಿದ್ದಣ್ಣಾ ಯಾವಾಗ ಬಂದಿ. ಉಣ್ವಿ ಚಂದ್ರನ್ನ ನೋಡಿದಂಗಾತಲ್ಲ ನಿನ್ನ ಕೊಟ್ಟೂರ್ನಾಗೆ" ಎಂದು ಹೇಳಿ ಬೆನ್ನು ತಟ್ಟಿದ್ರು ಉಂಚಿ ಕಟ್ಟೆಯ ತಿಂದಪ್ಪ ಮೇಷ್ಟ್ರು.

"ಏನ್ಸಾರ್ ಯಾವಾಗ ಬಂದಿದ್ರೀ?" ಸಿದ್ದ ತಿರುಗಿ ನೋಡಿ ಮೇಷ್ಟ್ರನ್ನು ಕೇಳಿದ.

''ಸಾಲಿ ಮುಗಿದ್ ಕೂಡ್ಲೇ ಸೈಕಲ್ ಹಾಕ್ಕೊಂಡು ನಿನಿಗೊತ್ತಿದ್ದಾಂಗ ಕೊಟ್ಟೂರಿಗೆ ಬರದೇ ನಮ್ಮ ಕೆಲ್ಸ."

''ಈ ಓ.ಸಿ. ಚಟಕ್ಕೆ ಹಲ್ಲತ್ತಿ, ಸಾಯಂಕಾಲ ಆತು ಅಂದ್ರೆ, ಹತ್ತಿದ್ದೆನಾ ಸೈಕಲ್ ನಂಬರ್ ಹಿಡಿಯೋಕೆ."

''ಓ.ಸಿ. ಎಗರಿದ್ರೆ ಒಂದು ರೂಪಾಯಿಗೆ ಎಂಬತ್ತು ರೂಪಾಯಿ ಕೊಡ್ತಾರಂತ, ಹೌದೇನ್ರೀ?"

ಇದೇನ್ ಸಿದ್ದಪ್ಪ ಹೊಸದಾಗಿ ಕೇಳ್ತಿಯಲ್ಲ ನಿನಗೇನು ಗೊತ್ತಿಲ್ಲೇನು?

"ನನಿಗದ್ರು ಚಟ ಇಲ್ರೀ.... "

"ಹಂಗ್ಯಾಕಂತಿ ಸಿದ್ದಣ್ಣ ಇದರ ಹುಚ್ಚಿಗೆ ಎಲ್ಲಾ ಹಳ್ಳಿ ಮಂದಿ ಕುಣಿತಾರೆ ಸಾಯಂಕಾಲ ಆತಪ್ಪ ಅಂದ್ರೆ ಕೊಟ್ಟೂರಿಗೆ ಬಂದು, ಅಂಗಡಿ ಅಂಗಡಿ ತಿರುಗಿ ನಂಬರ್ ಕೇಳಿ ಚಾಲೆಂಜ್ ನಂಬರ್‌ಗೆ ಕಟ್ಟಿ ಒಂದು ರೂಪಾಯಿಗೆ ಎಂಭತ್ತು ರೂಪಾಯಿ ಗಿಟುಸ್ತರ ನಿನಗೆ ಗೊತ್ತಿಲ್ಲೇನು? ಮೊನ್ನೆ ಹನ್ನರಡನೇ ನಂಬರ್‌ಗೆ ಮೊಸರು ಮಾರ ಕೊಟ್ರವ್ವ ನಾಕು ರೂಪಾಯಿ ಹಾಕಿ ಮೂನ್ನೂರ ಇಪ್ಪತ್ತು ರೂಪಾಯಿ ಹೊಡದ್ಲು.

ಅದಕ್ಕಿನ್ನೂ ಹಿಂಚೆ ಈ ಊರು ಗ್ರಾಮಸೇವಕ ನಾಗಪ್ಪ ಎರಡುನೂರು ರೂಪಾಯಿ ಹಾಕಿ, ಹದಿನಾರು ಸಾವಿರ ಹೊಡ್ದು ಎರಡು ಎಕರೆ ಮಾಗಾಣಿ ತಗಂಡಾನೆ."

ಹೌದಾ! ಎಂದ ಆಶ್ಚರ್ಯದಿಂದ. ನಾನು ಒಂದು ನಂಬರಿಗೆ ಹಾಕಿ ಎರಡು ಎಕರೆ ಗದ್ದೆ ಯಾಕ ತಗಬಾರ್ದು ಅನಿಸಿತು.

"ಬಕ್ಕಾ ದಾಗ ರೊಕ್ಕಿದ್ರೆ ನೀನು ಒಂದು ನಂಬರಿಗೆ ಹಾಕು. ಒಂದು ಚಾನ್ಸ್ ನೋಡ್ಬಂತೆ, ನೀನಾಕ್ತಿಯಂದ್ರೆ ಒಳ್ಳೆ ನಂಬರ್ ಹಿಡಿಯರಿದ್ದಾರೆ. ಅವರ ಹತ್ತಿರ ಹೋಗಿ ಒಂದು ಚಾಲೆಂಜ್ ಫಿಗರ್ ಕೇಳನಂತೆ."

"ಯಾರ್ರೀ ಅವ್ರು ಅಂತ ನಂಬರ್ ಹಿಡಿಯೋರು ಮೇಷ್ಟ್ರೇ, ಈ ಕೊಟ್ಟೂರಾಗ."

"ಕಡ್ಲಿ ಕೊಟ್ರಪ್ಪ, ಉಮಾಪತೆಪ್ಪ ಮೇಷ್ಟ್ರ, ಪತ್ತೆ ಇನ್ನೊಬ್ರು ಕಾಲೇಜ್ ಲಚ್ಚರ್ ಅದಾರೆ. ಇವರೆಲ್ಲಾ ಒಳ್ಳೆ ನಂಬರ್ ಹಿಡಿತಾರ. ಬಾ ಚಾ ಕುಡಿದೋಗಿ ಅವರ್ನ ಕಾಣನಂತೆ.

ಸಿದ್ದ ಜೇಬಿನಲ್ಲಿ ಉಳಿದಿದ್ದ ನಾಲ್ಕುನೂರು ರೂಪಾಯಿಗಳನ್ನ ಎಲ್ಲರೂ ಹೇಳಿದ ಚಾಲೆಂಜ್ ಫಿಗರ್‌ಗೆ ಹಾಕಿ, ಹಾವಿನ ಹೆಡೆ ಸಿನಿಮಾಕ್ಕೆ ಹೋದ. ಸಿನಿಮಾ ಬಿಟ್ ಮ್ಯಾಲೆ ಹೊರಗೆ ಬಂದು ನಂಬರ್ ಕೇಳಿದ ನಂಬರ್ ಫೇಲಾಗಿತ್ತು, ಮೋರೆ ಒಣ್ಗಿಸಿಕೊಂಡು ಉಂಚಿ ಕಟ್ಟೆ ದಾರಿ ಹಿಡಿದ.

"ಇಷ್ಟೊತ್ತುಯಾಕ್ರಿ ಮಾಡಿದ್ರೀ ಜಲ್ದಿ ಬರಬಹುದಿತ್ತಲ್ಲ" ಎಂದು ಹೆಂಡತಿ ಬಾಗಿಲು ತೆರೆಯುತ್ತಾ ಕೇಳಿದಳು. ನಿಂಗಿಗೆ ಓ. ಸಿ. ಕಟ್ಟಿದ ಹಣದ ವಿಚಾರ ತಿಳಿಸಲಿಲ್ಲ.

"ಇಲ್ಲ ನಿಂಗಿ ನಾಲ್ಕಾರಂಗಡಿ ತಿರುಗಿ ಸರಕ್ಕ ಆಡ್ರು ಕೊಟ್ಟು, ಅಂಗಿ ಬಟ್ಟೆ ತಗೊಂಡು ಹೊಲಿಯಾಕೆ ಹಾಕಿ ಬರೋ ಅಷ್ಟೊತ್ತಿಗೆ ಹೊತ್ತಾಗಿ ಬಿಡ್ತು ನೋಡು."

"ನನಿಗೆ ಒಳ್ಳೇ ಹುಡ್ಗ ಸಿಕ್ಕ ನೋಡಾ" ಎಂದು ಸಂತೋಷದಿಂದ ಚಟಕ್ಕಂತಾ ಲಟಗಿ ಮುರಿದಳು.

ಅವನಿಗೆ ಇದ್ಯಾವುದರ ಪರಿವೇ ಇರಲಿಲ್ಲ, ಹೋದ ರೊಕ್ಕವನ್ನ ಮರಳಿ ಪಡೆಯುವದು ಹೇಗೆ ಎಂದು ಯೋಚಿಸುತ್ತಲೇ ಇದ್ದ.

"ಹಂಗ್ಯಾಕೆ ಕಲ್ಲು ನಿತ್ಕಂಡಗ ನಿತ್ಕಂಡಿ ಕಾಳು ರೊಟ್ಟಿ ಮಾಡಿನಿ. ಉಣ್ಣು ಬರ್ರೀ ಅಂದಾಗೆ ಕೊಟ್ರೂರಿನಿಂದ ನನಿಗೆ ತಿನ್ನಾಕ್ ಏನ್ ತಂದಿ?" ಎಂದು ನಿಂಗಿ ಕೇಳಿದಾಗ ಸಿದ್ದನಿಗೆ ಒಂದು ಕ್ಷಣ ಕಸಿವಿಸಿಯಾಯ್ತು.

"ಇಲ್ಲ ನಿಂಗಿ ಸರ ಮಾಡ್ಸ ವಿಚಾರದಾಗ ಎಲ್ಲಾ ಮರೆತುಬಿಟ್ಟೆ.

"ಹೋಗ್ಲಿ ನಡಿ ಸರ ಒಂದಾರ ಮಾಡ್ಸಿದೆಲ್ಲಾ ಅಷ್ಟೆ ಸಾಕು" ಎಂದು ಒಮ್ಮೆ ಸಂತೋಷದ ನಗೆ ಚಿಮ್ಮಿ ಗಂಡನ ಕಾಲಿಗೆ ನೀರು ಕೊಟ್ಟಳು. ಹಾಸಿಗೆಯಲ್ಲಿ ಮಲಗಿದ್ದಾಗ ಸಿದ್ದನಿಗೆ ನಾಳೆ ಇನ್ನೊಂದು ಚಾಲೆಂಜ್ ನಂಬರ್ ಹಿಡಿದು ಓ.ಸಿ. ಗಿಟ್ಟಿಸಬೇಕೆಂಬ ಯೋಚನೆಯಲ್ಲೇ ಮುಳುಗಿದ್ದ.

ದಿನೇ ದಿನೇ ಓ. ಸಿ. ಗಾಗಿ ಟ್ರಂಕಿನಲ್ಲಿಟ್ಟಿದ್ದ ಎರಡುವರೆಸಾವಿರ ಹಾಳು ಮಾಡಿದ. ಸಿಂಗಿಗೆ ಈ ವಿಷಯ ತಿಳಿದು ಗಂಡನನ್ನು ಸುಧಾರಿಸಲು ಹೊರಟು ದಿನಾಲು ಏಟು ತಿನ್ನುತ್ತಿದ್ದಳು. ಅತ್ತು ಅತ್ತು ಸಿಂಗಿ ಕಣ್ಣು ಒಳಕೆ ಹೋದ್ವು. ನಾನ್ಯಾಕರ ಸರ ಮಾಡ್ಸಕ ಕಳಿಸಿದೆನೇನೋ ಕೊಟ್ಟೂರಿಗೆ ಎಂದು ದಿನಾ ಕಣ್ಣೀರಿಡಹತ್ತಿದಳು. ಕೆಂಪಾಗಿ ಉಬ್ಬಿದ್ದ ಅವಳ ಕೆನ್ನೆಗಳು ಕೂಡ ಒಳಕ್ಕೆ ಹೋದವು.

ಗಂಡನನ್ನು ಹೇಗೆ ತಿದ್ದಬೇಕೆಂಬುದೇ ಸಿಂಗಿಗೆ ತಿಳಿಲೇ ಇಲ್ಲ. ತನ್ನ ತಂದೆ ತಾಯಿಗಳನ್ನು ಮಂಗಾಪುರದಿಂದ ಕರೆಸಿ ಬುದ್ಧಿ ಹೇಳಿಸಿದರೂ ಓ. ಸಿ. ಯ ಆಟ ಬಿಡಲಿಲ್ಲ.

ಹುಚ್ಚನಾಗಿ ಓ. ಸಿ. ಆಡಹತ್ತಿ ಸಾಲಂದಿಗನಾದ. ಇರುವ ಎರಡು ಎತ್ತುಗಳನ್ನು ಮಾರಿದ. ಆದರೂ ಅವನ ಆಟದ ದಾಹ ತೀರಲಿಲ್ಲ. ಹತ್ತು ಎಕರೆ ಫಲವತ್ತಾದ ಎರಿ ಹೊಲವನ್ನು ಜಾಗಟಗೇರಿಯ ಹಾಲಪ್ಪ ಸಾಹುಕಾರನಿಗೆ ಖಂಡಿತ ಮಾಡಿಸಿಕೊಟ್ಟ. ಕೊಟ್ಟೂರಲ್ಲಿ ಮಾಡಿಸಲಿಕ್ಕೆ ಹಾಕಿದ ಚಿನ್ನದ ಸರವನ್ನು ಒಮ್ಮೆಯಾದರೂ ಸಿಂಗಿ ಕಣ್ತುಂಬ ನೋಡಲೇಯಿಲ್ಲ. ಅದನ್ನೂ ಕೂಡ ಅಲ್ಲೇ ಮಾರಿಕೊಂಡಿದ್ದ. ಮನೆಯಲ್ಲಿರುವ ಸಣ್ಣ ಪುಟ್ಟ ಪಾತ್ರೆ, ಚಂಬಿಗೆಗಳನ್ನೂ ದಿನ ದಿನಕ್ಕೆ ಮಾರುತ್ತಾ ಹೋದ.

ಯಾವಾಗ ನೋಡಿದರೂ ಕೊಟ್ಟೂರಾಗಿರ ಕ್ಲಬ್ಬುಗಳಲ್ಲಿ ಓ.ಸಿ. ಚಾರ್ಟು ಹಿಡಿದು ನಂಬರ ತಗಿತಾ ಕುಂತುಬಿಡುತ್ತಿದ್ದ. ಹಳ್ಳಿನೂ ಮರೆತ, ತನ್ನ ಸಿಂಗಿನೂ ಮರೆತ. ಒಣ ಮೋರೆ ಮಾಡಿಕೊಂಡು, ಗಡ್ಡ ಬಿಟ್ಕೊಂಡು, ಕೊಟ್ಟೂರಾಗೆ ನಾಯಿ ತಿರಿಗ್ಯಾಡಿದಂಗ ತಿರಿಗ್ಯಾಡಹತ್ತಿದ.

ಇತ್ತ ಹೊಸದಾಗಿ ಮದುವೆಯಾಗಿ ನೂರು ಆಸೆಗಳನ್ನು ಹೊತ್ತುಕೊಂಡು ಬಂದ ಸಿಂಗಿ ಒಂಟಿಯಾಗಿ ಸಂಸಾರ ಸುಖವಿಲ್ಲದೇ ಒಳಗೊಳಗೇ ಕೊರಗಹತ್ತಿದಳು. ದಿನಾಲೂ ಗಂಡನ ದಾರಿ ಕಾದು ಕಾದು ಸಿಂಗಿ ಬೇಸತ್ತಳು.

ಹಗಲು ರಾತ್ರಿ ಕಣ್ಣೀರು ಹಾಕುತ್ತಾ, ಹಾಳಾದ ಗಂಡ್ಸರು, ಹಿಂಗ್ಯಾಕೆ ಮಾಡ್ತಾರ ಏನೋ? ಏನಾದ್ರು ಆಡ್ಕ್ಯಂಡು ಹಾಳಾಗಿ ಹೋಗ್ಲಿ, ಮನೆಗೆ ಹೊಸ್ತಾಗಿ ಮದುವೆಯಾದ ಹೇಂತಿ ಇದಾಳಾ ಸತ್ತಾಳಾಂತ ನೋಡೋದು

ಬ್ಯಾಡೇನು ? ಯ್ಯಾಕರ ಮದ್ವಿ ಮಾಡ್ಕೊಬೇಕಿತ್ತೇನೋ ?" ಎಂದು ಕೊರಗುತ್ತಾ ವಿರಹದ ನೋವನ್ನು ನುಂಗಿಕೊಂಡೇ ಇದ್ದಳು.

ಸಿದ್ದ ಮನೆಯಲ್ಲಿರೋ ಕಾಳುಕಡಿಗಳನ್ನೆಲ್ಲಾ ಮಾರಿಬಿಟ್ಟಿದ್ದ. ಇದರಿಂದ ಮನೆಯಲ್ಲಿ ನಿಂಗಿಯ ಊಟಕ್ಕೆ ಕೂಡ ಗತಿ ಇಲ್ಲದಂಗೆ ಆಗಿತ್ತು, ಹೊಟ್ಟೆ ಪಾಡಿಗೆ ಅವರಿವರ ಹೊಲಕ್ಕೆ ಕೂಲಿ ಹೋಗಹತ್ತಿದಳು.

ಚೆನ್ನನಗೌಡನ ತೋಟದಲ್ಲಿ ಕಳೆ ತೆಗೆಯುತ್ತಿದ್ದಾಗ ಅಲ್ಲೇ ಇದ್ದ ಚೆನ್ನನಗೌಡ ನಿಂಗಿನ ಕಂಡು "ಏನು ನಿಂಗವ್ವ ನಿನ್ನ ಗಂಡ ಈಗಾದರೂ ಓ.ಸಿ. ಆಡೋದು ಬಿಟ್ಟಾನಾ ಹ್ಯಾಂಗ."

"ಎಲ್ಲಿ್ರೀ ಗೌಡ್ರ...... ಅದ್ಯಾಂಗ ಬಿಡ್ತಾನೆ ? ಅದರ ಪಿತ್ತ ನೆತ್ತಿಗೇರೇತಿ, ಸದ್ಯಾ ಬಿಡಾ ಸ್ಥಿತಿಯಾಗಿಲ್ಲ."

"ಅವನೊಬ್ಬನೇ ಯಾಕ ತಗ ನಿಂಗವ್ವ ಈ ದೇಶನೇ ಓ. ಸಿ. ಆಡಕತ್ತಿ ಕೆಟ್ಟೋಗ್ಯತಿ."

"ನಮ್ಮ ಸಂಸಾರಂತು ಕೆಟ್ಟು ಕಸಬರಿಗೀಗಿಂತ ಕಡಿಯಾಗೊತು" ಎಂದು ಸೊರಕ್ಕೆಂದು ಮೂಗೇರಿಸಿ ಮುಖಕ್ಕೆ ಸೆರಗು ಮುಚ್ಚಿಕೊಂಡು ದುಃಖಿಸಿ ದುಃಖಿಸಿ ಅತ್ತಳು. ಇರಲಿ ಬಿಡು ನಿಂಗವ್ವ ಯಾಕ ಅಳತೀ ಎಲ್ಲಾದಕ್ಕೂ ದೇವರ ಆದಾನ.

ಹುಲ್ಲಿನ ಮೆದೆ ಹೊತ್ತು ಮ್ಯಾರಿಗೆ ಹಾಕುವಾಗ ಎದೆ ಮ್ಯಾಲಿನ ಸೆರಗು ಕೆಳಗೆ ಜಾರಿತು. ಅವಳ ದುಂಡಾದ ಮೊಲೆಗಳು ಚೆನ್ನನಗೌಡನ ಕಣ್ಣುಗಳನ್ನ ಕುಕ್ಕಿದವು. ಮೆತ್ತಗೆ ನಿಂಗಿ ಕಡೆಗೆ ನೋಡಿ ಹಲ್ಲು ಕಿಸ್ದ.

ನಿಂಗಿ ಸರಕ್ಕನೆ ಎದೆ ಮೇಲಿ ಸೆರಗು ಹಾಕ್ಯಂಡು ಆಳುಗಳು ಕೆಲಸ ಮಾಡುತ್ತಿದ್ದ ಕಡೆಗೆ ಹೋದಳು.

ಸಾಯಂಕಾಲವಾದೊಡನೇ ಎಲ್ಲಾ ಕೂಲಿ ಆಳುಗಳು ಹೊರಟು ನಿಂತು "ಗೌಡ್ರೆ ನಾಳೇನರ ಕೂಲಿ ಐತ್ರಾ" ಎಂದು ಕೇಳಿದರು.

ಚೆನ್ನನಗೌಡ ಆಳುಮಗ ದೇವ್ಯಾನ ಕಡಿಗೆ ತಿರುಗಿ "ಏನಲೇ ದೇವ್ಯಾ ಇನ್ನೆಷ್ಟು ಆಳಿಗೆ ಆಗ್ತತಿ." "ಇನ್ನೆರಡು ಆಳಿಗೆ ಸಾಕಾಗ್ತತ್ರಿ ಗೌಡ್ರೆ ನಾನೊಬ್ಬ ಹ್ಯಾಂಗರ ಇದಿಸಿ. ಇನ್ನೊಬ್ಬರನ್ನ ಯಾರ್ಗರ ಬಾ ಅಂತ ಹೇಳಿ ಬಿಡ್ರಿ" ಎಂದ ದೇವ್ಯಾ.

ಗೌಡ ಸಿಂಗಿ ಕಡಿಗೆ ಓರೆ ನೋಟ ಬೀರಿ ಮುಸಿ ಮುಸಿ ನಗುತ್ತಾ "ಅಂಗಾರ ಸಾಳೆ ನೀನೊಬ್ಬಳೇ ಬಂದುಬಿಡು ಸಿಂಗವ್ವಾ."

"ಆಗಲ್ರೀ ಗೌಡ್ರೆ" ಎಂದು ಸಿಂಗಿ ಮನೆಕಡೆಗೆ ನಡೆದಳು. ಸಿಂಗಿ ಕುರ್ಚಿಗಿ ಹಿಡಿದು ಗೌಡನ ತೋಟದಾಗೆ ಕಳೆ ತೆಗೆತಿದ್ಲು.

"ದೇವ್ಯಾ ಇವತ್ತು ಗುರುವಾರ ಕೊಟ್ಟೂರಿಗೆ ಹೋಗಿ ಸಂತಿ ಮಾಡಿಕೊಂಡು ಬರಬೇಕಲ್ಲಲೇ ?" ಗೌಡ್ರು ದೇವ್ಯನನ್ನು ಕೇಳಿದರು.

"ಹೌದ್ರಿ ಗೌಡ್ರೆ ಈ ವಿಷಯನಾ ಅಮ್ಮಾರು ಮನೆಗೆ ಬೆಳಿಗ್ಗೆನ ಹೇಳಿದ್ರು" ತಲಿ ಕೆರಕಂತಾ ಹೇಳಿದ.

"ತಗ ಇದನ್ನ ತಗಂಡೋಗಿ ಸಂತಿ ಮಾಡ್ಕೊಂಡು ಬಾ" ಎಂದು ಇಪ್ಪತ್ತು ರೂಪಾಯಿ ನೋಟು ಕೊಟ್ಟ ಗೌಡ. ಏನೇನು ಬೇಕಂತಾ ಮನೆಗೆಲ್ಲಾ ಕೇಳ್ಕೊಂಡು ಹೋಗು."

"ಹೂನ್ರಿ ಗೌಡ್ರ" ಎಂದು ದೇವ್ಯಾ ಇಪ್ಪತ್ತು ರೂಪಾಯಿ ಇಸ್ಕಂಡು ಮನಿ ಕಡಿಗೆ ನೆಡದ.

ಅತ್ತ ಸಿಂಗಿ ಒಬ್ಬಳೇ ಕಳೆ ತೆಗೆಯುತ್ತಿದ್ದಳು. ಇತ್ತ ಗೌಡನ ತವಕ ಹೆಚ್ಚಾಯಿತು.

ಗೌಡ ಪಂಪಸೆಟ್ ಹಾಕಿದ ರೂಮಿನಲ್ಲಿ ಕುಂತು ಕುಡುಗೋಲು ತಗಂಡು ಅಲ್ಲಿ ಬಿದ್ದ ಕಾಯಿರಾಶಿಯಲ್ಲಿ ಎರಡು ಎಳೆ ಕಾಯಿಗಳ ಆರಿಸಿ ಕೆತ್ತಿ "ಏ ಸಿಂಗವ್ವಾ ಬಾ" ಎಂದು ಗೌಡ ಕೂಗಿದ.

"ಯಾಕ್ರೀ ಗೌಡ್ರೇ........" "ತಗ ಬಾ ಬಿಸಿಲು ಬಾಳಾ ಐತಿ ಎಳೆಗಾಯಿ ನೀರು ಕುಡಿ"

"ಬ್ಯಾಡ್ರಿ ಗೌಡ್ರ" ಎಂದ್ಲು ಸಿಂಗಿ.

"ಇರ್ಲಿ ಬಾ ಸಿಂಗವ್ವಾ, ಕುಡಿ ಬಿಸಿಲು ಬಾಳಾ ಐತಿ." "ನಮಗ ಆಸೆಲ್ಲಾ ಯಾಕ್ರೀ ಗೌಡ್ರು........ ಬ್ಯಾಡ."

"ತಗ ಬಾ ಅಂದ್ರೆ ತಗಬೇಕು, ಕಾಯಿ ಹಾಲು ಒಳ್ಳೆ ಆಸ್ನಬಾರ್ದು" ಒತ್ತಾಯಪೂರ್ವಕವಾಗಿ ಗತ್ತಿನಿಂದ ಕರೆದ.

ಒತ್ತಾಯಕ್ಕೆ ಮಣಿದು ಪಂಪಸೆಟ್ ರೂಮಿಗೆ ಬಂದು ಗೌಡನ ಕೈಯಿಂದ ಕಾಯಿ ಇಸಿದುಕೊಳ್ಳುವಾಗ ಗೌಡ ಬೇಕಂತಲೇ ಅವಳ ಕೈ ಮುಟ್ಟಿದ. ನಿಂಗಿ ಎರಡೂ ಕೈಗಳನ್ನೆತ್ತಿ ಕಾಯಿಗೆ ಬಾಯಿ ಕಚ್ಚಿದಳು. ಜುಳ್ ಎಂದು ಕಾಯಿ ನೀರು ಅವಳ ಎದೆ ಮೇಲೆ ಚಲ್ಲಿ ಕುಪ್ಪಸವನ್ನು ತೋಯಿಸಿದಾಗ ಅವಳ ಮಲೆ ಗಳನ್ನು ನೋಡಿ ಗೌಡನ ಕಣ್ಣು ಗರ್ ಎಂದು ತಿರುಗಿದವು. ಗಕ್ಕನೇ ಅವಳ ಸೊಂಟಕ್ಕೆ ಕೈ ಹಾಕಿದ.

''ಬಿಡ್ರೀ ಗೌಡ್ರ, ಬಿಡ್ರಿ ಗೌಡ್ರ'' ಎಳಗಾಯಿ ಆಚೆ ಒಗೆದು ಕೊಸರಿ ಕೊಳ್ಳಹತ್ತಿದಳು.

''ಎಷ್ಟು ಚೆಂದಾಗಿ ಕಾಣ್ತಿ ನಿಂಗಿ, ನಿನ್ನಂತವಳು ಸಿಕ್ಕಾಗ ಅಂಗೆ ಬಿಡಕಾಗುತ್ತಾ'' ತೋಳ ಕುರಿ ಹಿಡಿದಂಗ ಗೌಡ ಅವಳನ್ನು ಬಿಗಿಯಾಗಿ ತೋಳಿನಲ್ಲಿ ಸೆರೆ ಹಿಡಿದ.

ಈ ಸುಖವನ್ನು ನಿಂಗಿ ಅವಳ ಗಂಡನಿಂದ ಪಡೆದು ಅದೆಷ್ಟೋ ದಿನಗಳಾಗಿದ್ದವು.

''ಬಿಡ್ರಿ ಗೌಡ್ರ ಎಂದು ಕೊಸರಿಕೊಳ್ಳಹತ್ತಿದಾಗ, ಗೌಡ ಇನ್ನೊಷ್ಟು ಬಿಗಿ ಹಿಡಿದ. ದೇಹ ಕಾವೇರಿತು. ಬಹು ದಿನದ ವಿರಹದಲ್ಲಿ ತಣ್ಣಗಾಗಿದ್ದ ಬಯಕೆಯ ಹಾಲು ಗೌಡನ ಮೈ ಬಿಸಿಗೆ ಕಾದು, ಕುದಿಯ ಹತ್ತಿ ಉಕ್ಕಿ ಕೆಳಕ್ಕೆ ಚೆಲ್ಲಿತು.

ನಲವತ್ತೊಂದಕ್ಕೆ ಸಿದ್ದ ಒಂದು ರೂಪಾಯಿ ಬರೆಸಿದ್ದ, ಆ ದಿನ ನಂಬರ್ ಎಗರಿತ್ತು. ಇದೇ ಮೊದಲ ಸಾರಿ ಅವನಿಗೆ ಓ.ಸಿ. ಹತ್ತಿದ್ದು. ನಿಂಗ ಸರ್ರನೇ ಓ.ಸಿ. ಕಂಪನಿಯ ವೆಂಕಣ್ಣನ ಮನೆಗೆ ಓಡಿದ.

ವೆಂಕಣ್ಣನ ಸುತ್ತಲೂ ಇರ್ಪಣ್ಣ, ಗುಂಡಣ್ಣ, ಕೊಟ್ರಣ್ಣ ಕುಳಿತು ಕೇಕಿ ಹಾಕಿ ಯಾವುದೋ ವಿಷಯ ಮಾತಾಡುತ್ತಾ ನಗುತ್ತಿದ್ದರು. ಟೇಬಲ್ಲಿನ ಮೇಲೆ ಬ್ರಾಂದಿ ಬಾಟಲುಗಳು, ಚಿಕನ್ ಫ್ರೈರ ತಟ್ಟೆ, ಬುಗ್ಗಿ ಪೊಟ್ಟಣ, ಸಿಗರೇಟು ಪ್ಯಾಕುಗಳು ಹರಡಿದ್ದವು. ರೂಮಿನ ಒಳಗಡೆ ಹೆಂಗಸರ ಬಳೆ ಶಬ್ದ ಕೇಳುತ್ತಿತ್ತು.

ಸಿದ್ದ ಬಾಗಿಲ ಹತ್ತಿರ ಹೋಗಿ ನಿಂತ್ಕೊಂಡು ತಲೆ ಕೆರೆದು ವೆಂಕಣ್ಣ ಗಲಾಟೆ ಯಲ್ಲಿ ಇದ್ದರೂ ಸಿದ್ದನ ಕಡೆಗೆ ತಿರುಗಿ

''ಏನ್ ಸಿದ್ದಾ ಬಂದೀ'' ಎಂದ.

''ಇಲ್ರೀ ದಸೆರಾ ನಲವತ್ತೊಂದಕ್ಕೆ ಒಂದು ರೂಪಾಯಿ ಹಾಕಿದ್ದೆ....'' ತಲೆ ಕೆರೆದುಕೊಂಡ ಸಿದ್ದ.

"ಹಂಗೇನು !.... ಈಗಲೇ ದುಡ್ಡು ಬೇಕಾ ?"

"ಹೌದ್ರಿ ಎಂದ ಸಿದ್ದ."

"ಹೇ ಗುಂಡಣ್ಣ ಅವನ ಹತ್ರ ಇರ ಚೀಟಿ ಇಸ್ಕಂಡು ಎಂಭತ್ತು ರೂಪಾಯಿ ಕೊಟ್ಟು ಕಳಿಸು, ಈಗಲೇ ರಾತ್ರಿ ಹನ್ನೆರಡು ಗಂಟೆ ಆಗೇತಿ ಏನಾದರೂ ಸಿನಿಮಾ ಪತ್ರ ತಿಂದು ಊರಿಗೆ ಹೋಗ್ಲಿ ನಮ್ಮ ಸಿದ್ದಪ್ಪ'' ಎಂದು ಒಣ ಸಹಾನುಭೂತಿಯ ಮಾತುಗಳನ್ನಾಡಿದ.

ದುಡ್ಡು ಇಸ್ಕಂಡು ಸಿನಿಮಾದ ಕಡೆಗೆ ಹೋಗಿ ಒಂದು ರೂಪಾಯಿ ಜಿಲೇಬಿ, ಒಂದು ರೂಪಾಯಿ ಬುಗ್ಗಿ, ಒಂದು ರೂಪಾಯಿ ಮೆಣಿಸಿನಕಾಯಿ ತಗೊಂಡು ತನ್ನ ನಿಂಗಿಗೆ ತಿನಿಸಿ ಸಮಾಧಾನ ಮಾಡಬೇಕಂತ ತಡಮುರಿಸಿ ಉಂಚಿ ಕಟ್ಟೆಗೆ ಓಡಿದ. ದಾರಿಯಲ್ಲಿ ಸಿಂಗಿನ ನೆನೆಸಿಕೊಂಡ, "ಅದೆಷ್ಟು ದಿವಸ ಆಯ್ತಲ್ಲ ಸಿಂಗಿ ಹತ್ರ ಸರಿಯಾಗಿ ಮಾತಾಡದೆ, ಇವತ್ತಾದ್ರೂ ಬಾಯ್ತುಂಬ ಸಿಂಗಿ ಅಂತ ಕರೆದು ಇನ್ಮ್ಯಾಲೆ ಓ.ಸಿ. ಆಡೋದು ಬಿಟ್ಟುಬಿಡ್ತಿನಿ ಚಿನ್ನಾ" ಇನ್ನೂ ಏನೇನೋ ಹೇಳಬೇಕೆಂದು ಉಂಚಿ ಕಟ್ಟೆಗೆ ಓಡಿದ.

ಮನೆ ಬಾಗಿಲ ಹತ್ತಿರ ಬಂದು.... "ಲೇ ಸಿಂಗಿ" ಎಂದು ಕೂಗುವುದರಲ್ಲಿದ್ದ. ಅಷ್ಟರಲ್ಲೀ ಒಳಗಡೆ ಕುಲುಕುಲು ನಗುವ ದನಿಗಳು ಕೇಳಿಸಿದವು. ಆಶ್ಚರ್ಯ ವಾಯಿತು. ಕಿಟಕಿಯಲ್ಲಿ ಇಣಕಿ ನೋಡಿದ. ಭೋರ್ಗರೆಯುವ ಮಳೆ ಹೊಡೆದು ಹೊಲದ ಒಡ್ಡು ಚೂರು ಚೂರಾದಂತೆ ಸಿದ್ದನ ಹೃದಯ ಒಡೆದು ಚಲ್ಲಾಪಿಲ್ಲಿ ಯಾಯಿತು.

ಒಳಗಡೆ ಚೆನ್ನನಗೌಡ ಸಿಂಗಿಯ ಮೇಲೆ ಬಿದ್ದು ಏದುಸಿರು ಬಿಡುತ್ತಿದ್ದ.

ಮರುದಿನ ಬೆಳಿಗ್ಗೆ ಶವನಾ ಬಾವಿಯಿಂದ ತೆಗೆದು ಮೇಲಕ್ಕೆ ಹಾಕಿದಾಗ ಉಂಚಿ ಕಟ್ಟೆಯ ಜನರೆಲ್ಲಾ "ಸಿದ್ದಣ್ಣಾ ಓ.ಸಿ. ಆಡಕತ್ತಿ ಎಂಗಿದ್ದನು ಎಂಗಾದ ನೋಡು" ಎಂದು ನಿಟ್ಟುಸಿರು ಬಿಟ್ಟರು.

ಕೊರಳೆತ್ತಿದ ಧ್ವನಿ

ಸುಮಾರು ಹದಿನೈದು ಹದಿನಾರು ವರ್ಷಗಳಿರಬಹುದು. ಈ ದುಂಡು ಮುಖದ ಕಪ್ಪು ದೇಹಕ್ಕೆ, ಕುರುಡಿ ತಾಯಿಯನ್ನ, ಕುಂಟಿ ಅಕ್ಕನನ್ನ ಸಾಕುವ ಹೊಣೆ ಹೆಗಲ ಮೇಲೆ ಬಿದ್ದಿದೆ.

ಊರಾಚೆಯ ತಿಪ್ಪೆಗಳ ಬದಿಯಲ್ಲಿ ಗುಡಿಸಲು ಕಟ್ಟಿಕೊಂಡು ಬದುಕುತ್ತಿರುವ ಹತ್ತಾರು ಗುಡಿಸಲುಗಳಲ್ಲಿ ಇವರದೂ ಒಂದು. ತಾಳೆಯಗರಿಯನ್ನು ಹೊದಿಸಿದ ಚಪ್ಪರದ ಈ ಗುಡಿಸಲು, ತಲೆವ್ಯಾಲೆ ಮುರಿದೇ ಬೀಳುವಂತಿದೆ. ಇಲಿ ಹೆಗ್ಗಣಗಳು ನೆಲದ ಮಣ್ಣೆಳೆದು ಮಣ್ಣಿನ ರಾಶಿ ಅಲ್ಲಲ್ಲಿ ಬಿದ್ದು ಒಂದು ತರಹದ ಕಮುಟು ವಾಸನೆ ಗುಡಿಸಲೊಳಗೆ ತುಂಬಿಕೊಂಡಿದೆ. ಇದರ ಪಕ್ಕಕ್ಕೆ ಸ್ನಾನಕ್ಕೆಂದು ಹತ್ತಿಪುಳ್ಳೆಯಿಂದ ನೆರಿಕೆ ಕಟ್ಟಿಕೊಂಡಿದ್ದಾರೆ.

"ಅವ್ವಾ ಏನಾದ್ರು ತಂಗಳಿದ್ದರೆ ಹಾಕಿ" ಎಂದು ಮನೆ ಮನೆ ಮುಂದೆ ನಿಂತು ಕವಳ ಎತ್ತಿಕೊಂಡು ಬಂದು ತಾಯಿ ಅಕ್ಕನ ಜೊತೆ ತಿನ್ನುವುದು ಇವನ ದಿನ ನಿತ್ಯದ ಕೆಲಸ.

ಸಂತೆ ದಿನ ಮಾತ್ರ, ತಾಯಿ, ಅಕ್ಕ ಮತ್ತು ತಾನೂ ಸೇರಿಕೊಂಡು "ಧರುಮಾರೆ ತಾಯಿ ತಂದೆಮ್ಮ, ಓಂ ಶಿವನೇ ಭಗವಂತ ಕಣ್ಣು ಕಾಣದ ಪರದೇಶಮ್ಮ...." ಎಂದು ಭಿಕ್ಷಾರಾಗ ಹಾಡುತ್ತಾ ಐದು ಪೈಸೆಗಾಗಿ ಕೈ ಚಾಚಿ ಬೇಡುವ ಕೆಲಸ.

"ಯವ್ವಾ ಇವತ್ತು ಅಮಾಸಿ ಕವಳ ಎತ್ತಿಕೊಂಡು ಬರೋಕೆ ಹೋಗ್ತೀನಿ, ದ್ವಾಸಿ ಕಡುಬೇನಾದ್ರು ಸಿಗಬಹುದು" ಎಂದು ಗುಡಿಸಲಿನ ಮೂಲೆಯಲ್ಲಿದ್ದ ನೆಗ್ಗಿದ ಪಾತ್ರೆ ತೆಗೆದುಕೊಂಡ.

"ಕವಳ ಎತ್ತಿಕೊಂಡು ಜಲ್ದಿ ಬಂದುಬಿಡು ಶಿವ್ಯಾ" ತಾಯಿ ಹೇಳಿದ್ದಕ್ಕೆ ಪ್ರತ್ಯುತ್ತರವಾಗಿ "ಹೂನವ್ವಾ ಜಲ್ದಿನೇ ಬಂದು ಬಿಡ್ತೀನಿ" ಹೇಳಿ ಹೊರಟ.

"ಲಚ್ಚ್ಮೀ ಇವತ್ತು ಅಮಾಸಿ, ಸೀರಿ ಹಿಂಡಿಕ್ಯಂಡು ಮೈ ತೊಳ್ಕ. ನಾನು ಚರಿಗಿ ತಗಂಡೋಗಿ ಬರ್ತಿನಿ."

ಲಚ್ಚ್ಮೀ ಕುಂಟುತ್ತಾ ಅವಳ ಅವ್ವನ ಹತ್ತಿರ ಬಂದು "ನಾನೂ ನಿನ್ನ ಜತಿಗೆ ಬರ್ಲೇನವ್ವಾ ಒಬ್ಬಾಕೆ ಆಗ್ತಿ."

"ಏನೂ ಬ್ಯಾಡ ನಾನೊಬ್ಬಾಕಿ ದಾರಿ ಕೇಳಿಕೊಂಡು ಹೋಗ್ತಿನಿ. ನೀನು ಸೀರಿ ಹಿಂಡಿಕ್ಯಂಡು ಮೈ ತೊಳ್ಕ ಇನ್ನೇನು ಸ್ವಲ್ಪ ಹೊತ್ತಿಗೆ ಶಿವ್ಯ ಬಂದು ಬಿಡ್ತಾನೆ ಕವಳ ಎತ್ಗೊಂಡು."

"ಅಂಗ ಆಗ್ಲವ್ವಾ ನೀನು ಚರಿಗಿ ತಗಂಡೋಗಿ ಗಡಾನೆ ಬಂದುಬಿಡು."

ಲಚ್ಚ್ಮೀ ಕುಂಟುತ್ತಾ ಜೇಡಿಗೆ ಗಡಿಗೆಯಲ್ಲಿ ತಂದಿಟ್ಟಿದ್ದ ನೀರನ್ನು ಒಡಕಲು ಸ್ವಾರಿಗೆ ಸುರಿದು ಹತ್ತಿಪುಳ್ಳಿ ಕದನಾ ಮುಂದಕ್ಕೆ ಮಾಡಿ ಸೀರಿ ಕುಬಸ ಬಿಚ್ಚಿದಳು. ಏಕೋ ಮೈಯಲ್ಲಿ ಹೊಸ ಸಂಚಾರ, ಮೆಲ್ಲನೆ ತನ್ನ ನಗ್ನ ದೇಹದ ಮೇಲೆ ಕಣ್ಣಾಡಿಸಿದಳು. ತನಗೀಗಾಗಲೇ ಹದಿನೆಂಟು ವರ್ಷವೆಂದು ಮೊನ್ನೆ ಮುಟ್ಟಾದಾಗ ಅವರವ್ವ ಹೇಳಿದ್ದನ್ನ ನೆನಪಿಸಿಕೊಂಡಳು. ಮನಸ್ಸು ಕ್ಷಣಕಾಲ ಪಾತರಗಿತ್ತಿಯಂತೆ ಆಚೆಈಚೆ ಹಾರಾಡಿತು. "ನಿನಗೆ ಮದುವೆ ಆಗಿದ್ರೆ ಇಷ್ಟೊತ್ತಿಗೆ ಒಂದು ಕೂಸಿನ ತಾಯಿ ಆಗ್ತಿದ್ದಿ" ಎಂದು ಪಕ್ಕದ ಗುಡಿಸಲಿನ ಮುದುಕಿ ಗಂಗಮ್ಮಾಳವ್ವ ಹೇಳಿದ್ದನ್ನ ನೆನೆಸಿಕೊಂಡಳು. ಆದರೆ ಕಪ್ಪು ಬಣ್ಣದ ಈ ಕುಂಟಿಯನ್ನ ಮದುವೆಯಾಗಲು ಯಾರು ಮುಂದೆ ಬರುತ್ತಾರೆ, ಎನ್ನುವ ನಿರಾಸೆ ಅವಳ ಹೃದಯವನ್ನ ಕಲಕಿತು. ಆದರೂ ಅವಳ ಹೆಣ್ತನದ ಬಯಕೆಗಳು ನಿರಾಸೆಯ ಬಿಸಿಯಲ್ಲೇ ಇಣಿಕಿ ಹಾಕುತ್ತಿದ್ದವು, ಮೊಟ್ಟೆಯೊಡೆದು ಹೊರಬರುವ ಮರಿಗಳಂತೆ.

ತನ್ನ ದೇಹದ ಉಬ್ಬು – ತಗ್ಗುಗಳನ್ನ ನೋಡಿಕೊಳ್ಳುತ್ತಲೇ ಸೀರೆ ಕುಪ್ಪಸವನ್ನ ಒಗೆದು ಹತ್ತಿಪುಳ್ಳಿ ಕದದ ಮೇಲೆ ಒಣ ಹಾಕಿ ಮೈಗೆ ನೀರು ಹಾಕಿಕೊಳ್ಳಬೇಕೆನ್ನುವಷ್ಟರಲ್ಲಿಯೇ ''ಚರಕ್ ಚರಕ್" ಎಂದು ಕದ ಹಿಂದಕ್ಕೆ ಸರಿಯಿತು.

"ಯಾರವ್ರು....?" ಲಚ್ಚ್ಮಿ ಬಗ್ಗಿ ನೋಡುವಷ್ಟರಲ್ಲಿಯೇ ದುರಗಮ್ಮನನ್ನು ಆಡಿಸುವ ಪೈಲಾರಿ ತನ್ನ ಉಂಚಿ ಬೀಕದಂತಹ ಹುಳುಕು ಹಲ್ಲುಗಳನ್ನು ಕಿಸಿದು ''ಶ್ಶಿ...... ಶ್ಶಿ... ...ಶ್ಶಿ ನಾನು ಪೈಲಾರಿ'' ಎಂದ.

ಮೈಲಾರಣ್ಣಾ, ನೀನಾಕೆ ಇಲ್ಲಿಗೆ ಬಂದಿ? ಲಚ್ಚಿ ಗಾಬರಿಗೊಂಡು ಒಂದು ಕೈಯಿಂದ ಪೇರಲ ಕಾಯಿಯಂತಿರುವ ಮೊಲೆಗಳನ್ನು ಮುಚ್ಚಿಕೊಂಡು ಇನ್ನೊಂದು ಕೈಯಿಂದ ಮಾನ ಮುಚ್ಚಿಕೊಂಡು ನಡುಗಹತ್ತಿದಳು.

"ಯಾಕ ಲಚ್ಚಿ ಗಡಗಡ ನಡುಗ್ತಿ, ನನ್ನ ಜತಿಗೆ ಬಾ, ಹೊಸ ಸೀರಿ ಕೊಡುಸ್ತಿನಿ, ಬಂಬೈ ನಾಟ್ಗ ತೋರುಸ್ತಿನಿ" ಮತ್ತೊಷ್ಟು ಮುಂದೆ ಬಂದು ಅವಳ ಮುಖದ ಹತ್ತಿರಕ್ಕೆ ಬಂದು ಬಗ್ಗಿದ.

ಹೆಂಡದ ಹೊಲಸು ವಾಸನೆ ಗೊಮ್ಮೆಂದು ಬಂತು. ಲಚ್ಚಿ ಲಬೋ, ಲಬೋ ಎಂದು ಕೂಗಿಕೊಂಡಳು.

ಮೈಲಾರಿ ಲಚ್ಚಿಯ ಬಾಯಿ ಬಿಗಿ ಹಿಡಿದ. ಲಚ್ಚಿ ಕೊಸರಿಕೊಂಡು ಮತ್ತೇ ಜೋರಾಗಿ ಚೀರಿದಳು.

"ವಯ್ಯಂತಿಯಾ........ ವಯ್ಯಾಕ ನಿನಗೆ ತಕ್ಕ ಶಾಸ್ತಿ ಮಾಡ್ತಿನಿ" ಎಂದವನೇ ಒಣ ಹಾಕಿದ ಸೀರಿ ಕುಪ್ಪಸವನ್ನು ಎಳೆದುಕೊಂಡು ಓಡಿ ಹೋದ.

"ಅಯ್ಯೋ ಆವನ ಮನಿ ಹಾಳಾಗ, ಕದ ಕಟ್ಯಾ ಸುಡುಗಾಡಿಗೆ ಸುಣ್ಣ ಬರಿಯಾ.... ಇದ್ದುದೊಂದು ಉಟ್ಕಳ್ಳ ಹಳೇ ಸೀರಿನಾ ಹೊತ್ಗಂಡು ಓಡಿ ಹೋದ್ಯಾ. ಅವನಿಗೇನು ಅಕ್ಕ ತಂಗೇರು ಯಾರು ಇಲ್ಲಂತೇನು" ಲಚ್ಚಿಯ ತಾಯಿ ಬತ್ತಲೆಯಾಗಿ ಅಳುತ್ತಾ ಮೂಲೆಯಲ್ಲಿ ಕಳಿತಿದ್ದ ಲಚ್ಚಿಯ ಸ್ಥಿತಿಯನ್ನು ಕೇಳಿ ತಿಳಿದು ಗಳ ಗಳ ಅಳುತ್ತಾ ಮೈಲಾರಿಯನ್ನ ಸಾಪಳಿಸಿದಳು.

ಶಿವ್ಯ ಮಧ್ಯಾಹ್ನದೊತ್ತಿಗೆ ಕವಳ ಎತ್ತಿಕೊಂಡು ಬಂದು "ಯವ್ವಾ ಇವತ್ತು ದ್ವಾಸಿ ರೊಟ್ಟಿ ತಂಗಳ ಸಾರು ಬಾಳ ಸಿಕ್ಯಾತಿ, ಉಣ್ಣಾನು ಬರ್ರಿ" ತಾಯಿ ಅಕ್ಕನನ್ನು ಕೂಗಿ ಕರೆದ.

ಒಂದೇ ಸೀರೆಯನ್ನು ಇಬ್ರೂ ಉಟ್ಕೊಂಡು ಮೂಲೆಯಲ್ಲಿ ಒಂದೇ ಕಡಿ ಮೈಯಿಗೆ ಮೈ ಅಂಟಿಸಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾ ಕುಳಿತಿದ್ದ ಇಬ್ಬರನ್ನೂ ನೋಡಿ ಗಾಬರಿಯಿಂದ "ಯವ್ವಾ ಏನಾಯ್ತು" ಎಂದು ಕೇಳಿದ.

ಆ ಕುಡುಕ ಮೈಲಾರಪ್ಪ ಮೈ ತೊಳ್ಕಳ್ಳಕರ ಲಚ್ಚಿನಾ ಗೇಲಿ ಮಾಡಿ ಕದದ ಮ್ಯಾಲೆ ಒಣ ಹಾಕಿದ್ದ ಇದ್ದುದೊಂದು ಸೀರಿನಾ ಎಳ್ಕಂಡು ಓಡಿ ಹೋಗ್ಯಾನೆ.

ಶಿವ್ಯಸಿಗೆ ಸಿಟ್ಟು ಒಮ್ಮೆಲೇ ನೆತ್ತಿಗೇರಿತು, ಕಣ್ಣು ಕೆಂಪಗೆ ಮಾಡಿಕೊಂಡು "ಆ ಮೈಲಾರಿಗೆ ಒಡ್ಡು ಬುದ್ಧಿ ಕಲಿಸಿ ಬರ್ತಿನಿ" ಎಂದವನೆ ಗುಡಿಸಲ ಮೂಲೆ ಯಲ್ಲಿದ್ದ ಕೋಲನ್ನ ತೆಗೆದುಕೊಂಡ."

"ಆದದ್ದು ಆತು, ಆ ಕುಡಕನ ಸಹವಾಸ ನಮಿಗೆ ಬ್ಯಾಡ, ಜಗಳ ಮಾಡಿದ್ರೆ ನಮ್ಮ ಮರ್ವ್ಯಾದಿನೇ ಹೋಗಾದು, ಇದೇ ಸೀರಿನಾ ಎರಡು ತುಂಡು ಮಾಡಿ ಉಟ್ಗಂತಿವಿ. ನೀನೇನೂ ಯೋಚ್ನೆ ಮಾಡಬ್ಯಾಡ."

ತಾಯಿ ತಡದುದ್ದಕ್ಕೆ ಸಿಟ್ಟು ನುಂಗಿಕೊಂಡು ಶಿವ್ಯ ಸುಮ್ಮನಾದ.

ಕೂಳು ತಿನ್ನಲು ಮನಸ್ಸು ಬರಲಿಲ್ಲ, ಎರಡು-ಮೂರು ಗುಕ್ಕು ತಿಂದು ಕುಡಿಕಿಯೊಳಗಿನ ನೀರನ್ನ ಗುಟುಕರಿಸಿ,

"ಯವ್ವಾ ನಾ ಹೊರಗೋಗಿ ಬರ್ತೀನಿ" ಎಂದು ಹೇಳಿ ಸರ ಸರ ಹೊರಟ.

ಅವನ ತಾಯಿ "ಯಾಕೆ" ಎಂದು ಕೇಳುವಷ್ಟರಲ್ಲೇ ಹೊರಟು ಹೋದ.

ಬಂಗಲೆಗಳ ಅಂಗಳದಲ್ಲಿ ನಿಂತು ಕೈ ಮುಗಿದು, ಕಣ್ಣೀರಾಕಿ "ನನ್ನಕ್ಕ ಲಚ್ಚಿಯ ಇದ್ದ ಒಂದೇ ಒಂದು ಸೀರಿನಾ ಮೈ ತೊಳ್ಕಣಕರಾ ಯಾವನೋ ಕಳ್ತನ ಮಾಡಿಕೊಂಡು ಹೋಗ್ಯಾನೆ, ಗುಡಿಸಲಾಗ ಬರೇಬತ್ಲ ಕುಂತಾಳೆ. ಯಾರಾದ್ರು ಒಂದು ಹರಕೊ ಪರಕೋ ಹಳೆ ಸೀರಿ ಇದ್ರೆ ಕೊಡ್ರಮ್ಮ."

"ಹೋಗೋಗೋ ಬೋಳಿ ಮಗನಾ, ಬಡ್ಡಿ ಮಗನೇ" ಏನೇನೋ ಬೈದು ಕಳಿಸಿದರು ಬಾಯಿಗೆ ಬಂದ ಹಾಗೆ.

"ಈ ಶ್ರೀಮಂತ ಬಡ್ಡಿ ಮಕ್ಕಳು ತಮ್ಮ ಹೆಂಡ್ರಿಗೆ ಮಕ್ಕಳಿಗೆ, ಹೊಸ ಹೊಸ ಸೀರೆಗಳನ್ನ ಉಡಿಸ್ಕೊಂಡು, ಮೈ ತುಂಬಾ ಬಂಗಾರ ಹಾಕ್ಕೊಂಡು ಕಾರುಗಳಲ್ಲಿ ದಿಮಾಕು ಮಾಡ್ತಾ ಓಡ್ಯಾಡ್ತಾರೆ, ಮಜಾ ಮಾಡ್ತಾರೆ, ಸೊಕ್ಕಿನಿಂದ ಮೆರಿತಾರೆ. ನಮ್ಮಂತ ಜನನ್ನ ಸಾಕಿದ ನಾಯಿಗಳಿಗಿಂತ ಕೀಳಾಗಿ ಕಾಣ್ತಾರೆ. ಒಂದು ಹರಕು ಸೀರೆ ಕೇಳಿದ್ರೆ, ಬಾಯಿಗೆ ಬಂದಂಗೆ ಬೈದು ನಾಯಿ ಚೂ ಬಿಡ್ತಾರೆ." ಮನದಲ್ಲಿ ಖಂಡಿಸುತ್ತಾ ನಿರಾಸೆಯಿಂದ ಗುಡಿಸಲು ಕಡಿಗೆ ವಾಪಸು ನಡೆದ. ಆದರೂ ಮನಸ್ಸು ಬಗ್ಗೈಲಿ ಹೋಗಲು ಒಪ್ಪಲಿಲ್ಲ. ಹೇಗಾದರೂ

ಎಲ್ಲಿಯಾದರೂ ಒಂದು ಹಳೇ ಹರಕು ಸೀರೆಯನ್ನು ಇಸಿದುಕೊಂಡು ಹೋಗಿ, ತನ್ನಕ್ಕನ ಮಾನ ಮುಚ್ಚಬೇಕೆಂದು ನಿರ್ಧಾರ ಮಾಡಿದ.

ಕನ್ನಿಕಾ ಪರಮೇಶ್ವರಿ ಗುಡಿ ಮುಂದೆ ಬಂದು ನಿಂತುಕೊಂಡ. ಗುಡಿ ಗೋಪುರಗಳನ್ನ ಕಟ್ಟಿಸಲಿಕ್ಕೆ ಲಕ್ಷಗಟ್ಟಲೇ ಖರ್ಚು ಮಾಡುವ ಜನರು ನಮ್ಮ ಜೋಪಡಿಗಳ ಕಣ್ಣೀರು ನೋಡಿ ಕನಿಕರ ಪಡೋದಿಲ್ಲ" ಎಂದು ಸಿಟ್ಟು ನುಂಗಿ ಕೊಳ್ಳುವಾಗ ಅವನ ರಕ್ತ ಕತ ಕತ ಕುದಿಯುತ್ತಿತ್ತು.

ದೇವಿ ವಿಗ್ರಹಕ್ಕೆ ಮಿಂಚುವ ರೇಷ್ಮೆ ಸೀರೆಯನ್ನ ಉಡಿಸಿದ್ದರು. ಈ ನಿರ್ಜೀವ ಕಲ್ಲಿಗೆ ಬೆಲೆ ಬಾಳುವ ಸೀರೆಯುಡಿಸುವ ಈ ಸ್ವಾರ್ಥ ಜನಕ್ಕೆ ಸಜೀವ ವಾಗಿರುವ ಬೆತ್ತಲೆ ಮೈಗಳ ಮಾನ ಮುಚ್ಚಲು ಒಂದು ಹರಕು ಸೀರೆ ಕೊಡುವ ಮನಸ್ಸಿಲ್ಲ" ಎಂದು ಗಳ ಗಳ ಅತ್ತ.

ತನ್ನ ಅವ್ವ ಅಕ್ಕ ಇರೋ ಒಂದು ಸೀರೆಯನ್ನ ಅರ್ಧರ್ಧ ಉಟ್ಟು ಮೂಲೆ ಯಲ್ಲಿ ಕುಂತಿದ್ದ ಅವರ ನಗ್ನ ದೃಶ್ಯ ಕಣ್ಣು ಮುಂದೆ ಬಂದು ನಿಂತಿತು. ಕ್ಷಣ ಹೊತ್ತು ಯೋಚಿಸಿದ. ಕನ್ನಿಕಾಪರಮೇಶ್ವರಿ ಪ್ರತಿಮೆಯನ್ನ ಎವೆಇಕ್ಕದೆ ನೋಡಿ ಒಂದು ನಿರ್ಧಾರಕ್ಕೆ ಬಂದು ಪೂಜಾರಿ ಆಚೆ ಹೋಗವುದನ್ನೇ ಕಾಯುತ್ತಾ ನಿಂತ.

ಸ್ವಲ್ಪವೂ ಅಳುಕಿಲ್ಲದೇ ನೇರವಾಗಿ ಗರ್ಭಗುಡಿಯೊಳಗೆ ಯಾರಿಗೂ ಕಾಣ ದಂತೆ ಒಳಹೊಕ್ಕ. ದೇವಿ ವಿಗ್ರಹಕ್ಕೆ ಉಡಿಸಿದ್ದ ಸೀರೆಯನ್ನೇ ಸರಸರನೇ ಬಿಚ್ಚಿದ. ಹರಕು ಅಂಗಿಯ ಒಳಗೆ ತುರುಕಿಕೊಂಡು ಮತ್ತು ದೇವಿ ಕೈಲಿದ್ದ ಬೆಳ್ಳಿ ಖಡ್ಗ ವನ್ನು ಕಿತ್ತುಕೊಂಡು ಓಡಹತ್ತಿದ.

"ಅಯ್ಯೋ ಹಿಡೀರಿ! ಅವನ್ನ ಹಿಡೀರಿ! ಆ ಹುಡುಗನ್ನ! ಹಿಡೀರಿ ....! ಹಿಡೀರಿ... !'' ಶಿವ್ಯ ಸೀರೆ ಹೊತ್ತುಕೊಂಡು ಹೋಗುವುದನ್ನನೋಡಿ ಗುಡಿ ಪೂಜಾರಿ ಕೂಗ್ಯಾಡಹತ್ತಿದ.

ರಸ್ತೆಯಲ್ಲಿ ಓಡಾಡುವ ಜನರೆಲ್ಲಾ ಹಿಡಿಯಲು ಬೆನ್ನಟ್ಟಿದ್ದರು. ದಸ ದಸ ತೇಕುತ್ತಾ ಯಾರ ಕೈಗೆ ಸಿಗದೇ ಓಡಿ ಹೋಗುತ್ತಿದ್ದ. ಹಿಂದಕ್ಕೆ ತಿರುಗಿದ. ಜನರ ಗುಂಪು ಬೆನ್ನಟ್ಟಿ ಬರುವುದನ್ನ ಕಂಡು ಇನ್ನಷ್ಟು ಜೋರಾಗಿ ಓಡಹತ್ತಿದ.

ಬೆನ್ನತ್ತಿ ಬರುತ್ತಿದ್ದ ಜನ ಇನ್ನೇನು ಅವನನ್ನು ಹಿಡಿದುಕೊಳ್ಳಬೇಕೆನ್ನುವಷ್ಟರಲ್ಲೇ ಸರಕ್ಕನೇ ನಿಂತು, ಬೆಳ್ಳಿಯ ಖಡ್ಗವನ್ನ ಎತ್ತಿ ಹಿಡಿದು ನಿಂತ. ಕಣ್ಣು ಕೆಂಪಾಗಿದ್ದವು ರಕ್ತ ಕುದಿಯುತ್ತಿತ್ತು.

"ಯಾವನಾದರೂ ನನ್ನ ಹತ್ರ ಬಂದ್ರೆ ಈ ಖಡ್ಗದಿಂದ ಇರಿದು ಕೊಂದು ಬಿಡ್ತಿನಿ" ಎಂದು ಕೈ ಎತ್ತಿ ನಿಂತ ಕೂಡಲೇ ಜನ ಗಕ್ಕನೇ ಹಿಂದೆ ಸರಿದರು. ಮತ್ತಷ್ಟು ಹಿಂದೆ ಸರಿದರು. ಆದರೆ ಶಿವ್ಯ ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಸೀರೆ ಹಿಡಿದು ಮುಂದೆ ಸಾಗುತ್ತಲೇ ಇದ್ದ.

ಸಾಯಂಕಾಲದ ಸೂರ್ಯ ಕೆಂಪಾಗಿ ಮಿರ ಮಿರ ಮಿಂಚುವ ಕೆಂಪು ಕಿರಣಗಳನ್ನ ಚಲ್ಲಿದ್ದ, ಕೆಂಪು ಕಿರಣಗಳತ್ತ ಹೋಗುತ್ತಲೇ ಇದ್ದ.

ಆದರ್ಶಗಳು

ಬತ್ತಿದ ಕಣ್ಣು, ಸಪ್ಪೆ ಮುಖ, ಕುರುಚಲು ಗಡ್ಡ, ಕೆದರಿದ ಕ್ರಾಪು.... ನೋಡಿದವರು ಯಾರೂ ಈ ವ್ಯಕ್ತಿಯನ್ನ ಕಾಲೇಜು ಲೆಕ್ಚರರ್ ಅನ್ನುವಂತಿಲ್ಲ. ಇಸ್ತ್ರಿ ಇಲ್ಲದ ಪೈಜಾಮು ಜುಬ್ಬ ಇವರ ದಿನ ನಿತ್ಯದ ಉಡುಪು. ಯಾವಾಗಲೂ ತಲೆ ತಗ್ಗಿಸಿ ಯೋಚನಾಮಗ್ನರಾಗಿರುತ್ತಿದ್ದರು. ಎಲ್ಲಾ ಉಪನ್ಯಾಸಕರು ದಿನಾಲೂ ನುಣ್ಣಗೆ ಷೇವಿಂಗ್ ಮಾಡಿ, ಸೂಟು ಹಾಕಿಕೊಂಡು ಇಲ್ಲವೇ ಅಂದ ವಾಗಿ ಇನ್ಸರ್ಟ್ ಮಾಡಿಕೊಂಡು, ನೀಟಾಗಿ ಕ್ರಾಪ್ ತೀಡಿಕೊಂಡು ಬರುತ್ತಿದ್ದ ಕಾಲೇಜಿನಲ್ಲಿ ಇವರೊಂದು ತರಹದ ಹೊಸ ವ್ಯಕ್ತಿ. ಯಾವುದೋ ಜೂನಿಂದ ಹಿಡಿದುಕೊಂಡು ಬಂದ ಪ್ರಾಣಿಯಂತೆ ಕಾಣುತ್ತಿದ್ದರು.

ಕಾಲೇಜಿನ ಹುಡುಗಿಯರು ಆಗಾಗ್ಗೆ ಇವರನ್ನ ಗೇಲಿ ಮಾಡುತ್ತಿದ್ದುದೂ ಉಂಟು. ಈ ಕೋಲು ದೇಹದ ಪ್ರಾಣಿಯು ಜೋಲು ಮುಖ ಮಾಡಿಕೊಂಡು ಕಾಲೇಜಿಗೆ ಬರುತ್ತಿರುವಾಗ ಎಲ್ಲರ ಕಣ್ಣುಗಳು ಇವರ ಸಣಕಲು ದೇಹ, ಕುರು ಚಲ ಗಡ್ಡ, ಇಸ್ತ್ರಿ ಇಲ್ಲದ ಬಟ್ಟೆಗಳ ಮೇಲೆಯೇ.

ತಿಂಗಳಿಗೆ ಒಂದುವರೆ ಸಾವಿರ ಸಂಬಳ ಬರುತ್ತಿದ್ದರೂ ಸರಳವಾದ ಎರಡು ಊಟ ಮಾತ್ರ. ತಿಂಡಿಯಿಲ್ಲ, ಆಗಾಗ್ಗೆ ಸೇವಿಸಿದರೆ ಸ್ವಲ್ಪ ಚಹಾ. ಇಲ್ಲದಿದ್ದರೆ ಎರಡು ಅರಹೊಟ್ಟೆಯ ಊಟದಮೇಲೇ ಇರುತ್ತಿದ್ದರು. ತಿಂಗಳ ಬಹುಪಾಲು ಸಂಬಳವನ್ನ ದಲಿತರಿಗೆ ಬಟ್ಟೆ-ಕಾಳು ಕೊಡಿಸುವುದು, ಹಮ್ಮಿಕೊಳ್ಳುತ್ತಿರುವ ಕೆಲವು ಫಂಕ್ಷನ್‌ಗಳಿಗೆ ಖರ್ಚು ಮಾಡುವುದು, ಅದಕ್ಕೊ, ಇದಕ್ಕೊ ವೆಚ್ಚ ಮಾಡಿ ತಿಂಗಳು ಮುಗಿಯುವುದರೊಳಗೆ ಜೇಬು ಖಾಲಿ ಮಾಡಿಕೊಳ್ಳುತ್ತಿದ್ದರು.

ಕ್ಲಾಸಿನಲ್ಲಿ ಪಾಠ ಮಾಡುತ್ತಿರುವಾಗ ಹೇಳುವ ಟಾಪಿಕ್ಕನ್ನೇ ಮರೆತು ಮಾರ್ಕ್ಸ್, ಏಂಗಲ್ಸ, ಲೋಹಿಯಾ, ಗಾಂಧೀ ನರೇಂದ್ರದೇವ........ ಇವರ ಸಿದ್ಧಾಂತಗಳನ್ನ ಬಹು ತಾರ್ಕಿಕವಾಗಿ, ವೈಜ್ಞಾನಿಕವಾಗಿ ಭಾವಪರವಶರಾಗಿ ಗಂಟೆ ಬಾರಿಸಿದರೂ ಮೈಮರೆತು ಕೊರೆಯುತ್ತಿದ್ದರು. ಬಂಡವಾಳಶಾಹಿಗಳನ್ನ,

ಫ್ಯಾಸಿಸ್ಟರನ್ನ ಈ ದೇಶದ ಶತ್ರುಗಳೆಂದು ಕರೆಯುತ್ತಿದ್ದರು. ವೇದ–ಗೀತೆಗಳನ್ನ ಸುಳ್ಳಿನ ಕಂತೆಗಳೆಂದು ಬೈಯುತ್ತಿದ್ದರು. ಒಮ್ಮೊಮ್ಮೆ ದೇವರ ವಿಷಯ ಬಂದಿತೆಂದರೆ ತೀರೇಹೋಯಿತು. ಶಿವ, ವಿಷ್ಣು, ವೀರಭದ್ರ........ ಕಾಳಮ್ಮ, ದುರ್ಗಮ್ಮ........ಎಲ್ಲವುಗಳನ್ನು ಚರಿತ್ರೆಯಿಂದ ಕೆದಕಿ, ಕೆದಕಿ ಟೀಕಿಸುತ್ತಿದ್ದರು. "ಈ ಹುಚ್ಚು ಜನ ಮೈಲಿಗೊಂದು, ಫರ್ಲಾಂಗಿಗೊಂದು, ಕಿಲೋಮೀಟರ್ ಗೊಂದು ದೇವರುಗಳನ್ನು ಹುಟ್ಟಿಹಾಕಿ ಮೈಲೇಶ್ವರ, ಫರ್ಲಾಂಗೇಶ್ವರ, ಕಿಲೋಮೀಟರೇಶ್ವರ........... ಎಂದು ಹೆಸರಿಟ್ಟು ನೂರು ಗುಡಿಗಳನ್ನ ಕಟ್ಟುತ್ತಾರೇ ಹೊರತು ಬಡವನಿಗೆ, ನಿರ್ಗತಿಕನಿಗೆ ಒಂದು ಸಣ್ಣ ಮನೆ ಕಟ್ಟಿಸೋದಿಲ್ಲ. ಇವರೆಂತಹ ಜನ .... ಹುಚ್ಚರೋ, ಜಾಣರೋ.... ನೀವೇ ಯೋಚ್ನೆ ಮಾಡಿ" ಎಂದು ಆಕ್ರೋಶದಿಂದ ಹೇಳುವುದು ಮತ್ತೆ ಅಷ್ಟೇ ಸೌಮ್ಯ ವಾಗಿ, ವೈಜ್ಞಾನಿಕವಾಗಿ, ನಿಖರವಾಗಿ ಡಾರ್ವಿನ್ನನ 'ಆರಿಜನ್ ಆಫ್ ಸ್ಪೀಸಿಸ್........, ಏಂಗಲ್ಸನ 'ಆರಿಜನ್ ಆಫ್ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ಸ್ಟೇಟ್, ಆಧಾರಗಳ ಮೇಲೆ ವೈಚಾರಿಕವಾಗಿ, ವೈಜ್ಞಾನಿಕ ವಾಗಿ ದೇವರ ಹುಟ್ಟನ್ನ ಅಲ್ಲಗಳೆಯುತ್ತಿದ್ದರು. ಕ್ಲಾಸಿನ ಹೆಚ್ಚಿನ ವಿದ್ಯಾರ್ಥಿ ಗಳಿಗೆಲ್ಲಾ ಇವರ ಬೋಧನೆ ಕಬ್ಬಿಣದ ಕಡಲೆಯಾದರೆ, ಇನ್ನೂ ಕೆಲವರಿಗೆ ಬೋರ್ ಆಗಿ ಆಕಳಿಸುತ್ತಿದ್ದರು. ಕೆಲವೊಮ್ಮೆ ಒಬ್ಬೊಬ್ಬರೇ ಮೆಲ್ಲನೇ ಹೊರ ಹೋಗುತ್ತಿದ್ದರು. ಒಮ್ಮೊಮ್ಮೆ ದಲಿತರ ಮೇಲಾಗುವ ಅನ್ಯಾಯ, ಶೋಷಣೆ, ಅತ್ಯಾಚಾರಗಳನ್ನ ಖಂಡಿಸಿ ಮಾತನಾಡುತ್ತಿರುವಾಗ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳು ಜಾಗ್ರತರಾದವರಂತೆ ಮೈಮರೆತು ಆಲಿಸುತ್ತಿದ್ದರು.

ಒಮ್ಮೆ ಹೋಟೆಲ್‌ನಲ್ಲಿ ಚಹಾ ಕುಡಿಯುತ್ತಿರುವಾಗ ಹೊರಗಡೆಯ ಒಂದು ಮೂಲೆಯಲ್ಲಿ ಹರಿಜನರು ಹರಕು ಮುರುಕಾದ ಲೋಟಗಳಲ್ಲಿ ಚಹಾ ಕುಡಿಯುವುದನ್ನು ಕಂಡಕೂಡಲೆ ಇವರ ಮೈಗೆಲ್ಲಾ ಬೆಂಕಿ ಹತ್ತಿ ಉರಿದಂತಾಯಿತು. ಕೂಡಲೇ ಎದ್ದು ಹೋಗಿ ಮಾಲೀಕನನ್ನ ತರಾಟೆಗೆ ತೆಗೆದುಕೊಂಡರು. "ನೀವು ದಲಿತರನ್ನು ಹೀನ ದೃಷ್ಟಿಯಲ್ಲಿ ಕಾಣುತ್ತಿರುವುದು ಇಡೀ ಮಾನವ ಜನಾಂಗಕ್ಕೇ ನಾಚಿಕೆ ತರಿಸುವಂತದ್ದು........ ಇವರು ನಿಮ್ಮ ಮನೆಯ ನಾಯಿಗಳಿಗಿಂತ ಕೀಳೇ........ ನೀವು ಮಾಡುತ್ತಿರುವ ಈ ಅಸ್ಪೃಶ್ಯತೆಯು ಇಡೀ

ಮಾನವ ಕುಲಕ್ಕೆ ಮಾಡಿದ ಅಪಮಾನ" ನೇರವಾಗಿ ಪೋಲಿಸ್ ಠಾಣೆಗೆ ಹೋಗಿ ಕಂಪ್ಲೇಂಟ್ ಕೊಟ್ಟರು.

ಕೊನೆಗೆ ಹರಿಜನರೂ ಎಲ್ಲರೊಂದಿಗೆ ಹೋಟೆಲ್‌ನಲ್ಲಿ ಕುಳಿತುಕೊಳ್ಳುವಂತೆ ಮಾಡಿದ ಕೀರ್ತಿ ಇವರಿಗೇ ಸೇರಬೇಕು.

ಹರಿಜನ ಕೇರಿಗೆ ಹೋಗಿ, ಜನರನ್ನ ಜಾಗೃತಗೊಳಿಸಿದರು. ಗಾಂಧೀ, ಅಂಬೇಡ್ಕರ್ ಅವರ ವಿಚಾರಗಳನ್ನ ಒತ್ತಿ ಹೇಳಿ ಯುವಕರನ್ನ ಸಂಘಟಿಸಿದರು. ದಲಿತ ಸಂಘರ್ಷ ಸಮಿತಿ ನಿರ್ಮಾಣವಾಯಿತು.

ವಿದ್ಯಾರ್ಥಿಗಳೊಂದಿಗೆ ಹಾಸ್ಟೆಲ್‌ಗೆ ನುಗ್ಗಿ "ಹಂದಿಗಳೂ, ದನಗಳೂ, ತಿನ್ನದ ಕೂಳನ್ನ ಈ ಅಮಾಯಕ ವಿದ್ಯಾರ್ಥಿಗಳಿಗೇಕೆ ಹಾಕುತ್ತಿದ್ದೀರಿ.... ? ಇವರ ಆರೋಗ್ಯದ ಗತಿಯೇನು....? ಇವರ ಬಟ್ಟೆಗಳಿಗೆ, ಬೆಡ್‌ಷೀಟುಗಳಿಗೆ, ಟವಲ್‌ಗಳಿಗೆ ಸರಕಾರ ಕೊಡತಕ್ಕ ಹಣ ಎಲ್ಲಿ ಹೋಯಿತು ? ಹೇರ್ ಕಟಿಂಗ್, ಎಣ್ಣೆ....ಇವುಗಳನ್ನ ಒದಗಿಸಿಕೊಡುವ ಮಿಸಲೇನಿಯಸ್ ಹಣ ಎಲ್ಲಿ ಹೋಯಿತು? ಹಾಸ್ಟೆಲ್ ಸುರುವಾದಾಗಿನಿಂದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಏನ್ ಕೊಟ್ಟಿದೀರಿ....? ಸರಕಾರ ಖರ್ಚು ಮಾಡುತ್ತಿರುವ ಹಣ ನಿಮ್ಮ ಕೊಬ್ಬಿದ ಹೊಟ್ಟೆಗಳಿಗೇ ಮೀಸಲಾಗಿದೆ...." ಎಂದು ವಾರ್ಡನ್ನನನ್ನು ತರಾಟೆಗೆ ತೆಗೆದು ಕೊಂಡರು. ವಿದ್ಯಾರ್ಥಿಗಳಿಂದ ಹಾಸ್ಟೆಲ್‌ನಲ್ಲಿ ಆಗುತ್ತಿರುವ ಅನ್ಯಾಯ ಮತ್ತು ಅಕ್ರಮಗಳ ವಿರುದ್ಧ ಪ್ರತಿಭಟನಾ ರ‍್ಯಾಲಿಯನ್ನ ಹೊರಡಿಸಿ, ಕಮೀಟಿಯ ಅವ್ಯವಹಾರವನ್ನ ಬೈಲಿಗೆಳೆದರು.

ಊರಿನಲ್ಲಿ ಬೇಲ್ದಾರರ ಸಂಘ, ಹಮಾಲರ ಸಂಘ, ದಲಾಲಿ ನೌಕರರ ಸಂಘ, ಬೀಡಿ ಕಟ್ಟುವವರ ಸಂಘ, ಹೋಟೆಲ್ ಸಪ್ಲೈಯರ್ಸ್ ಮತ್ತು ಕ್ಲೀನರ್ಸ್‌ ಗಳ ಸಂಘಗಳನ್ನು ಕಟ್ಟಿ ವರ್ಗಗಳನ್ನ ಒಟ್ಟುಗೂಡಿಸಿ ಹಲವಾರು ಸಂಘಟನೆ ಗಳನ್ನ ಸ್ಥಾಪಿಸಿದರು.

ನಾಟಕದಲ್ಲಿ ಅಭಿರುಚಿ ಇರುವ ವಿಧ್ಯಾರ್ಥಿಗಳನ್ನ ಕಲೆಹಾಕಿ ಬೆಲ್ಚಿ, ಪತ್ರೆ ಸಂಗಪ್ಪನ ಕೊಲೆ, ಹೊಸ ಬಾಳಿನೆಡೆಗೆ, ಕುರಿ ಮುಂತಾದ ನಾಟಕಗಳನ್ನ ಆಡಿಸಿ ಹಳ್ಳಿಗಳಲ್ಲಿ, ಕೇರಿಗಳಲ್ಲಿ ಜಾಗೃತಿಯ ಬೀಜ ಬಿತ್ತಿ ಬರುತ್ತಿದ್ದರು.

ಬಂಡಾಯ ಕವಿಗೋಷ್ಠಿಗಳನ್ನ, ವಿಚಾರ ಸಂಕಿರಣಗಳನ್ನ ಏರ್ಪಡಿಸಿ ದಬ್ಬಾಳಿಕೆ, ಶೋಷಣೆಯ ವಿರುದ್ಧ ಸಿಂಹಘರ್ಜನೆ ಮಾಡಿದರು.

ಬೆಂಕಿಯ ಮೇಲೆ ನಡೆದು.... ದೇವರ ಅಸ್ತಿತ್ವವನ್ನ ಅಲ್ಲಗಳೆದರು. "ಇಲ್ಲಿ ಪವಾಡವಿಲ್ಲ, ದೇವರಿಲ್ಲ. ಇದರಲ್ಲಿ ವಿಜ್ಞಾನ ಇದೆ. ನೀವೂ ಕೂಡ ನಡೆಯಬಹುದು ಎಂದು ನೆರೆದ ಜನರನ್ನ ಚಕಿತಗೊಳಿಸಿ ವಿಚಾರ ಮಾಡುವಂತೆ ಮಾಡಿದರು. ಇನ್ನೂ ಅನೇಕ ಪವಾಡಗಳನ್ನ ಸಾಯಿಬಾಬಗಳಿಗಿಂತ ಹೆಚ್ಚು ಚಮತ್ಕಾರ, ಚಾಣಾಕ್ಷತನದಿಂದ ತೋರಿಸಿ ಜನ ನಿಬ್ಬೆರಗಾಗುವಂತೆ ಮಾಡಿದರು.

ಊರಿನಲ್ಲಿ ಇವರಿಗೆ ಹಿಂದುಳಿದ ಜನಾಂಗದವರಿಂದ ಬೆಂಬಲ ಸಿಕ್ಕಿತಾದರೂ, ಶ್ರೀಮಂತರು, ಜಾತಿವಾದಿಗಳು ಇವರ ವಿರುದ್ಧವಾಗಿ ಬಹಿರಂಗ ಸಭೆಗಳನ್ನ ಏರ್ಪಡಿಸಿ ಖಂಡಿಸಿದರು. ಪ್ರಿನ್ಸಿಪಾಲರಿಗೆ ದೂರು ಕೊಟ್ಟು ಇಲ್ಲಿಂದ ಟ್ರಾನ್ಸ್‌ಫರ್ ಮಾಡಿಸಬೇಕೆಂದೂ ಒತ್ತಾಯ ಮಾಡಿದರು.

"ಮಿಸ್ಟರ್ ವಿನಯ ಕುಮಾರ್.... ! ಊರಿನಲ್ಲಿ ಇಲ್ಲದ ರಾಜಕೀಯ ಮಾಡಿ ಕಾಲೇಜಿಗೆ ಮಸಿ ಹಚ್ಚಬೇಡಿ. ನಿಮ್ಮ ಮೇಲೆ ಕಾನೂನು ಪ್ರಕಾರ ತಕ್ಕ ಕ್ರಮ ಕೈಗೊಳ್ಳಬೇಕಾದೀತು.... ಎಚ್ಚರ !!!" ಎಂದು ಪ್ರಿನ್ಸಿಪಾಲರು ಒಮ್ಮೆ ಕರೆದು ಖಾರವಾಗಿ ಹೇಳಿದರು.

"ದಿನೇ ದಿನೇ, ಕಫ ಕಟ್ಟಿ ಕೆಮ್ಮು ಹೆಚ್ಚಾಗಿ ಮಗು ಏದುಸಿರು ಬಿಡುತ್ತಿರುತ್ತಾ ಇದೆ. ಇರುವ ಒಂದೇ ಕುಡಿಯನ್ನಾದರೂ ಚನ್ನಾಗಿ ಸಾಕಲಿಕ್ಕೆ ನನಗೆ ಅವಕಾಶ ಕೊಡಿ" ಎಂದು ಹೆಂಡತಿ ಹೇಳುತ್ತಿರುವಾಗ ಅವಳ ಕಣ್ಣೀರನ್ನ ಕಂಡು ಮರುಗಿ "ನಾಗೂ.... ನಮ್ಮ ದೇಶದಲ್ಲಿ ಇಂತಹ ನಿರ್ಗತಿಕ ಲಕ್ಷ ಲಕ್ಷ ಮಕ್ಕಳು ಇದಕ್ಕಿಂತ ಹೆಚ್ಚು ಉಲ್ಬಣವಾದ ರೋಗದಲ್ಲಿ ಯಾವ ಆರೈಕೆಯೂ ಇಲ್ಲದೇ ದಿನಾಲೂ ಸತ್ತು ಬದುಕುತ್ತಿದ್ದಾರೆ....ಗಿರಿನಾ ಡಾಕ್ಟರ ಹತ್ರ ಇನ್ನೊಮ್ಮೆ ತೋರಿಸಿಕೊಂಡು ಬರೋಣ, ನಾನೂ ಬರ್ತೀನಿ" ಕೆನ್ನೆ ಮೇಲೆ ಹರಿಯುತ್ತಿದ್ದ ಕಣ್ಣೀರನ್ನ ಬೆರಳಿನಿಂದ ಒರೆಸಿದರು.

"ಸಾರ್........ ! ಸಾರ್........ !" ಲೈಬ್ರರಿಯಲ್ಲಿ ಓದುತ್ತಾ ಕುಳಿತಿದ್ದ ವಿನಯ ಕುಮಾರ್ ಗಡಬಿಡಿಯ ಕೂಗಿಗೆ ಮುಖ ಮೇಲೆತ್ತಿ ನೋಡಿದನು.

"ಒಂದು ನಿಮಿಷ ಹೊರಗಡೆ ಬರ್ತೀರಾ ಸಾರ್...." ಎದ್ದು ಹೊರಗಡೆ ಬಂದರು.

"ಸಾರ್ ನಿಮ್ಮ ಗಿರಿಗೆ ಸೀರಿಯಸ್ ಅಂತೆ....! ಬೇಗ ಮನಿಗೆ ಹೋಗ ಬೇಕಂತೆ."

ಪ್ರಿನ್ಸಿಪಾಲರ ಪರ್ಮಿಷನ್ ತೆಗೆದುಕೊಂಡು ಮನೆಯಕಡೆ ನಡೆದರು.

ಮನೆಯ ಒಳಗಡೆ ಪಕ್ಕದ ಮನೆಗಳ ಜನರು ಮುತ್ತಿದ್ದರು. ಗಿರಿಯನ್ನ ಡಾಕ್ಟರ್ ಪರೀಕ್ಷೆ ಮಾಡುತ್ತಿದ್ದರು. ನೆರೆದ ಜನರು ವಿನಯ್ ಕುಮಾರರಿಗೆ ದಾರಿ ಬಿಟ್ಟರು.

ಕಫ ಕಟ್ಟಿ "ಗೊರ್.... ಗೊರ್" ಎಂದು ಮಗು ತೇಕುತ್ತಿತ್ತು. ತೇಲು ಗಣ್ಣು, ಮೇಲುಗಣ್ಣು ಮಾಡಿತ್ತು.

"ನೋಡಿ ಮಿಸ್ಟರ್ ವಿನಯ್ ಮಗುಗೇ ಬಹಳಾ ಸೀರಿಯಸ್ಸಾಗಿ ಅಸ್ಥಮಾ ಅಟ್ಯಾಕ್ ಆಗಿದೆ. ಈ ಪೊಡ್ಲೇ ಕೇರ್ ತಗೊಂಡಿದ್ರೆ ಚನ್ನಾಗಿತ್ತು. ನೀವು ಆದಷ್ಟು ಬೇಗನೇ ಹುಬ್ಬಳ್ಳಿಗೆ ಕರೆದುಕೊಂಡು ಹೋಗಬೇಕು....! ಇಲ್ಲದಿದ್ದರೆ ಜೀವಕ್ಕೇ ಅಪಾಯ....!"

"ಇಷ್ಟು ಸೀರಿಯಸ್ ಆಗೋ ತನಕ ಏನ್ಮಾಡ್ತಾಯಿದ್ರಿ? ಉಸಿರಾಟನೇ ಸರಿಯಾಗಿ ಆಗ್ತಾಯಿಲ್ಲ" ಎಂದು ಹುಬ್ಬಳ್ಳಿಯಲ್ಲೊ ಡಾಕ್ಟರ್ ಹೇಳಿದ್ದಕ್ಕೆ ಹೇಗಾದ್ರೂ ಮಾಡಿ ಇರೋ ಒಂದೇ ಒಂದು ಮಗುನ್ನ ಬದುಕಿಸಿ ಕೊಡೀ...." ನಾಗವೇಣಿ ಅಂಗಲಾಚಿದಳು. "ಪ್ರಯತ್ನ ಮಾಡ್ತೀನಮ್ಮಾ" ಎಂದು ಹೇಳಿ ಡಾಕ್ಟರ್ ಒಳಗಡೆ ಹೋದರು.

....

ಅಸ್ಥಮಾ ರೋಗ ಗಿರಿಯನ್ನು ಆಹುತಿ ತೆಗೆದುಕೊಂಡಿತು. ಹುಬ್ಬಳ್ಳಿ ಯಲ್ಲೇ ಮಣ್ಣು ಮಾಡಿ ಇಬ್ಬರೂ ಊರಿಗೆ ಮರಳಿದರು. ಬಸ್ಸು ಇಳಿದು ಮನೆ ಹತ್ತಿರಕ್ಕೆ ಬರುತ್ತಿದ್ದಂತೆ ಬೀದಿಯ ಹೆಂಗಸರು ಇವರನ್ನೇ ನೋಡುತ್ತಾ ನಿಂತರು. ಹೆತ್ತ ಕರುಳು ದುಃಖ ತಡೆಯಲಾರದೇ ಬಿಕ್ಕಿ ಬಿಕ್ಕಿ ದಾರಿಯಲ್ಲೇ ಅಳುತ್ತಾ ಮನೆಗೆ ಬಂದಿತು.

ಕೆಲವು ಹೆಂಗಸರು "ದೇವರನ್ನ ಬೈದುದಕ್ಕೆ ಹೀಗೆ ಆಯ್ತೋ ಏನೋ...." ಇನ್ನೂ ಕೆಲವರು "ಪಾಪ ಮಗು ಮುದ್ದಾಗಿತ್ತು....ಒಂದೇ ಮಗುಯಿತ್ತು...." ಎಂದು ಏನೇನೋ ಆಡಿಕೊಳ್ಳುತ್ತಿದ್ದರು.

....

ನಾಗವೇಣಿಯ ತಂದೆ-ತಾಯಿಗಳು ಮದುವೆಗೆ ಮುಂಚೆಯೇ ಸತ್ತು ಹೋಗಿದ್ದರು. ಆದರೆ ಒಬ್ಬೇ ಒಬ್ಬ ಅಣ್ಣ ಇದ್ದ. ಅದು ನೆಪ ಮಾತ್ರಕ್ಕೆ ಮಗು ಸತ್ತ ಸುದ್ದಿ ಕೇಳಿ ಜನ ಏನೆಂದಾರು ಎಂಬ ಅಳುಕಿನಿಂದ ಮನಸ್ಸಿಲ್ಲದೇ ಬಂದು ತಂಗಿಯನ್ನು ಕೆಲವು ದಿನ ಊರಿಗೆ ಕರೆದುಕೊಂಡು ಹೋದ. ನಾಲ್ಕು ದಿನ ದುಃಖ ಮರೆತು ನೆಮ್ಮದಿಯಿಂದ ಇರಲಿ ಎಂದು ವಿನಯ ಕುಮಾರ್ ಕೂಡಾ ಕಳಿಸಿಕೊಟ್ಟರು.

....

ಅಂದು ಗಾಂಧೀ ಜಯಂತಿ. ಬಹಿರಂಗ ಸಭೆಗಳು ಸಮಾರಂಭಗಳು ನಡೆದವು. ಅಲ್ಲಿಯ ಶಾಸಕರು ಗಾಂಧೀವಾದದ ಬಗ್ಗೆ ಭಾರೀ ಭಾರೀ....ಹೇಳಿ ಅಂದೇ ರಾತ್ರಿ ನ್ಯಾಟ್ 69 ಕುಡಿದದ್ದು ಊರೆಲ್ಲಾ ಗುಲ್ಲಾಯಿತು.

ಮರುದಿನ ವಿನಯ ಕುಮಾರರು ಒಂದು ಬಹಿರಂಗ ಸಭೆ ಕರೆದು "ಗಾಂಧೀ ಜಯಂತಿಯ ದಿನ ಕುಡಿಯಬಾರದೆಂಬ ನಿಷೇಧಾಜ್ಞೆಯಿದ್ದರೂ.... ಶಾಸನ ಮಾಡುವ ಶಾಸಕರೇ ಬ್ರಾಂಡಿಯನ್ನು ಕುಡಿದಿದ್ದಾರೆ....ಅದೂ.... ಅಂದೇ ಗಾಂಧೀ ವಾದದ ಬಗ್ಗೆ ಹಗಲೆಲ್ಲಾ ಕೊರೆದು ಕುಡಿದಿದ್ದಾರೆ. ಶಾಸಕರೇ ಹೀಗಾದರೆ ನಮ್ಮ ದೇಶದ ಗತಿಯೇನು....?" ಎಂದು ಛೀಮಾರಿ ಹಾಕಿದರು.

ಶಾಸಕರ ಪರ ಗುಂಡಾಗಳಿಂದ ಗಲಾಟೆ, ಗೊಂದಲ, ಕಲ್ಲು ತೂರಾಟ ನಡೆದು ಪೋಲೀಸರು ಬಂದು ಲಾಠಿಯಿಂದ ಬಡಿದಾಗಲೇ ಪರಿಸ್ಥಿತಿ ಹತೋಟಿಗೆ ಬಂದಿತು.

... ...

ರಾತ್ರಿ ಹನ್ನೆರಡು ಗಂಟೆಯಾಗಿರಬಹುದು. ವಿದ್ಯುತ್ ದೀಪಗಳು ಆರಿ ಹೋಗಿದ್ದರಿಂದ ವಿನಯ ಕುಮಾರ ಲಾಂದ್ರದ ಬೆಳಕಿನಲ್ಲಿನ್ನೂ ಓದುತ್ತಿದ್ದರು

''ಟಕ್ ಟಕ್ ಟಕ್'' ಕದ ಬಡಿದ ಸಪ್ಪಳವಾಯಿತು. ''ಯಾರು...?" ಎಂದು ಕೇಳುತ್ತಾ ಬಂದು ಬಾಗಿಲು ತೆರೆದರು. ವಿನಯ ಕುಮಾರ್ ಅವರನ್ನು ನೋಡಿ ದಂಗಾದ. ಎಲ್ಲರ ಕೈಯಲ್ಲೂ ಬಡಿಗೆಗಳಿದ್ದವು. ಎಲ್ಲರೂ ಒಮ್ಮೆಲೇ ಒಳನುಗ್ಗಿ ಕದ ಹಾಕಿದರು.

''ನಿನ್ನಂತಹ ನೀಚ ಬದಕಿರಬಾರ್ದು" ರೌಡಿ ಗುಂಪಿನಲ್ಲಿದ್ದವನೊಬ್ಬ ಸಿಡುಕಿನಿಂದ ಹೇಳಿದ.

''ಯಾಕೆ...'' ವಿನಯ ಕುಮಾರ್, ಕೇಳಿದರು.

"ನೀನು ಮತ್ತು ನಿನ್ನ ಗುಂಪಿನವರಲ್ವೇನೋ... ಗುಡಿಯೊಳಗೆ ನುಗ್ಗಿ ರಾಮದೇವರನ್ನ ಕಾಲಿನಿಂದ ತುಳಿದವನು...!" ಎಲ್ಲರೂ ಕೂಗಿದರು.

"ಇಲ್ಲ, ಇದೆಲ್ಲಾ ಸುಳ್ಳು ನಾವ್ಯಾರೂ ಅಂತಹ ಹಲ್ಕಾ ಕೆಲಸ ಮಾಡಿಲ್ಲ; ಮಾಡೊರೂ ಅಲ್ಲ."

ಮಬ್ಬುಗತ್ತಲೆಯಲ್ಲೇ ವಿನಯ ಕುಮಾರ್ ಎಲ್ಲರನ್ನೂ ಗುರುತು ಹಿಡಿದು

''ನನ್ನ ವಿರುದ್ಧ ಪ್ರಿನ್ಸಿಪಾಲರಿಗೆ ದೂರು ಕೊಟ್ಟ ಜನ, ಗಾಂಧೀ ಜಯಂತಿ ಯಂದು ಕಲ್ಲಿನಿಂದ ಹೊಡೆದ ಜನ ನೀವೇ...! ನೀವೇ...! ಆ ಮತಾಂಧರು, ಧರ್ಮಾಂಧರು ಜಾತಿವಾದಿಗಳು ನಿಮಗೆ ನೀವೆ ಆ ನೀಚ ಕೆಲಸ ಮಾಡಿ ನನ್ನ ಮೇಲೆ ಸುಳ್ಳು ಅಪವಾದ ಹೊರಿಸುತ್ತಾ ಇದೀರಿ. ಅದೆಲ್ಲಾ ನನ್ನನ್ನ ಬಲಿ ತೆಗೆದುಕೊಳ್ಳಲಿಕ್ಕೆ ಮಾಡಿದ ಸಂಚು. ಇದಕ್ಕೆಲ್ಲಾ ನಾ ಹೆದರೋದಿಲ್ಲ. ಇಲ್ಲಿಂದ ಹೋಗ್ತಿರಾ ಇಲ್ಲ ! ಎನ್ನುವಷ್ಟರಲ್ಲಿ "ಅಯ್ಯೋ" ಎಂದು ವಿನಯ ಕುಮಾರರು ಕೆಳಗೆ ಬಿದ್ದರು. ರಕ್ತದ ಮಡುವಿನಲ್ಲಿ ಅವರ ಕೈ ಕಾಲು ಕೊಂಚ ಹೊತ್ತು ಒದ್ದಾಡಿ ಸುಮ್ಮನಾದವು.

ರಿಕ್ಷಾ ಸಾಬು

ಬಳ್ಳಾರಿಯ ಬಸ್ ನಿಲ್ದಾಣದಲ್ಲಿ ಬಸ್ಸು ಇಳಿದಕೂಡಲೇ "ರಿಕ್ಷಾ ಬೇಕಾ ಸಾರ್, ರಿಕ್ಷಾ ಹೋನಾ ಸಾಬ್...." ಎಂದು ಪ್ರಯಾಣಿಕರನ್ನು ಸುತ್ತುವರಿದು ನಾ ಮುಂದು, ತಾ ಮುಂದು ಎಂದು ಪೈಪೋಟಿಯಿಂದ ಕೈಯಲ್ಲಿರುವ ಸಾಮಾನುಗಳನ್ನು ಕಸಿದುಕೊಳ್ಳುತ್ತಾ "ಹತ್ರೀ ಸಾಬ್" ಎಂದು ಗಡವಣಿಕೆಯಿಂದ ಹತ್ತಿಸಿಕೊಂಡು "ಹಣ ಎಷ್ಟು ಕೊಡಬೇಕು" ಎಂದು ಕೇಳಿದರೆ "ಎಷ್ಟಾದರೂ ಕೊಡಿ ಸಾಬ್" ಎಂದು ಉತ್ತರ ಕೊಟ್ಟು ಮನೆ ಬಂದಾಕ್ಷಣ ತಕರಾರು ತೆಗೆದು ಮೂರು ನಾಲ್ಕು ರೂಪಾಯಿ ಕಸಿದುಕೊಳ್ಳುವ ರಿಕ್ಷಾಕಾರರು ಇಲ್ಲಿ ತುಂಬಿಕೊಂಡಿದ್ದಾರೆ.

ಆದರೆ ಕೈಚೀಲ ಸಾಮಾನುಗಳನ್ನ ಎತ್ತಿಕೊಂಡು ರಿಕ್ಷಾದಲ್ಲಿಟ್ಟು ವಿನಯದಿಂದ "ಹತ್ತಿಕೊಳ್ರಿ ಸಾಬ್" ಎಂದು ರಿಕ್ಷಾ ಹತ್ತಿಸಿಕೊಂಡು, ಮನೆ ಬಂದ ಕೂಡಲೇ ಸುರಕ್ಷಿತವಾಗಿ ಸಾಮಾನುಗಳನ್ನು ಅವರವರ ಮನೆಯೊಳಗಿಳಿಸಿ ಕೊಟ್ಟಷ್ಟೇ ತೆಗೆದುಕೊಂಡು "ಸಲಾಂ ಸಾಬ್" ಎಂದು ಹಿಂದಿರುಗುತ್ತಿದ್ದವನೆಂದರೆ ಅಲ್ಲಾಭಕ್ಷಿ ಒಬ್ಬನೇ. ಇವನು ಬಹುತೇಕ ಪ್ರಯಾಣಿಕರ ವಿಶ್ವಾಸಗಳಿಸಿಕೊಂಡಿದ್ದ. ಜನರು ಬಸ್ಸು ಇಳಿದ ಕೂಡಲೇ ಹಮಾರ ಅಲ್ಲಾಭಕ್ಷಿ ಸಾಬ್ ಎಲ್ಲಿ ಹೋಗ್ಯಾನೆ ಎಂದು ಆಕಡೆ ಈಕಡೆ ಕಣ್ಣಾಯಿಸಿ ಹುಡುಕುವುದೂ ಉಂಟು.

ಆಗಲೇ ಇವನು ನಲವತ್ತೈದರ ಗಡಿ ದಾಟಿದ್ದ. ಇವನ ಸಂಸಾರವೆಂದರೆ ಹೆಂಡತಿ ಮತ್ತು ಒಬ್ಬೇ ಒಬ್ಬ ಮಗಳು. ಗಂಡನೊಬ್ಬನೇ ದುಡಿದದ್ದು ಸಾಕಾಗುತ್ತಿರಲಿಲ್ಲವೆಂದು ಹೆಂಡತಿನೂ ಕೂಡಾ ಬಸ್ ಸ್ಟ್ಯಾಂಡ್ ಗೇಟ್ ಹತ್ತಿರ ಕುಳಿತು ಶೇಂಗ ಮಾರುತ್ತಾಳೆ. "ಹತ್ತು ಪೈಸಕ್ಕೊಂದು ಗುಂಪಿ" ಎಂದು ಕೂಗಿ ಮಾರುತ್ತಾಳೆ. ದಿನಕ್ಕೆ ನಾಲ್ಕು ಸೇರು ಶೇಂಗ ಮಾರಿದರೆ ಎರಡು ರೂಪಾಯಿ ಉಳಿಯುತ್ತಿತ್ತು.

ರಾತ್ರಿಯತನಕ ರಿಕ್ಷಾ ತುಳಿದರೆ ಹತ್ತೋ ಹನ್ನೆರಡೋ ಸಿಗುತ್ತಿತ್ತು. ಇದರಲ್ಲಿ ಮಾಲಿಕನಿಗೆ ಆರು ರೂಪಾಯಿ ಬಾಡಿಗೆ ಕೊಟ್ಟು ಉಳಿದ ಹಣದೊಂದಿಗೆ ಹೆಂಡತಿಯ ಜೊತೆ ಕೌಲು ಬಜಾರಿನಲ್ಲಿರುವ ಗುಡಿಸಲಿಗೆ ಹೋಗಿ ಸೇರಿಕೊಳ್ಳುತ್ತಾನೆ. ಮನೆ ಸೇರಲು ದಿನಾಲೂ ರಾತ್ರಿ ಹತ್ತೋ, ಹನ್ನೊಂದೋ ಆಗುತ್ತದೆ. ಅಷ್ಟು ಹೊತ್ತಿಗಾಗಲೇ ಮಗಳು ರೊಟ್ಟಿಯನ್ನೋ, ಮುದ್ದೆಯನ್ನೋ ಮಾಡಿ ತಂದೆ–ತಾಯಿಗಳನ್ನು ಕಾಯುತ್ತಿರುತ್ತಾಳೆ.

ಮಗಳಿಗೆ ಆದಷ್ಟು ಬೇಗ ಮದುವೆ ಮಾಡಿ ನಿಶ್ಚಿಂತಿಯಿಂದ ಇರಬೇಕೆಂದು ಇಬ್ಬರ ಅನಿಸಿಕೆಯಾದರೂ ವರೋಪಚಾರ ಮಾಡಲು ಶಕ್ತಿಯಿಲ್ಲದ ಈ ಬಡ ಭಕ್ಷಿಯ ಮನಿಗೆ ಕನ್ಯ ಕೇಳಿಕೊಂಡು ಯಾರೂ ಬರುತ್ತಿರಲಿಲ್ಲ.

ವರಗಳಿಗಾಗಿ ಅಲ್ಲಿ ಇಲ್ಲಿ ಅಲೆದು ಸುಸ್ತಾಗಿದ್ದ. ಒಂದು ದಿನ ಪುರುಸೊತ್ತು ಮಾಡಿಕೊಂಡು ವರ ಹುಡುಕಲು ಯಾವುದಾದರೂ ಊರಿಗೆ ಹೊರಟರೆ ಆ ದಿನದ ಊಟಕ್ಕೂ ಸಂಚಕಾರ ಬರುತ್ತಿತ್ತು. ಯಾವಾಗ ಮಗಳಿಗೆ ಮದುವೆ ಯಾಗುತ್ತದೆಯೋ ಎಂದು ಕೈ ಹೊತ್ತು ಕೂತಿದ್ದರು.

ಮಗಳಾದರೂ ನೋಡಲಿಕ್ಕೆ ಅಷ್ಟು ಚಂದವಿಲ್ಲದಿದ್ದರೂ ಕುರೂಪಿಯೇನೂ ಆಗಿರಲಿಲ್ಲ. ವರಗಳು ಐದುಸಾವಿರ, ಹತ್ತುಸಾವಿರ, ವರದಕ್ಷಿಣೆ, ಮೇಲೆ ವರೋಪಚಾರ ಕೇಳುತ್ತಿದ್ದರು. ದಿನಾಲೂ ದುಡಿದದ್ದು ಹೊಟ್ಟೆಗೇ ಸಾಲದು ಎಂದ ಮೇಲೆ ವರದಕ್ಷಿಣೆ, ವಗೈರೆ ಎಲ್ಲಿಂದ ತಂದಾನು.

ಇತ್ತಿತ್ತಲಾಗಿ ದುಡಿಮೆ ಜಾಸ್ತಿ ಮಾಡಿ, ಖರ್ಚು ಕಡಿಮೆ ಮಾಡಿ ತಲಾ ಒಂದೊಂದು ರೂಪಾಯಿಯನ್ನು ಅಡಕಲ ಗಡಿಗೆಯಲ್ಲಿ ಕಲೆಹಾಕುತ್ತಿದ್ದರು.

ಹರಕು ನಿಕ್ಕರ್ ಮತ್ತು ಬನೀನಿನಲ್ಲಿ ವರ್ಷವಿಡೀ ಅಲ್ಲಾಭಕ್ಷಿ ಕಳೆದರೆ ಅವನ ಹೆಂಡತಿ ಒಂದೇ ಸೀರೆಯಲ್ಲಿ ಇಡೀ ವರ್ಷವನ್ನೇ ಕಳೆಯುತ್ತಿದ್ದಳು. ಆದರೆ ಮಗಳಿಗೆ ಮಾತ್ರ ಯಾವುದನ್ನೂ ಕಡಿಮೆ ಮಾಡಿರಲಿಲ್ಲ. ಇದ್ದುದರಲ್ಲೇ ವರ್ಷಕ್ಕೆ ರಡು ಸೀರಿ, ಕುಪ್ಪಸ, ಬಳಿ, ಪೌಡರ್.... ಮುಂತಾದವುಗಳನ್ನ ಮಗಳು ಚಂದಾಗಿರಲಿ ಎಂದು ತಂದು ಕೊಡುತ್ತಿದ್ದರು.

ದಿನಾಲೂ ಸುಡುವ ಬಿಸಿಲಿನಲ್ಲಿ ರಿಕ್ಷಾ ತುಳಿದು, ತುಳಿದು ಮತ್ತು ಮಗಳ ಮದುವೆ ಬಗ್ಗೆ ಚಿಂತೆ ಮಾಡಿ ಮಾಡಿ ಅಲ್ಲಾಭಕ್ಷಿ ತೆಳ್ಳಗೆ ಕಡ್ಡಿಯಂತಾದ. ಮುಖ ಒಣಗಿ ಗಲ್ಲಗಳೆಲ್ಲಾ ಇಳಿದು ಮುಖದಲ್ಲಿ ಬರೀ ಹಲ್ಲುಗಳೇ ಕಾಣುತ್ತಿದ್ದವು.

ಒಮ್ಮೆ ಕಾಲು ಬಾವು ಬಂದು ಇಡೀ ಎರಡು ದಿನ ನೋವಿನಿಂದ ನರಳುತ್ತಾ ಮಲಗಿದ. ನಡೆಯಲೂ ಆಗದೇ ಅಳುತ್ತಿದ್ದ. ಇದೇ ಸ್ಥಿತಿಯಲ್ಲೇ ನಡೆದುಕೊಂಡು, ಆಸ್ಪತ್ರೆಗೆ ಹೋಗಿ ತೋರಿಸಿಕೊಳ್ಳುವ ಹೊತ್ತಿಗೆ ಸಾಕು ಸಾಕಾಗಿ ಹೋಗಿದ್ದ. ದುಡಿಮೆ ಇಲ್ಲದೇ ಆ ಎರಡೂ ದಿನ ತಣ್ಣೀರು ಕುಡಿದು ಮಲಗುವ ಹೊತ್ತು ಬಂದಿತ್ತು.

"ಆಗಲೇ ಹನ್ನೊಂದ್ಗಂಟೆ ಆಗ್ಯಾತಂತೆ. ನಾ ಜಲ್ದಿ ಹೋಗಿ ಶೇಟ್‌ಜೀಗೆ ರಿಕ್ಷಾ ಬಾಡಿಗಿ ಕೊಟ್ಟು ಬಂದುಬಿಡ್ತಿನಿ. ನೀ ಇಲ್ಲೇ ಇರು."

"ನಾಳೆ ಬೆಳಿಗ್ಗೆ ಕೊಟ್ರಾತು ಬಿಡ್ರಿ, ಕತ್ತಲಾಗ್ಯಾಕೆ ಹೋಕಿರಿ."

"ನಹೀ.... ಆ ಸೇಟ್‌ಗೆ ಅವತ್ತಿನ ಬಾಡ್ಗಿ ಅವತ್ತೇ ಕೊಡಬೇಕು. ಇಲ್ಲಾ ಅಂದ್ರೆ ನಾಳೆ ಮುಂಜಾನೆ ಬಂದು ರಿಕ್ಷಾ ಕಸ್ಗಂಡು ಬ್ಯಾರೇರಿಗೆ ಬಾಡ್ಗಿ ಕೊಟ್ಟು ಬಿಡ್ತಾನೆ."

"ಅಂಗಾರೆ ಜಲ್ದಿ ಹೋಗಿ ಬರ್ರಿ, ಬಹಳ ಹೊತ್ತಾಗೆತಿ ಮುಕ್ತುಂಬಿ ಒಬ್ಳೇ ಅದಾಳ ಗುಡಿಸಲಾಗ."

"ಐದು ನಿಮಿಷದಾಗೆ ಬಂದುಬಿಡ್ತೀನಿ ಜೋದೋ" ಎಂದು ರಿಕ್ಷ ಹತ್ತಿದ.

ಅಲ್ಲಾಭಕ್ಷಿ ಶೇಟ್‌ಜಿಗೆ ಬಾಡಿಗೆ ಕೊಟ್ಟು ಬಂದು ಹೆಂಡತಿನಾ ರಿಕ್ಷಾದಲ್ಲಿ ಹತ್ತಿಸಿಕೊಂಡು ಗುಡಿಸಲು ಸೇರಿದ.

"ದರ್ವಾಜ ಖೋಲೋ ಮುಕ್ತು" ಮಗಳನ್ನು ಎಬ್ಬಿಸಿದರು. ಒಳಗಡೆ ಯಿಂದ ಮಾತು ಬರಲಿಲ್ಲ.

"ಉಟೋಮಾ ಬೇಟಿ, ದರ್ವಾಜ ಖೋಲೋ" ಎಂದು ಮತ್ತೊಮ್ಮೆ ಕೂಗಿದರೂ ಮಗಳು ಏಳಲಿಲ್ಲ.

"ಕ್ಯಾ ಹೋಗಯಾ ಅಂದರ್" ಬಾಗಿಲನ್ನು ದೂಡಿದ, ಬಾಗಿಲು ತೆರೆದೇ ಇತ್ತು, ಚಿಲಕ ಹಾಕಿದ್ದಿಲ್ಲ.

"ಸೋಗಯಾ ಕ್ಯಾ ಮುಕ್ತುಂಬಿ" ಕತ್ತಲಲ್ಲಿ ಮಾತನಾಡಿಸಿದ.

ಜೇಬಿನೊಳಗೆ ಕೈ ಹಾಕಿ ಕಡ್ಡಿ ಪಟ್ಟಣ ತೆಗೆದು ಚರ್.... ಎಂದು ಕೆರೆದು ಮಗಳಕಡೆಗೆ ಬೆಳಕು ಹಿಡಿದ.

"ಅಯ್ಯೋ ಅಲ್ಲಾ.... ಕ್ಯಾ ಹೋಗಯಾ ಬೇಟಿಕ್ಕೋ" ಮಗಳ ಮೇಲೆ ಬಿದ್ದು ಬೋರಾಡಿ ಇಬ್ಬರೂ ಅಳಹತ್ತಿದರು.

ಮುಕ್ತುಂಬಿ ನಗ್ನಳಾಗಿ ಬಿದ್ದಿದ್ದಾಳೆ. ಸ್ತನಗಳ ಮೇಲೆಲ್ಲಾ ಹಲ್ಲುಗಳಿಂದ ಕಡಿದ ಗಾಯಗಳಾಗಿವೆ, ತೊಡೆಯಲ್ಲಾ ರಕ್ತಮಯವಾಗಿದೆ.

"ಅಯ್ಯೋ ನನ್ನ ಮಗಳನ್ನ ಯಾರೋ ಸುಳೇಮಕ್ಳು ಕೆಡಿಸಿ ಓಡಿ ಹೋಗ್ಯಾರೆ" ಅಲ್ಲಾಭಕ್ಷಿ ಕತ್ತಲಲ್ಲೇ ಎದೆ ಬಡಿದುಕೊಂಡು ಅತ್ತ.

ಪಕ್ಕದ ಗುಡಿಸಲುಗಳ ಜನ ಸೇರಿದರು, ಬೆರಗಾಗಿ ನಿಂತರು. ಬಿದ್ದು ಬಿದ್ದು ಅಳುತ್ತಿರುವ ತಂದೆ–ತಾಯಿಗಳನ್ನ ಸಮಾಧಾನ ಪಡಿಸಹತ್ತಿದರು.

ಅಲ್ಲಾಭಕ್ಷಿ ಮೇಲೆದ್ದು ರಿಕ್ಷಾ ಹತ್ತಿದ, ಬರ ಬರ ತುಳಿದ. ಮೈಯೆಲ್ಲಾ ಬೆವೆತು ನೀರಾಗಿ ಕಣ್ಣೀರಿನ ಜೊತೆ ಬೆರೆಯಿತು. ದಸ ದಸ ತೇಕಹತ್ತಿದ.

"ಡಾಕ್ಟರ ಸಾಬ್....ಡಾಕ್ಟರ ಸಾಬ್...." ಎಂದು ಮನೆ ಬಾಗಿಲು ಬಡಿದ. ಡಾಕ್ಟರ್ ಗಾಭರಿಯಿಂದ "ಯಾರೂ...." ಎಂದು ಬಾಗಿಲು ತೆಗೆದರು.

"ಮೇರೆ ಬೇಟಿಕೊ ಬಚಾವ್ ಸಾಬ್ !, ಮೇರೆ ಬೇಟಿಕೋ ಬಚಾವ್ ಸಾಬ್ !" ಕಾಲು ಹಿಡಿದುಕೊಂಡು ಕಣ್ಣೀರು ಹಾಕಿದ.

ಡಾಕ್ಟರನ್ನ ರಿಕ್ಷಾದಲ್ಲಿ ಹತ್ತಿಸಿಕೊಂಡು ಮೈಮೇಲೆ ಎಚ್ಚರವಿಲ್ಲದೇ ಜೋರಾಗಿ ತುಳಿಯಹತ್ತಿದ. ರಿಕ್ಷಾದ ಚಕ್ರಗಳಿಗಿಂತಲೂ ಇವನ ಕಾಲು ರಭಸ ದಿಂದ ತಿರುಗುತ್ತಿದ್ದವು. ಗುಡಿಸಲಿಗೆ ಬರುವ ಹೊತ್ತಿಗೆ ಹೆಂಡತಿ ಕೂಡಾ ಮಗಳ ಮಗ್ಗುಲಲ್ಲೇ ಬಿದ್ದಿದ್ದಳು. ಡಾಕ್ಟರ್ ಪರೀಕ್ಷಿಸುತ್ತಿರುವಾಗ ದಸ್ ದಸ್ ತೇಕುತ್ತಾ ಗಾಭರಿಯಿಂದ ಡಾಕ್ಟರನ್ನೇ ನೋಡುತ್ತಿದ್ದ.

ತಾಯಿ ಮತ್ತು ಮಗಳನ್ನು ಪರೀಕ್ಷಿಸಿದ ನಂತರ "ಮಾಫ್ ಕರೋ ಭಕ್ಷಿ...." ಅಂದಾಗ ಎದೆ ಬಡಿದುಕೊಂಡು, ಬೋರಾಡಿ, ಬಿದ್ದು ಬಿದ್ದು ಹೆಂಡತಿ ಮಗಳ ಮೇಲೆ ಮಲಗಿ ಸಣ್ಣ ಮಗುವಿನಂತೆ ಅಳಹತ್ತಿದ.

ಈಗ ಅಲ್ಲಾಭಕ್ಷ್ನಿಗೆ ಲಕ್ವಾ ಹೊಡೆದಿದೆ. ಕೈ ಎತ್ತಲೂ ಬರುತ್ತಿಲ್ಲ. ಕಾಲುಗಳು ನಡೆಯ ಬರುತ್ತಿಲ್ಲ. ಮಯೂರ ಹೋಟಲ್ ಮುಂದೆ ಕುಳಿತು ಕೈ ಚಾಚಿ ಭಿಕ್ಷೆ ಬೇಡುತ್ತಿದ್ದಾನೆ.

ರಿಕ್ಷಾದಲ್ಲಿ ಹತ್ತಿಸಿಕೊಂಡು ನಿಯತ್ತಿನಿಂದ ಅವರವರ ಮನೆಗಳಿಗೆ ಬಿಟ್ಟು ಬರುತ್ತಿದ್ದ ಈ ಅನಾಥನನ್ನು ಎಲ್ಲರೂ ಕಂಡೂ ಕಾಣದವರಂತೆ ಹೋಗುತ್ತಿದ್ದಾರೆ. ಪರಿಚಯವಿದ್ದೂ ಪರಿಚಯವಿಲ್ಲದವರಂತೆ ನಟಿಸುತ್ತಿದ್ದಾರೆ.

ಬಳ್ಳಾರಿಯ ನಲವತ್ತೆರಡು ಡಿಗ್ರಿ ಬಿಸಿಲಿನಲ್ಲಿ ಸಾವಿನ ದಿನಕ್ಕಾಗಿ ಎದುರು ನೋಡುತ್ತಾ ಕುಳಿತಿದೆ ಈ ಜೀವ.

ಕಪ್ಪು ಹುಡುಗ

ಬಹಳಾ ದಿನಗಳಿಂದಲೂ ಹಾಳು ಬಿದ್ದಿದ್ದ ಮಾರ್ಕೆಟ್ಟಿನಲ್ಲಿರುವ ಮುನ್ಸಿಪಾಲಿಟಿಯ ಹಳೇ ಷೆಡ್ಡುಗಳಲ್ಲಿ ಮನೆ ಮಠಗಳಿಲ್ಲದ ಅನಾಥ ಭಿಕ್ಷುಕರು ಬಿಡಾರ ಹೂಡಿದ್ದರು.

ಡುಗು, ಡುಗು ಅಂತ ರುಮ್ಮಿ ಬಡಕೊಂಡು ದುರ್ಗವ್ವನನ್ನು ಆಡಿಸುವವರದೊಂದು ಗುಂಪಾದರೆ, ಗಿಳಿ ಶಕುನ ಹೇಳುವವರದೊಂದು. ಗಂಗಿ ಗೌರಿ ಆಡ್ಸೋರದು, ಹರಕು ಮುರುಕು ತಟ್ಟೆಗಳಲ್ಲಿ ಭಿಕ್ಷೆ ಬೇಡವವರು........ಹೀಗೆ ಗುಂಪು ಗುಂಪು. ಒಂದೊಂದು ಗುಂಪು ಒಂದೊಂದು ಕಟ್ಟೆಯನ್ನ ಆಕ್ರಮಿಸಿಕೊಂಡು ನಾಗರಿಕ ಮಾನವರ ಮಧ್ಯೆ ಆದಿಮಾನವರಂತೆ ಬದಕುತ್ತಿದ್ದಾರೆ.

ಬಟಾ ಬಯಲಿನಲ್ಲೇ ಇವರ ಸಂಸಾರ. ಇದೇ ಕಟ್ಟೆಯ ಮೇಲೆ ಬಸಿರಾಗಿ ಕಟ್ಟೆಯ ಮೇಲೆಯೇ ಹಡೆದಿದ್ದಾರೆ. ಹಡೆಯುತ್ತಲೇ ಇದ್ದಾರೆ.

ನೀವು ಇಂತಹ ಸಂಸಾರಗಳನ್ನ ನಿಮ್ಮ ಊರುಗಳಲ್ಲಿ ನೋಡಿರಬಹುದು.

ಬೆಳಗಿನಿಂದ ಸಾಯಂಕಾಲದವರೆಗೂ ತಿರುಪೆಯೆತ್ತಿ ಬಂದ ಕಾಸಿನಲ್ಲಿ ಅರ್ಧ ಜಿನ್ನಿಗೆ ಹಾಕಿಸಿ, ಇನ್ನರ್ಧ ಮಾರಿ ದುಡ್ಡು ಜಮಾಯಿಸಿಕೊಂಡು ಕುಡಿದು ಬರೊರೆ ಜಾಸ್ತಿ. ಕುಡಿದು ಬಂದಮೇಲೆ ಸುಮ್ಮನಿರೋದೇಗೆ ಸಾಧ್ಯ? ಜಗಳ, ಜಗಳ, ಬರೀ ಜಗಳ. ಕೂಗ್ಯಾಡಿ, ಚೀರ್ಯಾಡಿ ಜಗಳ ಮಾಡುತ್ತಲೇ ಕಟ್ಟೆ ಕೆಳಗಡೆ ಹೂಡಿದ ಕಲ್ಲಿನ ಒಲೆಯ ಮೇಲೆ, ರೊಟ್ಟಿನೋ, ಮುದ್ದಿನೋ ಅಥವಾ ಅಂಬಲಿನೋ ಬೇಯಿಸುತ್ತಾ ಕೂತಿರುತ್ತಾರೆ. ಇನ್ನೂ ಕೆಲವರು ತಿರುಪೆ ಎತ್ತಿಕೊಂಡು ಬಂದಿದ್ದ ಕಟುಗು ರೊಟ್ಟಿಯ ತುಂಡನ್ನ ಮಕ್ಕಳ ಕೈಯಲ್ಲಿ ತಿನ್ನುವುದಕ್ಕೆ ಕೊಟ್ಟಿರುತ್ತಾರೆ. ಮಕ್ಕಳಂತೂ ಅಳೋರು ಅಳುತ್ತಿರುತ್ತಾರೆ, ಆಡೋರು ಆಡುತ್ತಿರುತ್ತಾರೆ.

ಕುಡಿದ ನಿಶೆಯಲ್ಲಿ ಹೆಂಡಿರು ಮಕ್ಕಳನ್ನ ಬಯ್ಯೋದು, ಹೊಡೆಯೋದನ್ನ ನೋಡಿದರೆ ಇವರೆಂತಹ ಅನಾಗರಿಕ ಜನ ಅಂತ ಅನಿಸಬಹುದು. ಈ ನಾಗರಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವರು ವಂಚನೆಗೀಡಾದ ಜನ. ಈ ದೇಶದ ಜನ ರಾಗಿಲ್ಲದ ಜನ. ಅನೇಕ ದಶಕಗಳಾದರೂ ಸರ್ಕಾರದ ಕಣ್ಣಿಗೆ ದರ್ಶನವಾಗದೇ ಇರುವ ಜನ, ಅಲ್ಲವೇ.....

ತರಕಾರಿ ತರಲಿಕ್ಕೆ ಬರುವ ಜನ ಈ ಅನಾಥರನ್ನ ಯಾರೂ ಗಮನಿಸೋದೇ ಇಲ್ಲ. ಅವರಿಗೂ ದಿನಾಲೂ ಇವರನ್ನ ನೋಡಿ, ನೋಡಿ ಬೇಜಾರನೋ, ಅಸಹ್ಯವೋ, ಅಸಹನೀಯವೋ ಅಥವಾ ದಿನಾ ಸಾಯುವವರಿಗೆ ಅಳುವರಾರು ಎನ್ನುವ ಬೇಜಾವಾಬ್ದಾರಿನೋ........ಏನೆಲ್ಲಾ ಇರಬಹುದು.

ರಾತ್ರಿ ಹತ್ತು-ಹನ್ನೊಂದು ಗಂಟೆಯವರೆಗೂ ಪೇಚಾಡಿ, ಪೇಚಾಡಿ ಮಲಗೋದು ಇವರ ದಿನನಿತ್ಯದ ಕಾರ್ಯಕ್ರಮ. ಮತ್ತೆ ಬೆಳಗ್ಗೆ ಎದ್ದ ಕೂಡಲೇ ಇದ್ದೇಯಿದೆಯಲ್ಲ ಇವರ ತಿರುಪೆ, ನಂತರ ಕುಡಿತ, ಜಗಳ....ಇತ್ಯಾದಿ.

ಇಂತಹ ಜಗಳ, ರಂಪಾಟ, ಪೇಚಾಟಗಳ ಮಧ್ಯೆ ಯಾವ ಗೋಜಿಗೂ ಹೋಗದ ಒಬ್ಬ ಕುಂಟುಗಾಲಿನ ಭಿಕ್ಷುಕಿ ಮತ್ತು ಅವಳ ಏಳೆಂಟು ವರ್ಷದ ಮಗ. ಈಕೆಗೆ ಇವನು ಒಬ್ಬನೇ ಮಗ ಅಂತ ಕಾಣುತ್ತಿತ್ತು. ತಾಯಿಯ ಜೊತೆ ತಿರುಪೆಯೆತ್ತಿ ತಂದ ಒಣಕಲು ರೊಟ್ಟಿಯನ್ನೋ, ತಂಗಳನ್ನವನ್ನೋ ತಿನ್ನುತ್ತಾ ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದ. ನಾಲ್ಕಡಿ ಉದ್ದದ ಕಪ್ಪು ದೇಹ, ದುಂಡು ಮುಖ, ಮುಂದಹಾಸದ ಕಣ್ಣುಗಳು, ಮೈ ತುಂಬಿಕೊಂಡು ಒಳ್ಳೇ ಗುಂಡಗಿದ್ದ. ಏನೆಲ್ಲಾ ಪೌಷ್ಟಿಕ ಆಹಾರವನ್ನು ಕೊಟ್ಟು ಬೆಳೆಸಿದ ನನ್ನ ಮಗ ಕೂಡಾ ಅಷ್ಟು ಕಟ್ಟುಮಸ್ತಾಗಿ ಬೆಳೆದಿದ್ದಿಲ್ಲ. ಇಂತಹ ಅನಾಥ ಜನರಿಗೆ ಚಳಿ, ಮಳೆ, ಬಿಸಿಲೂ ಕೂಡ ಹೇಗೆ ಹೊಂದಿಕೊಂಡಿದೆಯಲ್ಲಾ, ಎಂದೆನಿಸಿತು.

ಕುಂಡಿ ಕಾಣುವ ಚಡ್ಡಿ, ನಾಲ್ಕಾರು ಕಡೆ ಹರಿದು ಕೋಳೆಯಾಗಿದ್ದ ಆ ಬಟ್ಟೆಗಳಲ್ಲೇ ಮುದ್ದಾಗಿ ಕಾಣುತ್ತಿದ್ದ. ಒಳ್ಳೆಯ ಬಟ್ಟೆಗಳಿದ್ದರೆ ಇವನೂ ಸುಂದರನಾಗಿ ಕಾಣಿಸುತ್ತಿದ್ದನಲ್ಲವೇ ? ಚನ್ನಾಗಿ ಓದು ಬರಹ ಕಲಿಸಿದರೆ ಇಂತಹ ಮಕ್ಕಳೂ ದೊಡ್ಡ ದೊಡ್ಡ ವಿಜ್ಞಾನಿಗಳೋ, ಸಾಹಿತಿಗಳೋ, ಆಗಲಿಕ್ಕೆ ಸಾಧ್ಯವಿಲ್ಲವೆ ?.

ಆದರೆ ಇಂತಹ ಎಷ್ಟೋ ಕುಡಿಗಳು ಅಜ್ಞಾತವಾಗಿಯೇ ಬದುಕಿ ಸಾಯುತ್ತಿವೆ ಈ ಅಸಮಾನತೆಯ ವ್ಯವಸ್ಥೆಯಲ್ಲಿ.

ಈ ಕಪ್ಪು ಹುಡುಗ ಅವನ ತಾಯಿ ಕುಡಿದು ಜಗಳವಾಡುವವರನ್ನು ನೋಡಿದರೆ ಹೆದರುತ್ತಿದ್ದರೆಂದು ಕಾಣುತ್ತದೆ. ಯಾವಾಗಲೂ ಒಂದುಕಡೆ ಮೂಲೆಯಲ್ಲಿ ಮೂಕರಂತೆ ಜಗಳವಾಡುವವರನ್ನು ನೋಡುತ್ತಾ ಕೂತಿರುತ್ತಿದ್ದರು.

ಒಂದು ದಿನ ನಾನೂ ತರಕಾರಿ ತಗಂಡು ಹೋಗೋಣಾ ಅಂತ ಬಂದೆ. ಲಬೋ, ಲಬೋ ವೈಕೊಳ್ಳೋದು, ಬಡಕೊಳ್ಳೋದು ನಡೆದಿತ್ತು.

ಮುನಿಸಿಪಾಲಿಟಿಯ ಸಿಬ್ಬಂದಿಯವರು ಪೋಲೀಸಿನವರ ರಕ್ಷಣೆಯೊಂದಿಗೆ ಈ ದಿಕ್ಕಿಲ್ಲದ ಜನರನ್ನ ಒಕ್ಕಲೆಬ್ಬಿಸುತ್ತಿದ್ದರು. ಇವರ ಹರಕು ಬಟ್ಟೆ ಗಂಟುಗಳು, ಮುರುಕು ಚಾಪೆ, ನೆಗ್ಗಿ ನುಗ್ಗಾದ ಭಿಕ್ಷೆಯೆತ್ತುವ ಪಾತ್ರೆಗಳನ್ನ ಎತ್ತಿ, ಎತ್ತಿ ಬೀದಿಗೆಸೆಯುತ್ತಿದ್ದರು.

"ಸೂಳೆಮಕ್ಳಾ ಇನ್ನೊಂದು ಸಲ ಈ ಕಟ್ಟೆ ಹತ್ತಿದ್ರೆ ಕಾಲುಗಣಿಕೆ ಮುರಿತೀವಿ. ಇವೇನೂ ನಿಮ್ಮಪ್ಪ ಕಟ್ಟಸಿದ ಸ್ವಂತ ಮನೆಗಳೂ ಅಂತ ತಿಳ್ಕೊಂಡಿರೇನ್ಲೇ ಬಡ್ಡಿಮಕ್ಳ...." ಪೋಲೀಸಿನವರು ಬಾಯಿಗೆ ಬಂದ ಹಾಗೆ ಬೈಯುತ್ತಾ ಇವರ ಸಾಮಾನುಗಳನ್ನೆಸೆಯುತ್ತಿದ್ದರು.

ಅವರಲ್ಲೇ ಒಬ್ಬ ಧೈರ್ಯ ಮಾಡಿ "ಸ್ವಾಮೀ....ಈಗ ಬೇರೆ ಮಳೆಗಾಲ, ನಮ್ಮನ್ನ ಇಲ್ಲಿಂದ ದಬ್ಬಿದ್ರೆ ಯಾವ ಸುಡುಗಾಡು ಸೇರ್ಕ್ಯಬೇಕು" ಪೋಲೀಸರ ಮುಂದೆ ಬಂದು ಎದೆ ಸೆಟೆಸಿ ಕೇಳಿದ. ಸಬ್‌ಇನ್ಸ್‌ಪೆಕ್ಟರ್ ಕಣ್ಣು ಕೆಂಪಗೆ ಮಾಡಿ ಪಳಾರ್ ಎಂದು ಅವನ ಕೆನ್ನೆಗೆ ಹೊಡೆದ. ಪಾಪ ಅವನ ಹಲ್ಲಲ್ಲಿ ಬಳ ಬಳ ರಕ್ತ ಸುರಿಯಿತು.

ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ಬೋರಾಡಿ ಅಳುತ್ತಿದ್ದರು. ನನಗಂತೂ ಆ ಪೋಲೀಸ್ ಅಧಿಕಾರಿಯ ಮೇಲೆ ಭಯಂಕರ ಸಿಟ್ಟು ಬಂದಿತ್ತು. "ಈ ಕೊಬ್ಬಿದ ರಾಕ್ಷಸರ ಕಾಲು ಮುರಿಯುವ ಕಾಲ ಎಂದು ಬರುತ್ತೋ" ಎಂದುಕೊಂಡೆ.

ಇವರ ಬೆದರಿಕೆಗೆ ಕಪ್ಪು ಹುಡುಗ ಮತ್ತು ಅವನ ತಾಯಿ ಗಡಗಡ ನಡ ಗುತ್ತಾ ಬದಿಗಿದ್ದ ಬೇವಿನ ಮರದ ಕೆಳಗೆ ಹೋಗಿ ಕೂತುಬಿಟ್ಟರು. ಹರಕು ಸೀರೆಯಲ್ಲಿ ಅವಳ ತೊಡೆಯ ಭಾಗವೆಲ್ಲಾ ಕಾಣುತ್ತಿತ್ತು.

ನೆರೆದ ಜನ ಇವರ ಪರವಾಗಿ ಒಬ್ಬನೂ ಮಾತಾಡಲಿಲ್ಲ. ತರಕಾರಿ ವ್ಯಾಪಾರಿಗಳಿಗೆ ಆದಷ್ಟು ಬೇಗ ಇವರನ್ನ ಆ ಸ್ಥಳ ಬಿಡಿಸುವದೇ ಇಷ್ಟವಾಗಿತ್ತು.

"ದಿನಾಲೂ ತರಕಾರಿ ಕದಿತಾರ್ರೀ ಈ ಬೋಳೀಮಕ್ಳು" ತರಕಾರಿ ವ್ಯಾಪಾರಿಯ ಮಾತುಗಳನ್ನ ಕೇಳಿ ನನಗೆ ಕೋಪ ಬಂದಿತ್ತು. ಎಲ್ಲಾ ಹಂತ ದಲ್ಲಿ ವಂಚನೆಗೀಡಾದ ಮನುಷ್ಯ ಹೇಗಾದರೂ ಎಂತಾದರೂ ಬದುಕಲು ಆಸೆ ಪಡುತ್ತಾನೆ. ಇದು ಅಪರಾಧ ಹೇಗೆ ಆಗುತ್ತದೆ.

ಆಕಾಶದಲ್ಲಿ ಮೋಡ ಆವರಿಸಿ ಮಳೆ ಸುರುವಾಯಿತು. ಪಳ ಪಳ ಎಂದು ಹನಿ ಜೋರಾಯಿತು. ನೆರೆದಿದ್ದ ಜನ ಆಚೆ ಈಚೆ ಸರಿದರು.

ಮುನ್ಸಿಪಾಲಿಟಿಯವರು ಮತ್ತು ಪೋಲೀಸರೂ ಸೇರಿ ಎಲ್ಲಾ ಸಾಮಾನು ಗಳನ್ನ ಬೀದಿಗೆಸೆದು "ಯಾವನಾದ್ರೂ ಈ ಕಟ್ಟೆಗಳನ್ನ ಹತ್ತಿದ್ರೆ ಜೈಲಿಗೆ ಹಾಕ್ತೀವಿ" ನಿರ್ಗತಿಕರನ್ನ ಹೆದರಿಸಿ ಜೀಪಿನಲ್ಲಿ ಹತ್ತಿಕೊಂಡು ಹೋದರು.

ಎಲ್ಲರೂ ಅಳುತ್ತಾ ತಮ್ಮ ತಮ್ಮ ಚಾಪಿ, ಭಿಕ್ಷಾಪಾತ್ರೆಗಳು, ದುರ್ಗಮ್ಮನ ಡಬ್ಬಿ, ಹರಕು ಬಟ್ಟೆ....... ಜೋಡಿಸಿಕೊಂಡು ಮಳೆಯಲ್ಲಿಯೇ ಬೇವಿನಮರದ ಕೆಳಗಡೆ ಹೋಗಿ ಕುಳಿತರು. ಒಂದುವರೆ ತಾಸು ಮಳೆ ಹೊಡೆಯಿತು. ಹೆಂಗಸರು, ಹುಡುಗರು, ಕೂಸುಗಳು ಮಳೆಯಲ್ಲಿ ನೆನೆದು ನಡುಗಹತ್ತಿದರು.

ಆಗಲೇ ರಾತ್ರಿ ಒಂಬತ್ತಾಯಿತು. ತೊಯ್ದ ಬಟ್ಟೆಯಲ್ಲಿ ಎಲ್ಲರೂ ಕುಕ್ಕರುಗಾಲಿನಲ್ಲಿ ಮರದಡಿ ಕುಳಿತೇ ಇದ್ದರು. ರಾತ್ರಿಯೆಲ್ಲಾ ಉಪವಾಸವಿರದೇ ಬೇರೆ ದಾರಿಯೇ ಇರಲಿಲ್ಲ.

ಮಳೆ ಜಿಟಿ, ಜಿಟಿ ಉದುರುತ್ತಲೇ ಇತ್ತು. "ಏನ್ರೀ ಮಳೆಯಲ್ಲಿ ತೋಯಿಸಿ ಕೊಂಡೇ ಬಂದಿದೀರಲ್ಲಾ" ಗಾಬರಿಗೊಂಡು ನನ್ನ ಹೆಂಡತಿ ವಸ್ತ್ರದಿಂದ ತಲೆ ಉಜ್ಜಿ, ಬಿಸಿ ಬಿಸಿ ಕಾಫಿ ತಂದು ಕೊಟ್ಟಳು. ಆಗ ಮೈಯೆಲ್ಲಾ ಸ್ವಲ್ಪ ಬೆಚ್ಚಗಾಯಿತು. ನಂತರ ಬಿಸಿ ಬಿಸಿ ಚಪಾತಿ ಅನ್ನ-ಸಾರು ಊಟ ಮಾಡುವಾಗ

ನಾನೆಂತಹ ಸ್ವಾರ್ಥಿ ಎಂದು ಮನದಲ್ಲೇ ಅಂದುಕೊಂಡೆ. ಆ ಜನ ಅಲ್ಲಿ ನಿರ್ಗತಿಕರಾಗಿ ಹಸಿವಿನಿಂದ ನರಳುತ್ತಿರುವಾಗ ನಾನು ಮಾತ್ರ ಬಿಸಿ ಬಿಸಿ ಊಟ ಮಾಡಿದೆನೆಲ್ಲಾ ಎನ್ನುವ ಸಂಕೋಚ ಮತ್ತೆ ಮತ್ತೆ ಕಾಡಿತು.

ನನ್ನಾಕೆ ಮಗನಿಗೆ ಸ್ವೆಟರ್ ಟೋಪಿ ಹಾಕುವಾಗ ಮಳೆಯಲ್ಲಿ ನೆನೆದು ನಡುಗುತ್ತಿರುವ ಆ ಕಪ್ಪು ಹುಡುಗನ ನೆನಪಾಗಿ ಜೀವ ಚುರ್ ಎಂದಿತು.

ಬೆಳಿಗ್ಗೆ ಹಾಸಿಗೆಯ ಮೇಲೆ ಲಟ್, ಲಟ್ ಮೈ ಮುರಿದು ಆಕಳಿಸುತ್ತಾ ಮೇಲೆದ್ದೆ. ತಕ್ಷಣವೇ ಆ ತಿರುಪೆ ಜನರ ನೆನಪಾಯಿತು. ತಣ್ಣನೆಯ ಗಾಳಿ ಬೀಸಿ ತುಂಬಾ ಚಳಿಯಾಗುತ್ತಿದ್ದುದರಿಂದ ತಲೆಗೆ ಮಾಫ್ಲರ್ ಕಟ್ಟಿಕೊಂಡು ಮಾರ್ಕೆಟ್ಟನತ್ತ ಹೆಜ್ಜೆ ಹಾಕಿದೆ.

ನಿನ್ನೆ ನೆರದಂತೆಯೇ ಬೇವಿನ ಮರದ ಕೆಳಗಡೆ ಜನ ಗುಂಪು ಕಟ್ಟಿದ್ದರು. ಗುಂಪಿನ ಮಧ್ಯದಿಂದ ಯಾರೋ ಅಳುತ್ತಿರುವುದು ಕೇಳಿಸಿತು. ನಿನ್ನೆ ರಾತ್ರಿಯಿಂದ ಸುರುವಾಗಿದ್ದ ಅವರ ಅಳು ಇನ್ನೂ ನಿಂತಿಲ್ಲವೇನೋ ಅಂದುಕೊಂಡೆ. ಗುಂಪಿನಿಂದ ಈಚೆ ಬಂದ ಒಬ್ಬನನ್ನು ವಿಚಾರಿಸಿದೆ. "ನಾಲ್ಕೈದು ತಿಂಗಳ ಬಸಿರು ಹೆಣ್ಣುಮಗಳೊಬ್ಬಳು ಸತ್ತಿದ್ದಾಳೆ" ಅಂದ.

ಪಾಪ ಇಡೀ ರಾತ್ರಿಯಲ್ಲಾ ಮಳೆ–ಚಳಿಯಲ್ಲಿ ಬಳಲಿ ಸತ್ತಿರಬಹುದೆಂದುಕೊಂಡೆ. "ಯಾಕೆ?" ಎಂದು ಮತ್ತೆ ಕೇಳಿದೆ. "ಏನೋ ಶೀತ ಆಗಿ ಸತ್ತಿರಬೇಕು" ಅಂದದ್ದಕ್ಕೆ ನಾನು "ಪಾಪ" ಎಂದು ಲೊಚಗುಟ್ಟಿದೆ. ಅದಕ್ಕವನು "ಎಲ್ಲಿ ಪಾಪರೀ....ಅವಳು ಆವರಿವರತ್ರ ಮಲಗಿ ಬಸಿರಾಗಿದ್ಲು"

ನನಗೂ ಕುತೂಹಲ ಹುಟ್ಟಿ ಯಾರು ನೋಡಿ ಬರೋಣಾ ಅಂತ ಗುಂಪಿನತ್ತ ಹೋಗಿ ಬಗ್ಗಿ ನೋಡಿದೆ. ಎದೆ ಧಸಕ್ ಅಂತು. ಕಪ್ಪು ಹುಡುಗನ ತಾಯಿ ಸತ್ತಿದ್ದಾಳೆ.

ತಾಯಿಯ ಹೆಣದ ಮುಂದೆ ಕುಳಿತುಕೊಂಡು ಅಮ್ಮಾ.... ಅಮ್ಮಾ ಎಂದು ಒಂದೇ ಸವನೇ ಆ ಮಗು ಅಳುತ್ತಿದೆ. ಅತ್ತು ಅತ್ತು ಅವನ ಕಣ್ಣೆಲ್ಲಾ ಕೆಂಪಾಗಿವೆ. ಬಾಯಿಯಲ್ಲಿ ಬುರುಗು ಬರಹತ್ತಿದೆ. ಮೂಗಿನಲ್ಲಿ ಸಿಂಬಳ ಸೋರಹತ್ತಿದೆ.

ಅಷ್ಟರಲ್ಲೇ ಮುನ್ಸಿಪಾಲಿಟಿಯ ಟ್ರ್ಯಾಕ್ಟರ್ ಬಂದು ಆ ಹೆಣನ ಹಾಕಿ ಕೊಂಡು ಹೋಯಿತು.

ಎಡೆಬಿಡದೇ "ಅಮ್ಮ.... ಅಮ್ಮ....ಎಂದು ದುಃಖಿಸಿ, ದಃಖಿಸಿ ಅಳುತ್ತಿದ್ದ ಆ ಅನಾಥ ಮಗುವಿನ ರೋಧನ ಕರುಳು ಕಿತ್ತುಬರುವಂತಿತ್ತು. ನನಗೆ ತಡೆಯ ಲಾಗಲಿಲ್ಲ. ಸ್ವಲ್ಪ ದೂರದಲ್ಲೇ ಇದ್ದ ಬ್ರೆಡ್ಡಿನಂಗಡಿಗೆ ಹೋಗಿ ಒಂದು ಪೌಂಡ್ ಬ್ರೆಡ್ಡು ತೆಗೆದುಕೊಂಡು ಬಂದು ಆ ಹುಡುಗನ ಕೈಗೆ ಕೊಟ್ಟು ಅವನ ಬಾಡಿದ ಮುಖವನ್ನೇ ನೋಡುತ್ತಾ ಮನೆಗೆ ಹೊರಟೆ.

ನನ್ನ ಭಾವಮೈದುನ ಅಲ್ಸರ್ ಆಪರೇಶನ್ ಮಾಡಿಸಿಕೊಳ್ಳಲು ಹುಬ್ಬಳ್ಳಿ ಕೆ. ಯಂ. ಸಿ. ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರಿಂದ ನೋಡಿಕೊಂಡು ಬರಲು ಹೊರಟೆವು.

ಒಂದು ವಾರ ಅಲ್ಲೇ ಇದ್ದು ಬೆಳಗಿನ ಜಾವ ನಮ್ಮ ಊರಿಗೆ ವಾಪಸು ಬಂದೆವು.

ಅಂದು ಮಕ್ಕಳ ದಿನಾಚರಣೆಯಿತ್ತು. ಶಾಲಾ ಮಕ್ಕಳೆಲ್ಲಾ ಸಮವಸ್ತ್ರ ಧರಿಸಿ ಬ್ಯಾಂಡು ಬಡಿದು ಗೀತೆ ಹಾಡುತ್ತಾ ಪ್ರಭಾತಪೇರಿ ಹೊರಟಿದ್ದರು.

ಲಗೇಜನ್ನ ಹೊರಿಸಿಕೊಂಡು ಮನೆಯತ್ತ ಹೊರಟೆವು. ನೆಹರು ಚೌಕಿನ ಮುಂದೆಯೇ ನಮ್ಮ ಮನೆಕಡೆ ಹೋಗುವ ರಸ್ತೆ ಇದೆ. ಚೌಕಿನ ಹತ್ತಿರ ಬಂದು ಮನೆಕಡೆ ರಸ್ತೆಗೆ ಹೊರಳಿದೆವು. ನಾಗರಾಜ ಶೆಟ್ಟಿಯ ಮನೆ ಮುಂದಿನ ರಸ್ತೆ ಯಲ್ಲಿ ಏಕೋ ಜನ ಸೇರಿದ್ದರು. ನೋಡಿದಾಕ್ಷಣ ಏನೋ ನಡೆದಿದೆ ಎನಿಸಿತು. ಆಚೆ ಹೋಗಿ ಏನಾಗಿದೆ ಎಂದು ಅಲ್ಲಿದ್ದವನನ್ನ ಕೇಳಿದೆ.

ಯಾವ್ದೋ ಭಿಕ್ಷುಕರ ಹುಡುಗ ಶೆಟ್ರು ಮನಿಯೊಳಗೆ ನುಗ್ಗಿ ಮಗನ ಹುಟ್ಟಿದಬ್ಬಕ್ಕೆಂದು ತಯಾರಿಸಿಟ್ಟಿದ್ದ ಕೇಕನ್ನ ಕದ್ಕಂಡು ಬರ್ತಿದ್ನಂತೆ. ಅದನ್ನ ನೋಡಿದ ಶೆಟ್ರು ಆ ಹುಡುಗನ್ನ ಹಿಡೀರಿ, ಹಿಡೀರಿ ಎಂದು ಹಿಂಬಾಲಿಸ್ತಿ ಬಂದ್ರಂತೆ. ಆ ಹುಡುಗ ಗೇಟಿನಾಗಿಂದ ಓಡಿ ರಸ್ತೆಗೆ ಕಾಲು ಇಡುತ್ತಿ ದ್ದಂತೆಯೇ ಆಚೆಯಿಂದ ಜೋರಾಗಿ ಬರುತ್ತಿದ್ದ ಕಾರಿನ ಗಾಲಿಗೆ ಬಿದ್ದು ಸತ್ತು ಹೋಗ್ಯಾನೆ.

ನಾನು ಅತ್ತ ಹೋಗಿ ನೋಡಿದೆ. ಎದೆ ಒಡೆದು ತುಂಡು ತುಂಡಾದಂತಾಯಿತು. ತಾಯಿ ಇಲ್ಲದ ತಬ್ಬಲಿ ಆ ಕಪ್ಪು ಹುಡುಗ ರಕ್ತದ ಮಡುವಿನಲ್ಲಿ ಬಿದ್ದು ಮೈ ಮುಖವೆಲ್ಲಾ ಕೆಂಪಾಗಿದೆ.

ಕಣ್ಣುಗಳು ಹನಿದುಂಬಿದವು. ಆ ದೃಶ್ಯ ನೋಡಲಾರದೇ ಭಾರವಾದ ಮನಸ್ಸಿನಿಂದ ಮುಖವನ್ನ ಆ ಕಡೆಗೆ ತಿರುಗಿದೆ.

ಜೈಕಾರ ಮಾಡುತ್ತಾ ಮಕ್ಕಳ ದಿನಾಚರಣೆಯ ಪ್ರಭಾತಪೇರಿ ನೆಹರೂ ಚೌಕಿನತ್ತ ಬರುತ್ತಿತ್ತು.

ಆ ಅಸಹ್ಯ ಜಯಕಾರಗಳನ್ನ ಬ್ಯಾಂಡಿನ ಬಡಿತವನ್ನ ರಕ್ತದ ಮಡುವಿನಲ್ಲಿ ಕಪ್ಪು ಹುಡುಗನ ದೇಹ ಅಣಕಿಸುತ್ತಿತ್ತು.

ಈ ಕ್ರೂರ ಶಿಕ್ಷೆ ನಿಲ್ಲಲಿ

ಸರ್ಕಾರಿ ವಕೀಲರ ಆರ್ಗ್ಯುಮೆಂಟನ್ನು ಕಣ್ಣು ರೆಪ್ಪೆ ಪಿಳುಕಿಸದೇ ತಲ್ಲೀನರಾಗಿ ಕೇಳುತ್ತಿದ್ದ ಸೆಷನ್ಸ್ ಜಡ್ಜ್ ಸತೀಶರು ಹಾಕಿಕೊಂಡಿದ್ದ ಕನ್ನಡಕವನ್ನು ತೆಗೆದು ಟೇಬಲ್ ಮೇಲೆ ಇಟ್ಟು "ನಿನ್ನದೇನಾದರೂ ಇದ್ದಲ್ಲಿ ಇಲ್ಲಿ ಹೇಳಬಹುದು" ಕಟಕಟೆಯಲ್ಲಿ ನಿಂತಿದ್ದ ಕಾಳನ ಮುಖ ನೋಡುತ್ತಾ ಕೇಳಿದರು.

ಇದುವರೆಗೂ ಖಿನ್ನಮನಸ್ಕನಾಗಿ ತಲೆ ತಗ್ಗಿಸಿ ನಿಂತಿದ್ದ ಕಾಳ ಒಮ್ಮೆಲೇ ಎಚ್ಚೆತ್ತವನಂತೆ ಮುಖವೆತ್ತಿ "ನಾನು ಲಕ್ಷ್ಮಪ್ಪನ ಕೊಲೆ ಮಾಡಿಲ್ಲ, ನಾನು ಲಕ್ಷ್ಮಪ್ಪನ ಕೊಲೆ ಮಾಡಿಲ್ಲ" ಎಂದು ಗೋಗರೆದಾಗ ಕಣ್ಣುಗಳಿಂದ ನೀರುದುರಿದವು.

"ಅಲ್ಲಿ ಕಾಳಾ ಏನಾದರೂ ಇದ್ದರೆ ಕೋರ್ಟಿನ ಮುಂದೆ ಹೇಳಬಹುದು."

ನ್ಯಾಯಾಧೀಶರು ಮತ್ತೊಮ್ಮೆ ಕೇಳಿದಾಗ ಕಾಳನಿಗೆ ಧೈರ್ಯ ಬಂದು ಮೈ ಉಬ್ಬಿದಂತಾಯಿತು. "ನಾನು ಲಕ್ಷ್ಮಪ್ಪನನ್ನು ಕೊಲೆ ಮಾಡಿಲ್ಲ. ಆದರೆ ನನಗೂ ಅವಳಿಗೂ ಸಂಬಂಧ ಇದ್ದದ್ದು ನಿಜ. ಒಮ್ಮೆ ನಾವಿಬ್ಬರೂ ತೋಟದ ಬದಿಗೆ ಹಾಕಿದ್ದ ಹುಲ್ಲಿನ ಬಣವೆಯ ಹಿಂದೆ ಮಲಗಿದ್ದಾಗ ಆಕಸ್ಮಾತ್ ಅಜ್ಜಪ್ಪನ ಕೈಗೆ ಸಿಕ್ಕಿಹಾಕಿಕೊಂಡೆವು. ನಾನು ಹೆದರಿ ತೋಟದ ಬೇಲಿ ಎಗರಿ ಪರಾರಿಯಾದೆ, ಮುಂದೆ ನಡೆದದ್ದು ನನಗೆ ತಿಳಿಯದು" ಹೇಳಬೇಕೆಂದಿದ್ದವನು ಗಪ್ಪಾಗಿ, ಒಂದು ಪಕ್ಷ ಈ ವಿಷಯವನ್ನೆಲ್ಲಾ ಹೇಳಿದರೆ ಲಕ್ಷ್ಮವ್ವ ನಡತೆಗೆಟ್ಟವಳೆಂದು ಸಮಾಜಕ್ಕೆಲ್ಲಾ ಗೊತ್ತಾಗುತ್ತದೆಯೆಂದು ಮನದಲ್ಲೇ ನಿರ್ಧರಿಸಿ, "ನಾ ಮಾತ್ರ ಕೊಲೆ ಮಾಡಿಲ್ಲ" ಎಂದಷ್ಟೇ ಹೇಳಿ ತಲೆ ತಗ್ಗಿಸಿದ.

"ಮುಂದಿನ ತಿಂಗಳು ಮೂವತ್ತನೇ ತಾರೀಖು ತೀರ್ಪು" ಎಂದು ಹೇಳಿ ಸತೀಶರು ಮೇಲೆದ್ದರು.

ವಕೀಲರನ್ನು ಮಾಡಿಕೊಂಡು ಹೋರಾಡಲು ಕಾಳನ ಹತ್ತಿರ ಹಣವಿದ್ದಿಲ್ಲ. ಚಿಕ್ಕಂದಿನಲ್ಲೇ ತಂದೆ–ತಾಯಿಗಳನ್ನು ಕಳೆದುಕೊಂಡು ಅನಾಥನಾಗಿ ಎಂದಲ್ಲಿಯೋ

ಬಂದು ಸಾಹುಕಾರ ಅಜ್ಜಪ್ಪನ ಮನೆಯಲ್ಲಿ ಕೆಲಸದಾಳಾಗಿ ಸೇರಿಕೊಂಡಿದ್ದ. ಸುಮಾರು ಮೂವತ್ತು ವರ್ಷಗಳಾಗಿರಬಹುದು. ಆದರೆ ಅವಿವಾಹಿತ. ಒಳ್ಳೇ ಧೃಡಕಾಯ, ಅಜ್ಜಪ್ಪನ ಹೊಲಗದ್ದೆಗಳಲ್ಲಿ ಮೈಮುರಿದು ದುಡಿಯುತ್ತಿದ್ದ. ಹಗಲಿರುಳು ದುಡಿದರೂ ಇವನಿಗೆ ಸಿಗುತ್ತಿದ್ದುದು ಎರಡೊತ್ತು ಊಟ, ಜೊತೆಗೆ ವಾರಕ್ಕೊಂದು ರೂಪಾಯಿ ಮೇಲ್ಖರ್ಚಿಗೆ.

ಅಜ್ಜಪ್ಪನ ಮೊದಲನೇ ಹೆಂಡತಿ ಸಿದ್ದವ್ವ ಹಡೆಯುವಾಗ, ತೊಂದರೆ ಗೀಡಾಗಿ ಸತ್ತು ಹೋದನಂತರ ಲಕ್ಷ್ಮವ್ವನನ್ನು ಮದುವೆಯಾಗಿದ್ದ. ಮೊದಲೇ ಸೂಳೆಯರ ಚಟವಿದ್ದ ಅಜ್ಜಪ್ಪ ಮನೆಕಡೆ ಸರಿಯಾಗಿ ಬರುತ್ತಲೇ ಇರಲಿಲ್ಲ. ಆದರೂ ಲಕ್ಷ್ಮವ್ವ ಎಲ್ಲವನ್ನೂ ಅದುಮಿಕೊಂಡು ಮನೆಹೊಲಗಳ ಮೇಲ್ವಿಚಾರಣೆ ಯನ್ನ ನೋಡಿಕೊಂಡು ಹೋಗುತ್ತಿದ್ದಳು.

ತೀರ್ಪಿನ ದಿನ ನ್ಯಾಯಾಧೀಶರು ಕೈಯಲ್ಲಿ ಫೈಲನ್ನ ಹಿಡಿದು ತಮ್ಮ ಸ್ಥಾನದಲ್ಲಿ ಬಂದು ಕುಳಿತರು. ಎಲ್ಲರೂ ತದೇಕ ದೃಷ್ಟಿಯಿಂದ ಉಸಿರು ಬಿಗಿ ಹಿಡಿದು ನ್ಯಾಯಾಧೀಶರನ್ನೇ ನೋಡುತ್ತಿದ್ದರು.

ಪೋಲೀಸರು ಕಾಳನ ಕೈಗೆ ಬೇಡಿ ಹಾಕಿಕೊಂಡು ನಡೆಯಲೂ ತ್ರಾಣ ವಿಲ್ಲದ ಅವನನ್ನ ಎಳೆದು ತಂದು ಕಟಕಟೆಯಲ್ಲಿ ನಿಲ್ಲಿಸಿದರು. ಅವನ ಕಾಲುಗಳು ಗಡಗಡ ನಡುಗುತ್ತಿದ್ದವು.

ನ್ಯಾಯಾಧೀಶರು ತೀರ್ಪಿನ ಫೈಲನ್ನು ಬಿಚ್ಚುತ್ತಿದ್ದಂತೆ ಪೋಲೀಸರು ರೈಫಲ್ ಹಿಡಿದು ಕಾಳನನ್ನು ಸುತ್ತುವರಿದರು.

ತೀರ್ಪನ್ನು ಕೇಳುವವರೆಲ್ಲರಿಗೂ ಕಾಳನಿಗೆ ಏನೋ ಕಾದಿದೆಯೆಂದು ಗೊತ್ತಾಯಿತು.

"................... ಈ ರೀತಿ ಕಾಳನು ಲಕ್ಷ್ಮವ್ವನ ಮೇಲೆ ಅತ್ಯಾಚಾರ ಮಾಡಿದ್ದಲ್ಲದೇ, ಹರಿತವಾದ ಕುಡುಗೋಲಿನಿಂದ ಅಮಾನುಷವಾಗಿ ಅವಳನ್ನು ಕೊಲೆ ಮಾಡಿದ್ದಾನೆಂದು ದೊರೆತ ಸಾಕ್ಷಿಗಳಿಂದ ಸಾಬೀತಾಗಿದೆ. ಕಾರಣ ಆಪಾದಿತ ಕಾಳನಿಗೆ ಮರಣದಂಡನೆಯನ್ನು ವಿಧಿಸಲಾಗಿದೆ.

ಕೂಡಲೇ ಧೊಪ್ಪೆನ್ನುವ ಸಪ್ಪಳ ಕೇಳಿಸಿತು. ಕಾಳ ಕಟಕಟೆಯಲ್ಲಿ ಬಿದ್ದು ಮೂರ್ಛೆ ಹೋಗಿದ್ದ. ತಲೆಗೆ ಏಟು ಬಿದ್ದು ರಕ್ತ ಸೋರುತ್ತಿತ್ತು.

“ನನ್ನನ್ನು ಜೈಲಿಗೆ ಕಳಿಸಬ್ಯಾಡ್ರಿ ಡಾಕ್ಟ್ರೆ, ನಾ ಇಲ್ಲೇ ಸಾಯ್ತೀನಿ” ಶುಶ್ರೂಷೆಯಲ್ಲಿದ್ದ ಡಾಕ್ಟರನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದ.

ಕಾಳನ ತಲೆಯನ್ನು ನೇವರಿಸುತ್ತಾ “ನಿನಗೆ ಸಂಬಂಧಪಟ್ಟವರು ಯಾರೂ ಇಲ್ವೇ” ಡಾಕ್ಟರ್ ಕೇಳಿದ್ದಕ್ಕೆ ತಲೆ ಅಲ್ಲಾಡಿಸಿದ.

ಡಾಕ್ಟರರ ಜೀವ ಚುರ್ ಎಂದಿತು. ಒಮ್ಮೆ ಸಂಪೂರ್ಣವಾಗಿ ಕಾಳನ ಮುಖವನ್ನೊಮ್ಮೆ ನೋಡಿದರು. ಅವನು ವಿಕಾರಗೊಂಡಿದ್ದ. ಕಣ್ಣುಗಳು ಕೆಂಪಾಗಿ ಗುಡ್ಡೆ ಕಿತ್ತು ಬರುವಂತಿದ್ದವು. ಅವನ ಸ್ಥಿತಿಯನ್ನು ನೋಡಿ ಅವರ ಕರುಳು ಮಿಡಿಯಿತು. ಕೆನ್ನೆಯ ಮೇಲೆ ಹರಿದು ಕುರುಚಲು ಗಡ್ಡಕ್ಕೆ ಸೇರಿಕೊಳ್ಳುತ್ತಿದ್ದ ಅವನ ಕಣ್ಣೀರನ್ನು ತಮ್ಮ ಕೈಬೆರಳಿನಿಂದ ಒರೆಸಿದರು. ಒಮ್ಮೊಮ್ಮೆ ಪರಿಸ್ಥಿತಿಗೆ ಸಿಕ್ಕಿ ನಿರಪರಾಧಿ ಅಪರಾಧಿಯಾಗುತ್ತಾನೆ. ಆಗ ಮರಣದಂಡನೆಯಂತಹ ಕ್ರೂರ ಶಿಕ್ಷೆಗಳು ತೀರಾ ಅನಾಗರಿಕವೆನಿಸುತ್ತವೆ. ನಿಜಕ್ಕೂ ಇದು ಕಾನೂನು ಮಾಡುವ ಇನ್ನೊಂದು ಕೊಲೆ. ಇದನ್ನು ಖಂಡಿಸದ ಮಾನವೀಯ ಸಮಾಜ ಇಂತಹ ಕೊಲೆಯ ಅಪವಾದವನ್ನ ಹೊತ್ತುಕೊಳ್ಳಬೇಕಾಗುತ್ತದೆ. ಇಂತಹ ಶಿಕ್ಷೆಯಿಂದ ಕೊಲೆಗಳು ಕಡಿಮೆಯಾಗಬಹುದಾಗಿದ್ದರೆ ಇಲ್ಲಿಯವರೆಗೂ ನಿರಂತರವಾಗಿ ಕೊಲೆಗಳೇಕೆ ಇನ್ನೂ ಹೆಚ್ಚು ಹೆಚ್ಚು ನಡೆಯುತ್ತಲೇ ಇವೆ. ನೈತಿಕ ಮೌಲ್ಯಗಳನ್ನ ಬೆಳೆಸಿ ಅಪರಾಧಿಗಳನ್ನ ತಿದ್ದಲು ಸಾಧ್ಯವಿಲ್ಲವೇ....” ಕಾಳನ ಮುಖವನ್ನ ನೋಡುತ್ತಲೇ ಮನದಲ್ಲೇ ಏನೇನೋ ಅಂದುಕೊಂಡರು.

ಸತೀಶರು ಮನೆಯಲ್ಲಿ ಊಟ ಮಾಡುತ್ತಿದ್ದಾಗ ಖಾರ ಹೆಚ್ಚಾಗಿ ನೆತ್ತಿಗೇರಿತು. ಟಂಪ್ ಟಂಪ್ ಎಂದು ಒಂದೇ ಸಮನೇ ಕೆಮ್ಮಹತ್ತಿದರು. ಕಣ್ಣು ಕೆಂಪಾಗಿ ನೀರು ಬರಹತ್ತಿದವು. ಅವರ ಹೆಂಡತಿ ಒಂದು ಲೋಟ ನೀರನ್ನು ತಂದು ತಲೆಗೆ ಸುರಿದು ತಪ್ ತಪ್ ತಟ್ಟಿದರು. ನಂತರ ಕೆಮ್ಮು ಕಡಿಮೆಯಾಗಿ ಸ್ವಲ್ಪ ಸಮಾಧಾನಗೊಂಡು, ಕಣ್ಣಿನಲ್ಲಿ ಇಳಿಯುತ್ತಿದ್ದ ನೀರನ್ನು ವಸ್ತ್ರದಿಂದ ಒರೆಸಿಕೊಳ್ಳುತ್ತಾ “ಊಟದಲ್ಲಿ ಸ್ವಲ್ಪ ಖಾರ ಹೆಚ್ಚಾದರೆ ನಮ್ಮಿಂದ ತಡೆದುಕೊಳ್ಳುವುದಾಗುವುದಿಲ್ಲ, ಬೇಕರಿಯ ಗಲ್ಲಿಗೇರುವ ಕಾಳ ಅದೇಗಿದ್ದಾನೋ” ಎಂದು ಮಿಡುಕಿದರು.

ಇಡೀ ರಾತ್ರಿ ಸತೀಶರಿಗೆ ನಿದ್ರೆ ಹತ್ತಲಿಲ್ಲ. ಗಲ್ಲಿಗೇರುವ ಕಾಳನ ಭಯಾನಕ ದೃಶ್ಯ ಕಣ್ಣು ಮುಂದೆ ಬಂದು ಕಾಡುತ್ತಿತ್ತು. ಆ ಭೀಕರ ದೃಶ್ಯವನ್ನ ನಾಳೆ ಬೆಳಿಗ್ಗೆ ಕಣ್ಣಿಂದ ನೋಡಬೇಕಾಗುವುದಲ್ಲಾ ಎಂದು ದಿಗಿಲುಗೊಂಡು ಆಗುತ್ತಿರುವ ಮಾನಸಿಕ ವೇದನೆಗಳನ್ನ ಅನುಭವಿಸಲಾರದೇ ಅನುಭವಿಸುತ್ತಿದ್ದರು. ಕಾಳನ ಬದಲು ತಾವೇ ಗಲ್ಲಿಗೇರುವವರಂತೆ ಕಳವಳಗೊಳ್ಳಹತ್ತಿದರು.

ಒಲ್ಲದ ಮನಸ್ಸಿನಿಂದ ಬೆಳಗಿನ ಸ್ನಾನ, ಕಾಫಿ ಮುಗಿಸಿಕೊಂಡು, ತೀರ್ಪಿನ ಫೈಲು ಹಿಡಿದು, ಎದುರಿಗಿದ್ದ ನಿಲುವುಗನ್ನಡಿಯಲ್ಲಿ ಒಮ್ಮೆ ತಮ್ಮ ಮುಖ ನೋಡಿಕೊಂಡರು. ಕಣ್ಣು ಕೆಂಪಾಗಿದ್ದವು, ಮುಖ ಬಿಳಿಚಿಗೊಂಡಿತ್ತು, ಕೈಕಾಲುಗಳು ಸ್ವಲ್ಪ ಸ್ವಲ್ಪ ನಡುಗುತ್ತಿದ್ದವು. ತಲೆಯು ಕಾವೇರಿ ನರಗಳು ಚಟ್ ಚಟ್ ಎಂದು ಸಿಡಿಯುತ್ತಿದ್ದವು.

"ಯಾಕ್ರೀ ಒಂದು ತರಾ ಇದಿರಲ್ಲಾ ಇವತ್ತು" ಹಣೆ ಮುಟ್ಟಿ ನೋಡಿ, "ಯಾಕೋ ಮೈ ಬೆಚ್ಚಗಿದೆ, ಸ್ವಲ್ಪ ಆರಾಮು ತೆಗೆದುಕೋಳ್ರಿ" ಎಂದು ಅವರ ಹೆಂಡತಿ ಹೇಳಿದಾಗ "ಇಲ್ಲ ಇವತ್ತು ನಾನು ಅವಶ್ಯವಾಗಿ ಅಲ್ಲಿರಲೇಬೇಕು. ನನಗೇನಾಗಿದೆಯಂತ ಹೆದರುತ್ತೀ ? ಚನ್ನಾಗಿದೀನಲ್ಲ!" ಎಂದು ಸತೀಶರು ಹೆಂಡತಿಯನ್ನು ಸಮಾಧಾನಪಡಿಸಿ, ಕಾರಿನಲ್ಲಿ ಸೆಂಟ್ರಲ್ ಜೈಲಿಗೆ ಹೋದರು.

ಆಗಲೇ ಜೈಲ್ ಸೂಪರೆಂಟೆಂಡೆಂಟ್, ಪೋಲೀಸ್ ಸೂಪರೆಂಟೆಂಡೆಂಟ್, ಡಾಕ್ಟರ್, ರಿಜಿಸ್ಟ್ರಾರ್ ಮತ್ತು ಅವಶ್ಯಕವಾಗಿ ಹಾಜರಿರಲೇಬೇಕಾದ ಅಧಿಕಾರಿಗಳೆಲ್ಲರೂ ಬಂದಿದ್ದರು. ಎಲ್ಲರೂ ಸತೀಶರಿಗೆ ಗೌರವದ ನಮಸ್ಕಾರ ಹೊಡೆದರು. ಸತೀಶರು ನರ್ವಸ್ ಆಗಿದ್ದರೂ ಗಂಭೀರತೆಯನ್ನು ತಂದುಕೊಂಡು ಪ್ರತಿ ನಮಸ್ಕಾರ ಹೇಳಿ ಅಲ್ಲೇ ಇದ್ದ ಕುರ್ಚಿಯ ಮೇಲೆ ಕುಳಿತುಕೊಂಡರು.

ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಇತರೆ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಚರ್ಚಿಸುವಾಗ ಎಲ್ಲಾ ಅಧಿಕಾರಿಗಳ ಮುಖಗಳಲ್ಲಿ ಕಳೆ ಇಲ್ಲದಿರುವುದನ್ನ ಮತ್ತು ಅವರ ಮನದಲ್ಲಿರುವ ಜಿಗುಪ್ಸೆಯನ್ನು ಅರಿತು ಉಫ್.... ಎಂದು ಬೆಚ್ಚನೆಯ ಉಸಿರನ್ನು ಬಿಟ್ಟರು.

ನೇಣು ಸಿದ್ಧವಾದ ಕೂಡಲೇ ಹಗ್ಗ ಮತ್ತು ಅದರ ಕುಣಿಕೆಯನ್ನು ಪರೀಕ್ಷಿಸುವುದಕ್ಕೋಸ್ಕರ ವಧಿಕನು ನ್ಯಾಯಾಧೀಶರನ್ನು ಮತ್ತು ಇತರೆ ಎಲ್ಲಾ ಅಧಿಕಾರಿಗಳನ್ನು ನೇಣುಗಂಬದ ಹತ್ತಿರ ಕರೆದುಕೊಂಡು ಹೋಗಿ ಕಾಳನಷ್ಟೇ ತೂಕದ

ಒಂದು ಗೋಣಿ ಚೀಲವನ್ನು ನೇಣಿನ ಕುಣಿಕೆಗೆ ಕಟ್ಟಿ ದೊಪ್ಪೆಂದು ಧುಮುಕಿಸಿ ತೋರಿಸಿದನು. ಭಾರದ ಚೀಲ ನೇತಾಡಹತ್ತಿದ ಕೂಡಲೇ ಸತೀಶರ ಎದೆ ಧಸಕ್ ಎಂದು ಹೃದಯ ಜೋರಾಗಿ ಡಬ್ ಡಬ್ ಬಡಿದುಕೊಳ್ಳಲಾರಂಭಿಸಿತು. ಎಲ್ಲಾ ಅಧಿಕಾರಿಗಳು ಹಗ್ಗ ಮತ್ತು ಕುಣಿಕೆ ಬಿಗಿಯಾಗಿದೆ ಮತ್ತು ನೇಣಿಗೆ ಹಾಕಿದ ಕೂಡಲೇ ಹರಿಯುವುದಿಲ್ಲವೆಂದರು. ಸತೀಶರು "ಹೌದೆಂದು" ಆಗುತ್ತಿದ್ದ ಕಂಪನದಲ್ಲಿಯೇ ತಲೆ ಆಡಿಸಿದರು.

ತಮ್ಮ ಇಡೀ ಸರ್ವೀಸಿನಲ್ಲಿ ಮರಣ ದಂಡನೆಯನ್ನು ವೀಕ್ಷಿಸುತ್ತಿರುವುದು ಇದೇ ಮೊದಲಬಾರಿಯದಾಗಿತ್ತು. ವಧಿಕನು ಭಾರದ ಚೀಲವನ್ನು ಧುಮುಕಿಸಿ ತೋರಿಸುವಾಗಲೇ ತಾವು ಆಳವಾದ ಕಂದರಕ್ಕೆ ಹೋಗಿ ಬಿದ್ದಂತಾಗಿತ್ತು. ಚೀಲವನ್ನೇ ನೋಡಿ ತಾವೇ ನೇಣುಗಂಬಕ್ಕೆ ಏರಿದಂತೆ ಭಾಸವಾಗಿ, ನಡುಕು ಹೆಚ್ಚಾಯಿತು. ನವಿರಾಗಿದ್ದ ಅವರ ಅಂತರಂಗ ಕೆಲವೇ ನಿಮಿಷಗಳಲ್ಲಿ ಕಾಣಬೇಕಾದ ಅಸಹ್ಯ ದೃಶ್ಯವನ್ನು ನೆನೆದು ಕ್ಷಣಕ್ಷಣಕ್ಕೂ ನರ್ವಸ್ ಆಗಹತ್ತಿದರು. ಮೈಯೆಲ್ಲಾ ಕಾವೇರಿ ತಲೆ ಸಿಡಿಯುತ್ತಲಿತ್ತು.

"ನಾನು ಕೊಲೆ ಮಾಡಿಲ್ಲ, ನಾ... ಕೊಲೆ ಮಾಡಿಲ್ಲ, ನನ್ನ ಬಿಟ್ಟುಬಿಡ್ರಿ" ಎಂದು ತೇಕುತ್ತಾ ಕಾಳ ಉಸುರಿಲ್ಲದ ಧ್ವನಿಯಿಂದ ಕಿರುಲುತ್ತಿದ್ದ. ಅವನ ಎರಡೂ ಕೈಗಳನ್ನು ಒಂದಕ್ಕೆ ಬಿಗಿಯಾಗಿ ಹಗ್ಗದಿಂದ ಕಟ್ಟಲ್ಪಟ್ಟಿದ್ದವು. ನಾಲ್ಕಾರು ಜನ ಸಿಬ್ಬಂದಿ ವರ್ಗದವರು ಅವನ ರಟ್ಟೆಯನ್ನು ಹಿಡಿದು ಕೋಣೆಯಿಂದ ಎಳೆದುಕೊಂಡು ವಧಾಸ್ತಂಭದ ಹತ್ತಿರಕ್ಕೆ ತರುತ್ತಿದ್ದರು. ನಡೆಯಲಾರದೇ ಕುಸಿದು ಬಿದ್ದ. ಅವನನ್ನು ಹೊತ್ತುಕೊಂಡು ಬಂದರು. ಮುಖವೆಲ್ಲಾ ಬೆವರಿ ದೊಡ್ಡ ದೊಡ್ಡ ಹನಿಗಳು ಪಟಪಟ ನೆಲಕ್ಕೆ ಉದುರುತ್ತಿದ್ದವು. ಕಣ್ಣು ಕೆಂಪಗಾಗಿ ರಕ್ತ ಸೋರುತ್ತಿವೆಯೇನೋ, ಗುಡ್ಡೆಗಳು ಕಿತ್ತು ಬರುತ್ತಿವೆಯೇನೋ ಅನ್ನಿಸುತ್ತಿತ್ತು. ನಡುಗುವ ಧ್ವನಿಯಲ್ಲಿ ಒಮ್ಮೊಮ್ಮೆ ಚೀರುತ್ತಿದ್ದ, ಒಮ್ಮೊಮ್ಮೆ ಸತ್ತ ನಾಯಂತೆ ಜೋಲು ಬೀಳುತ್ತಲಿದ್ದ.

ಕಾಳನನ್ನು ನೋಡಿದ ತಕ್ಷಣ ಸತೀಶರ ಎದೆ ಧಗ್ ಧಗ್ ಎಂದು ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಮೈಯಲ್ಲಿನ ರಕ್ತ ಹೆಪ್ಪಾದಂತಾಗಿ ಮುಖ ಬಿಳಿಚಹತ್ತಿತು. ಕೈವಸ್ತ್ರ ತೆಗೆದುಕೊಂಡು ಮುಖವನ್ನು ಒರೆಸಿಕೊಂಡರು. ಸುತ್ತಲೂ ಇದ್ದ ಉಳಿದೆಲ್ಲಾ ಅಧಿಕಾರಿಗಳ ಮುಖವನ್ನೊಮ್ಮೆ ನೋಡಿದರು. ಎಲ್ಲರ ಮುಖ

ಗಳು ಸುಡೋ ಬಿಸಿಲಿನಲ್ಲಿ ಚಲ್ಲಿದ ಹೂಗಳಂತಾಗಿದ್ದವು. ಸ್ಮಶಾನದಲ್ಲಿ ಶವ ಸಂಸ್ಕಾರ ಮಾಡಲಿಕ್ಕೆ ಬಂದವರಂತೆ ಕಾಣುತ್ತಿದ್ದರು.

ರಿಜಿಸ್ಟ್ರಾರ್ ಬಂದು ಕಾಳನ ದೇಹದ ಮೇಲಿರುವ ಗುರುತುಗಳ ತಾಳೆ ನೋಡಿದರು. ಡಾಕ್ಟರ್ ಬಂದು ಜೀವವಿದೆಯೆಂದು ಧೃಡೀಕರಿಸಿದರು. ನ್ಯಾಯಾಧೀಶರು ತೀರ್ಪನ್ನು ಕೂಲಂಕುಷವಾಗಿ ಎಲ್ಲರ ಮುಂದೆ ಓದಿದರು.

ಗಲ್ಲಿಗೇರಿಸಲು ಇನ್ನು ಹದಿನೈದು ನಿಮಿಷ ಮಾತ್ರ ಉಳಿದಿತ್ತು.

"ಕೊನೆಯದಾಗಿ ನೀನು ಹೇಳುವುದು ಕೇಳುವುದು ಏನಾದರೂ ಇದೆಯೇ?" ಎಂದು ಜೈಲು ಸೂಪರೆಂಟೆಂಡೆಂಟರು ಕೇಳಿದಾಗ ಜೋಲು ಮುಖದಲ್ಲಿಯೇ ಇಲ್ಲಾ ಎನ್ನು ಅರ್ಥದಲ್ಲಿ ತಲೆ ಅಲ್ಲಾಡಿಸಿದ ಕಾಳ.

"ಕೊನೆಯದಾಗಿ ಟೀ, ಕಾಫಿ ಏನಾದರೂ ಕುಡಿಯುತ್ತೀಯಾ ಎಂದು ಕೇಳಿದರು. ಕಾಳನ ಗೋಣು ಸುಮ್ಮನೇ ಒಂದು ಕಡೆ ವಾಲಿತು. ಚಹಾ ಬೇಕೆಂದು ತಿಳಿದು ಸಿಬ್ಬಂದಿಯಲ್ಲೊಬ್ಬ ಓಡಿಹೋಗಿ ಅಲ್ಲೇ ಟೇಬಲ್ಲಿನ ಮೇಲೆ ಫ್ಲಾಸ್ಕಿನಲ್ಲಿದ್ದ ಟೀಯನ್ನು ಕಪ್ಪಿನಲ್ಲಿ ಹಾಕಿಕೊಂಡು ಬಂದು ಕಾಳನ ತುಟಿಗೆ ಹಿಡಿದಾಗ ಹ್ಞಾ.... ಎಂದು ತಲೆ ಕೊಡವಿದ. ಬಿಸಿಯಿದ್ದ ಚಹಾ ಅವನ ತುಟಿಯನ್ನು ಸುಟ್ಟಿತ್ತು. ನೋಡುತ್ತಾ ಅಲ್ಲೇ ನಿಂತಿದ್ದ ಡಾಕ್ಟರ್ ತಮ್ಮ ಬಾಕ್ಸ ತೆಗೆದು ಮುಲಾಮು ಹಿಡಿದು ಓಡಿಬಂದು ತಮ್ಮ ನಡುಗುವ ಕೈಗಳಿಂದ ಕಾಳನ ತುಟಿಗೆ ಸವರಿದರು.

"ಇನ್ನೇನು ಕೆಲವೇ ನಿಮಿಷಗಳಲ್ಲಿ ಸಾಯುವವನ ಸುಟ್ಟ ನೋವನ್ನು ಅರಿತು ಸುಶ್ರೂಷೆ ಮಾಡುವ ಮಾನವನ ಕರುಣೆ ವಿಶಾಲವಾದದ್ದು ಮತ್ತು ಅದೆಂತಹ ವಾತ್ಸಲ್ಯಮಯ ಮಾನವೀಯತೆ ಇಲ್ಲಿ ಅಡಗಿದೆ" ಎಂದು ಮನದಲ್ಲಿ ನೆನೆಸಿಕೊಳ್ಳುತ್ತಿರುವಾಗ ಸತೀಶರ ಕಣ್ಣಲ್ಲಿ ನೀರು ತೊಟ್ಟಿಕ್ಕಿದವು.

ಚಹವನ್ನು ತಣ್ಣಗೆ ಮಾಡಿ ಕುಡಿಸುವಾಗ ಎಲ್ಲಾ ಅಧಿಕಾರಿಗಳ ಹೃದಯ ಕಿತ್ತು ದುಃಖ ಉಮ್ಮಳಿಸಿ ಬಂತು.

ಗಲ್ಲುಗಂಬದ ಹತ್ತಿರ ಕರೆದುಕೊಂಡು ಹೋದಂತೆ ಕಾಳ ಕುಸಿಯಲಾರಂಭಿಸಿದ. ಹುಚ್ಚನಂತೆ ಚೀರಾಡಹತ್ತಿದ. ಅವನನ್ನು ಹೊತ್ತುಕೊಂಡು ಹೋಗು

ನಾಗ ಚೆಡ್ ಎಂದು ಕಾಳ ಒಮ್ಮೆಲೇ ಮಲವಿಸರ್ಜನೆಯನ್ನು ಹೊತ್ತುಕೊಂಡು ಹೋಗುವವರ ಮೇಲೆ ಮಾಡಿದ. ಈ ದೃಶ್ಯವನ್ನು ನೋಡಿದ ಪೋಲೀಸ್ ಸೂಪರಿಂಟೆಂಡೆಂಟರು ಬಡ್ ಎಂದು ಒಮ್ಮೆಲೆ ವಾಂತಿ ಮಾಡಿಕೊಂಡು ತೇಕುತ್ತಾ ನೆಲಕ್ಕೆ ಬಿದ್ದಾಗ ಅವರನ್ನು ಆಚೆ ಹೋಗಲು ಎಲ್ಲರೂ ಹೇಳಿದರು.

ಮೊದಲೇ ಬಿ. ಪಿ. ಪೇಷಂಟ್ ಆಗಿದ್ದ ಡಾಕ್ಟರರಿಗೆ ತಲೆ ಸುತ್ತಲು ಸುರುವಾಯಿತು. ಆದರೆ ಇಂತಹ ದೃಶ್ಯವನ್ನು ಜೀವನದಲ್ಲಿ ಹಲವಾರು ಬಾರಿ ಕಂಡಿದ್ದ ಜೈಲು ಸೂಪರಿಂಟೆಂಡೆಂಟರು ಉದ್ವೇಗವನ್ನು ತಡೆಯುವ ಮಾತ್ರೆಗಳನ್ನು ನುಂಗಿ ಬಂದಿದ್ದರಿಂದ ಅವರು ಸ್ವಲ್ಪ ಶಾಂತವಾಗಿದ್ದರು.

ಕಾಳನು ಮಾಡಿಕೊಂಡ ಮಲದ ನಾಸನೆ ಎಲ್ಲರಿಗೂ ಓಕರಿಕೆ ತಂದಿತ್ತು. ಮೂಗಿಗೆ ತಮ್ಮ ಕರವಸ್ತ್ರ ಹಿಡಿದು ಕಣ್ಣು ಮುಚ್ಚಿಕೊಂಡರು.

ಇವೆಲ್ಲವನ್ನು ನೋಡಿದ ಸತೀಶರ ಮನಸ್ಸು ಸುಳಿಗೆ ಸಿಕ್ಕಂತಾಗಿ ಗರ್ರ್ ಎಂದು ತಿರುಗುತ್ತಿರುವಂತಾಯಿತು. ಭಾವೋದ್ವೇಗ ಹೆಚ್ಚಿ ಅವರ ಹೃದಯ ತಿರುಗುವ ಗಾಣಕ್ಕೆ ಕಬ್ಬು ಇಟ್ಟಂತಾಗಿತ್ತು.

ಕಾಳನ ಮುಖಕ್ಕೆ ಕಪ್ಪುಬಟ್ಟೆ ಹಾಕಿ ಮುಚ್ಚಿ ಕೊರಳಿಗೆ ಕುಣಿಕೆ ತೊಡಿಸಿದರು. ಸಮಯವಾಗಿದೆ O. K. ಎಂದು ಸಿಗ್ನಲ್ ಕೊಟ್ಟಾಗ, ಕಾಳನ ಕಾಲ ಕೆಳಗಿದ್ದ ಹಲಿಗೆ ಬಾಯ್ ತೆರದ ಕೂಡಲೇ ಧಡ್ ಎಂದು ಅವನ ದೇಹ ಧುಮುಕಿತು. ಚೀರಾಡುತ್ತಿದ್ದ ಕಾಳ ಹೆಣವಾದ.

No....!!! ಎನ್ನುವ ಧ್ವನಿಯೊಂದಿಗೆ ಧಡಲ್ ಎನ್ನುವ ಶಬ್ದವಾದಾಗ, ಎಲ್ಲರೂ ಕಣ್ಣು ಬಿಟ್ಟು ಆಕಡೆ ತಿರುಗಿದರು. ಸತೀಶರು ಬಿದ್ದು ಮೂರ್ಛೆ ಹೋಗಿದ್ದರು.

ಕುಳಿತಿದ್ದ ಡಾಕ್ಟರರಿಗೆ ಎದ್ದು ಸತೀಶರು ಬಿದ್ದಕಡೆ ಹೋಗಲು ಸಾಧ್ಯವಾಗಲಿಲ್ಲ. ಮತ್ತೊಮ್ಮೆ ಪ್ರಯತ್ನಿಸಿದರು. ಆದರೂ ಆಗಲಿಲ್ಲ. ಅವರು ತಮ್ಮ ಕಾಲುಗಳನ್ನು ನೋಡಿಕೊಂಡರು. ತಮ್ಮ ಎಡಗಾಲಿನಿಂದ ಹಿಡಿದು ದೇಹದ ಮೇಲ್ಭಾಗವೆಲ್ಲಾ ಪ್ಯಾರಲಿಸಿಸ್‌ಗೆ ತುತ್ತಾಗಿತ್ತು.

ಸತೀಶ ಮತ್ತು ಡಾಕ್ಟರ್ ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಿದರು.

ಆಸ್ಪತ್ರೆಯಲ್ಲಿ ಎಲ್ಲಾ ಡಾಕ್ಟರ್‌ಗಳು ಸುತ್ತುವರಿದು ಟ್ರೀಟ್‌ಮೆಂಟ್ ನಡೆಸಿದರು. ಡಾಕ್ಟರ್ ಮಾತ್ರ ಸ್ವಲ್ಪ ಚೇತರಿಸಿಕೊಂಡರು. ಆದರೆ ಸತೀಶರು ಮಾತ್ರ ಇನ್ನೂ ಬಡಬಡಿಸಿ ಪೇಚಾಡಹತ್ತಿದ್ದರು. ಅವರನ್ನು ನಂತರ ಬೆಂಗಳೂರಿನ ಮೆಂಟಲ್ ಆಸ್ಪತ್ರೆಗೆ ಸೇರಿಸಿದರು.

"ಮರಣದಂಡನೆಯನ್ನು ರದ್ದುಪಡಿಸುವುದು ಮರಣದಂಡನೆಗೊಳಗಾದ ಅಪರಾಧಿಗೆ ತೋರಿಸುವ ಮಾನವೀಯತೆಗಷ್ಟೇ ಅಲ್ಲ, ಆ ನರಕ ದೃಶ್ಯವನ್ನು ನೋಡಿ ಮನಶಾಂತಿ ಕಳೆದುಕೊಂಡು ಹುಚ್ಚರಾಗುವ ಅಧಿಕಾರಿಗಳಿಗೋಸ್ಕರ ವಾದರೂ ರದ್ದುಪಡಿಸಲೇಬೇಕು. ಮನುಷ್ಯ ಮನುಷ್ಯನನ್ನು ಮರಣದಂಡನೆ ಯಂತಹ ಕ್ರೂರ ಶಿಕ್ಷೆಗಳ ಮೂಲಕ ಕೊಲ್ಲುವುದನ್ನು ನಿಲ್ಲಸಬೇಕು. ಈ ಶಿಕ್ಷೆಗೆ ಸಮಾಜ ಒಪ್ಪಿದೆಯೆಂದಾದರೆ ಇನ್ನೊಂಧು ಕೊಲೆ ಮಾಡಲು ಒಪ್ಪಿಕೊಂಡಂತೆಯೇ ಸರಿ. ಮನಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು, ನ್ಯಾಯ ತಜ್ಞರು, ರಾಜ ಕಾರಣಿಗಳು ಮತ್ತು ಮಾನವೀಯ ಅನುಕಂಪವುಳ್ಳ ಎಲ್ಲರೂ ಈ ಕ್ರೂರ ಶಿಕ್ಷೆಯ ರದ್ದತಿಗೇಕೆ ಹೋರಾಟ ಮಾಡುತ್ತಿಲ್ಲ" ಎಂದು ಡಾಕ್ಟರ್ ಮನನೊಂದು ಎಲ್ಲರಿಗೂ ಕೇಳಿಸುವಂತೆ ತಮ್ಮ ಗಂಟೆ ಬಾರಿಸುತ್ತಿದ್ದಾರೆ ಜೀವಗಳ ರಕ್ಷಣೆಗೋಸ್ಕರ.

ಕುರಿ ಹಿಂಡು

ತಾಲೂಕು ಕೇಂದ್ರದಿಂದ ಇಪ್ಪತ್ತೈದು ಮೈಲು ದೂರದಾಚೆ ಕೊರ್ಚರಹಟ್ಟಿ ಅಂತ ಒಂದು ಕುಗ್ರಾಮವಿದೆ. ಸುಮಾರು ಎಪ್ಪತ್ತೈದು–ಎಂಬತ್ತು ಮನೆಗಳಿರ್ರೋ ಈ ಗ್ರಾಮದಲ್ಲಿ ದೀಪಹಚ್ಚಿ ಹುಡುಕಿದ್ರೂ ಒಂದೇ ಒಂದು ಅಂಚಿನ ಮನೆಯಾಗಲಿ ಅಥವಾ ಮಣ್ಣಿನ ಮನೆಯಾಗಲಿ ಕಾಣುವುದೇಯಿಲ್ಲ. ಎಲ್ಲವೂ ಗುಡಿಸಲುಗಳೇ. ಸ್ವತಂತ್ರಪೂರ್ವದಲ್ಲಿ ಈ ಹಟ್ಟಿಯಲ್ಲಿ ಯಾವ ತರಹದ ಗುಡಿಸಲುಗಳಿದ್ದವೋ ಈಗ್ಲೂ ಅದೇ ತರಹದ್ದೇ ಇವೆ. ಅಂದಮ್ಯಾಲೆ ಹೇಳ್ತ್ರಾ ಈ ಹಳ್ಳಿ ಎಷ್ಟು ಪ್ರಗತಿ ಹೊಂದಿದೆಯಂತ. ಇಲ್ಲಿ ವಾಸಿಸುವ ಜನ ಹೇಗಿದಾರೆ ಅಂದ್ರೆ ಒಬ್ರಿಗೂ ಒಂದಕ್ಷರನೂ ಬರೋದಿಲ್ಲ. ಶಾಲೆಯಂತೂ ಈ ಹಳ್ಳಿ ಮುಖನೇ ನೋಡಿಲ್ಲ.

ಇಲ್ಲಿ ವಾಸ ಮಾಡುವವರೆಲ್ಲರೂ ಬರೀ ಕೊರ್ಚರೇ. ಗಂಡಸರು ಮೈನಸು ಬಟ್ಟೆಯ ಒಂದು ಜಣ್ಣಾ, ಒಂದು ಮೈಯಂಗಿ ಇಷ್ಟೇ ಇವರ ಉಡುಗೆ. ಹೆಂಗಸರು ಸೀರೆಯನ್ನೋ ಉಟ್ಕೊಂತಾರೆ, ಆದ್ರೆ ಕುಬುಸ ಮಾತ್ರ ಎಂದೂ ತೊಟ್ಟಿಲ್ಲ. ಇದೇ ಉಡುಪಿನ್ಯಾಗೆ ವಾರಕ್ಕೊಮ್ಮೆ ಪಟ್ಟಣದ ಸಂತೆಗೆ ಹೋಗಿ ಈಚಲ ಗರಿಯಿಂದ ಕಟ್ಟಿದ ಕಸಬರಿಗೆ, ಚಾಪೆಗಳನ್ನ ಮಾರಿಕೊಂಡು ಊರು ಸೇರಿಕೊಳ್ಳುತ್ತಾರೆ. ಇನ್ನುಳಿದ ಆರುದಿನ ಇವರಿಗೆ ಪಟ್ಟಣದ ಸಂಪರ್ಕವೇ ಇರುವುದಿಲ್ಲ. ಭಾಷೆ ಮಾತ್ರ ಸ್ವಲ್ಪ ಒರಟಾದ ತೆಲುಗು. ಇವ್ರ ಭಾಷೆ ಬೇರೆಯವರಿಗೆ ಅರ್ಥವಾಗುವುದಿಲ್ಲ. ಬೇರೆಯವರ ಭಾಷೆ ಇವರಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಪಟ್ಟಣದ ಜನಗಳ ಮತ್ತು ಇವರ ನಡುವೆ ಒಂದು ಕಂದಕ ಆಗಿದೆ. ಪಟ್ಟಣದ ಜನ ಅಂದ್ರೆ ಅಷ್ಟು ದೂರದಲ್ಲಿ ನಿಂತುಕೊಂಡಿರುತ್ತಾರೆ. ಈ ನಾಗರಿಕ ಸ್ವಲ್ಪ ಗದರಿಸಿದರೆ ಸಾಕುನಡುಗಿಹೋಗುತ್ತಾರೆ.

ಈ ಹಟ್ಟಿಯಿಂದ ಅರ್ಧ ಮೈಲಿ ದೂರದಲ್ಲಿ ಒಂದು ಸಣ್ಣ ಹಳ್ಳ ಹರಿಯುತ್ತಿದೆ. ಅಲ್ಲಿಗೋಗಿ ಇವರು ದಿನನಿತ್ಯ ನೀರು ತರಾದು. ಹಟ್ಟಿಗಂತೂ ಸೋಗೆ

ನಂದ್ರು ಒಂದು ಬಾವಿ ಇಲ್ಲ. ಬೇಸಿಗೆಯಲ್ಲಂತೂ ಈ ಜನರ ಪಜೀತಿ ಏನು ಹೇಳ್ತೀರಿ. ವರ್ತಿ ತೋಡಿ, ತೋಡಿ ಒಂದು ಕೊಡ ನೀರು ತುಂಬಸಾಕೆ ಎರಡು ತಾಸು ಬೇಕು. ಯಾವಾಗಲೂ ಸ್ನಾನ ಮಾಡೋದು ವಾರಕ್ಕೊಮ್ಮೆನೋ ಅಥವಾ ಹದಿನೈದು ದಿವಸಕ್ಕೊಮ್ಮೆನೊ. ಇನ್ನು ಬೇಸಿಗೆಯಲ್ಲಿ ಕುಡಿಲಿಕ್ಕೆ ನೀರಿಲ್ಲ ಅಂದ್ರೆ ಸ್ನಾನಕ್ಕೆಲ್ಲಿ.

ಪಕ್ಕದ ಪಟ್ಟಣದ ಜನರಾಗಲಿ ಇವರ ಹಟ್ಟಿಗೆ ಎಂದೂ ಬರೋದಿಲ್ಲ. ಕೆಲಸಾದ್ರು ಏನೈತಂತಿರಾ. ಬರ್ತಾರೆ ಕೆಲವು ಜನ ಕಾಲು ದಾರಿಯಲ್ಲೇ ಕಾರು ಬಿಟ್ಕೊಂಡು ಐದು ವರ್ಷಕ್ಕೊಮ್ಮೆ. ನಂತರ ಈ ಜನ ಬರೋದು ಮತ್ತೈದು ವರ್ಷಗಳಾದ ಮೇಲೆ. ಇವ್ರು ಮಾತ್ರ ಅವ್ರು ಗುರ್ತಿಗೆ ಗುದ್ದುತ್ತಾನೇ ಇದಾರೆ ಈಗ ಮೂವತ್ತೈದು ವರ್ಷಗಳಿಂದ.

ಒಂದಾಶ್ಚರ್ಯವೆಂದರೆ ಈ ಹಳ್ಳಿಯಲ್ಲಿ ಸರ್ಕಾರದವರು ಒಂದು ಸರಾಯಿ ಅಂಗಡಿ ಇಡಲಿಕ್ಕೆ ಲೈಸನ್ಸ್ ಕೊಟ್ಟಿದ್ದಾರೆ. ಏಕೆ ಅಂದ್ರೆ ಈ ಜನ ಕುಡಿದು ದಿನಾಲೂ ಜಗಳವಾಡಲಿ ಅಂತ.

ಮೊನ್ನೆ ನಡೆದ ಎಲೆಕ್ಷನ್ನಿನಲ್ಲಿ ಈ ಸಣ್ಣ ಹಳ್ಳಿಗೆ ಏನು ಕಾರುಗಳು ಓಡಾಡಿದ್ವು ಅಂದ್ರೆ, ಎಲೆಕ್ಷನ್ ಆಗತನಕ ಬರ್ ಬರ್ ಓಡಾಡಿದ್ದೆ ಓಡಾಡಿದ್ದು. ಮರುದಿನ ಆ ಕಾರುಗಳು ಎಲ್ಲಿ ಹೋದ್ವೋ ಏನೋ. ಆದ್ರೆ ಈ ಜನರು ಮಾತ್ರ ಇದ್ದಲ್ಲೇ ಇದಾರೆ.

ಇವರಂತೂ ಬಹಳಾ ನಿಯತ್ತಿನ ಮಂದಿ. ಓಟಾಕಾದು ಮಾತ್ರ ಒಂದು ಪುಣ್ಯದ ಕೆಲ್ಸ ಅಂತ ತಿಳ್ಕಂಡರೆ. ನಮ್ಮೂರಿಗೆ ರಸ್ತೆ ಬೇಕು, ಕರೆಂಟ್ ಬೇಕು, ಕುಡಿಯುವ ನೀರಿನ ಬಾವಿ ಬೇಕು, ಶಾಲೆ ಬೇಕು ಅಂತ ಒಂದು ಸಲನಾದ್ರು ಕೇಳಿಲ್ಲ. ಅವೆಲ್ಲಾ ತಮಗ್ಯಾಕೆ ಬೇಕು ಅಂತ ತಿಳಿದುಕೊಂಡಿದಾರೋ ಏನ್ನೋ. ಏನೇ ಇರಲಿ ಈ ಜನ ಬಹಳಾ ಒಳ್ಳೆಯವರು. ಈ ಮಾತನ್ನ ನಾನು ಅನ್ನೋದಿಲ್ಲ. ಪಟ್ಟಣದ ಜನ ಮತ್ತೆ ರಾಜಕಾರಣಿಗಳು ಹೇಳ್ತಿರ್ತಾರೆ.

ಇವರಲ್ಲಿ ಸ್ವಲ್ಪ ಹೆಚ್ಚು ಮಾತನಾಡುವವ ಅಂದ್ರೆ ದ್ಯಾಮು ಮಾತ್ರ. ಈ ಹಳ್ಳಿಗೆಲ್ಲಾ ಇವನೇ ಲೀಡರ್. ಯಾರು ಬಂದ್ರೂ ತನಗೆ ತಿಳಿದಿದ್ದ ಎರಡು ಮಾತುಗಳನ್ನ ತೊದ್ಲ ಬದ್ಲಾ ಹೇಳೋದು ಗೊತ್ತಿದೆ.

ಇವರಿಗೂ ಬೇಸಾಯ ಗೊತ್ತಿದೆ. ಪಿತ್ರಾರ್ಜಿತವಾಗಿ ಬಂದ ಹೊಲಗಳು ಇವೆ. ಅಷ್ಟು ಹರಿ, ಉದ್ದಕ್ಕೆ ಬಿತ್ತಿ ಚೀಲ ಅರ್ಧಚೀಲ ಕಾಳು ಬೆಳೆದು ಕೊಳ್ಳುತ್ತಾರೆ.

ಹೋದ ವಾರ ದ್ಯಾಮ ಸಂತೆಗೆ ಚಾಪಿ, ಕಸಬರಿಗೆ, ಸಿಂಬಿ ಮಾರಲಿಕ್ಕೆ ಹೋದಾಗ ಇವನಿಗೆ ಯಾರೋ ಹೇಳಿದ್ರಂತೆ. ಚಾಪಿ, ಕಸಬರಿಗೆ ಮಾಡುವವ ರಿಗೆಲ್ಲಾ ಸರ್ಕಾರದವರು ಸಾಲ ಕೊಡ್ತಾರಂತ. ಸಾಯಂಕಾಲ ದ್ಯಾಮ ಹಟ್ಟಿಗೆ ಬಂದವನೇ ಜನರನ್ನೆಲ್ಲಾ ಕೂಡಿಸಿ, "ನಮಗೆಲ್ಲಾ ಸರ್ಕಾರದವರು ಸಾಲ ಕೊಡ್ತಾರಂತೆ, ಅದೂ ಕಡಿಮೆ ಬಡ್ಡಿಯಲ್ಲಿ. ನಾವೆಲ್ಲ ಸಾಲ ತಗಂಡು ಹೆಚ್ಚೆಚ್ಚು ಚಾಪಿ ಕಸಬರಿಗೆ, ಸಿಂಬಿ ಮಾಡಿ, ಮಾರಿ ನಾವೂ ಸಾವ್ಕಾರರಾಗಬಹುದು" ಎಂದಾಗ ಅವನ ಸುತ್ತ ಕುಳಿತಿದ್ದವರೆಲ್ಲರೂ ಒಬ್ಬರಿಗೊಬ್ಬರ ಮುಖಗಳನ್ನು ಅತೀ ಆಶ್ಚರ್ಯದಿಂದ ಬೆರಗಾಗಿ ನೋಡಹತ್ತಿದರು. ದ್ಯಾಮ ತನ್ನ ಮಾತನ್ನ ಮುಂದುವರಿಸಿ "ನಾವೆಲ್ಲಾ ಹಿಂದುಳಿದ ಜನರಂತೆ. ನಮಗೆ ಬೇಗ ಸಾಲ ಸಿಗುತ್ತದಂತೆ. ಸಂತೆಗೆ ನನ್ನ ಜತಿಗೆ ಮಾತಾಡಿದಾತ ಹೇಳಿದ. ನಿಮ್ಮೂರಿನ ಜನ್ರೆಲ್ಲಾ ಹೋಗಿ ಎಂ. ಎಲ್. ಎ. ದೇವ್ರನ್ನ ಕಾಣ್ರಿ ಅಂತ ಹೇಳ್ಯಾನೆ. ಅದಕ್ಕೆ ನಿಮಿಗೆ ಯಾರ್ಯಾರಿಗೆ ಸಾಲ ಬೇಕ್ರೋ ಅವ್ರು ನಾಳೆ ನನ್ನ ಹಿಂದೆ ಬರ್ರಿ. ಎಲ್ಲರಿಗೂ ಎರಡೆರಡು ಸಾವಿರ ರೂಪಾಯಿ ಸಾಲ ಸಿಗ್ತಾತಿ" ಎಂದು ಹೇಳಿದಾಗ ಎಲ್ಲರೂ ದ್ಯಾಮನನ್ನ ಹೊತ್ತುಕೊಂಡು ಹೇ....ಹೇ.... ಎಂದು ಕೇಕೆ ಹಾಕಿ ಕುಣಿದರು.

ಮರುದಿನ ಬೆಳಗ್ಗೆ ದ್ಯಾಮನ ಗುಡಿಸಲಿನ ಮುಂದೆ ಎಲ್ಲಾ ಗಂಡಸರು ಜಮಾಯಿಸಿದರು. ಲೀಡರ್ ದ್ಯಾಮ ಗಂಭೀರವಾಗಿ ಹೊರಗಡೆ ಬಂದು, "ಇನ್ಯಾರಾದ್ರು ಬರಾಕಿದ್ರೆ ಕರೀರಿ." "ಎಲ್ಲಾರು ಬಂದಾರೆ" ಎಂದು ಗುಂಪಿನಲ್ಲಿದ್ದವನೊಬ್ಬ ಹೇಳಿದ.

"ಒಂದು ಮಾತೇನಂದ್ರೆ ನೀವೆಲ್ಲಾ ನಾ ಹೇಳಿದಂಗೆ ಕೇಳಬೇಕು. ನಾನು ನಿಂತ್ಕೊಂಡಿದ್ರೆ ನೀವೂ ನಿಂತ್ಕಬೇಕು. ಕುಂತ್ಕಂಡ್ರೆ ನೀವೂ ಕುತ್ಕಬೇಕು, ಕೈಮುಗುದ್ರೆ ಕೈಮುಗಿಬೇಕು. ಅತ್ರೆ ಅತ್ತುಬೀಳಬೇಕು. ನೀವು ಯಾವಾಗ್ಲೂ

ನನ್ನೇ ನೋಡ್ತಾ ಇರಬೇಕು. ನೀವೆಂಗೆ ಬೇಕೋ ಅಂಗೆ ಮಾಡಿದ್ರೆ ಎಂ.ಎಲ್.ಎ. ಸಾಬ್ರು ಸಾಲ ಕೊಡ್ಸದಿಲ್ಲ."

ದ್ಯಾಮನ ಮಾತಿಗೆ ಎಲ್ಲಾ ಕುರಿಗಳು ತಲೆ ಹಾಕಿದವು.

ಎಂ. ಎಲ್. ಎ. ರಾಮನಗೌಡರ ಮನಿ ಮುಂದೆ ಎಲ್ಲರೂ ಜಮಾಯಿಸಿದರು. ಶಿಲ್ಕಿನ ಜುಬ್ಬದ ಡೊಳ್ಳೊಟ್ಟೆಯ ಒಬ್ಬ ವ್ಯಕ್ತಿ ಹೊರಗಡೆ ಬಂದು, "ಯಾರು ಬೇಕಾಗಿತ್ರಲೇ...." ಎಂದಾಗ ದ್ಯಾಮ ಎದ್ದು ಕೈಮುಗಿದು ನಿಂತ. ಅವನನ್ನೇ ಪಿಳಿ ಪಿಳಿ ನೋಡುತ್ತಿದ್ದ ಎಲ್ಲರೂ ಗಡಕ್ಕನೇ ಎದ್ದು ಕೈಮುಗಿದು ನಿಂತರು.

"ನಾವು ಕೊರ್ಚರಹಟ್ಟಿ ಜನ ದೇವ್ರು, ನಿಮ್ಮನ್ನೇ ಕಾಣಾಕಂತ ಬಂದಿದ್ವಿ" ದ್ಯಾಮ ಹೇಳಿದ್ದಕ್ಕೆ

"ಯಾಕ್ರಲೇ........"

"ಸರ್ಕಾದರು ಹಿಂದುಳಿದ ಜಾತಿ ಜನ್ರಿಗೆ ಸಾಲ ಕೊಡ್ತರಂತೆ. ಎಂ. ಎಲ್. ಎ. ಸಾಬ್ರು ಮನಸ್ಸು ಮಾಡಿ ನಮಿಗೂ ಸಾಲ ಕೊಡಿಸಿದ್ರೆ ಬದಿಕ್ಯಂತಿವಿ ದೇವ್ರು"

"ಓ.... ಎಂ. ಎಲ್. ಎ. ಸಾಬ್ರುನ್ನ ಕಾಣಾಕ ಬಂದಿರೇನು. ಸಾಹೇಬ್ರು ಒಳಗಡೆ ಯಾರತ್ರನೋ ಮಾತಾಡಕತ್ಯಾರೆ, ಇಲ್ಲೆ ಕುತ್ಗಳ್ರಿ ಹೊರಗ ಬಂದ ಮ್ಯಾಲೆ ಕಾಣ್ವಂತ್ರಿ"

ಅಂದಂಗೆ ಇವ್ರು ಎಂ. ಎಲ್. ಎ. ಸಾಬ್ರು ಅಲ್ಲಾ ಎಂದು ಮನದಲ್ಲೇ ಅಂದುಕೊಂಡು ಮುಗಿದಿದ್ದ ಕೈಯನ್ನ ಕೆಳಗಿಳಿಸಿದ. ದ್ಯಾಮ ಕೈಬಿಟ್ಟಿದ್ದನ್ನೇ ನೋಡಿ ಎಲ್ಲರೂ ಕೈ ಇಳಿಸಿದರು. ದ್ಯಾಮ ಕುಳಿತುಕೊಂಡ, ಎಲ್ಲರೂ ಕುಳಿತುಕೊಂಡರು.

ತಾಸಾಯಿತು, ಎರಡು ತಾಸಾಯಿತು, ಮೂರು ತಾಸಾಯಿತು ಹೀಗೆ ಸಾಯಂಕಾಲ ಆತು. ಎಂ. ಎಲ್. ಎ. ಸಾಬ್ರು ಹೊರಗಡೆ ಬರಲಿಲ್ಲ. ರಾತ್ರಿಯಾಯಿತು, ಮತ್ತೆ ಎಷ್ಟೋ ಹೊತ್ತಿನ ನಂತರ ಒಂದು ಹೆಣ್ಣಿನ ಜೊತೆ ಕುಲು ಕುಲು ನಗುತ್ತಾ ಬಂದ ವ್ಯಕ್ತಿಯನ್ನ ನೋಡಿ, "ಮನ್ನೆ ಓಟು ಕೇಳಾಕ ಬಂದಾರಿವ್ರೆ. ಇವ್ರೇ ಸಾಬ್ರು ಇರಬೇಕು ಅಂದುಕೊಂಡು ಮೇಲಕ್ಕೆದ್ದು ನಿಂತು ಉದ್ದಕ್ಕೆ ಅಡ್ಡ ಬಿದ್ದ. ಅವನನ್ನ ನೋಡುತ್ತಿದ್ದ ಕುರಿಗಳೂ ಅಡ್ಡಬಿದ್ದವು.

"ಏನ್ರೀ ಈ ಅಸಹ್ಯ ಜನ ಮೈಮೇಲೆ ಸರಿಯಾಗಿ ಬಟ್ಟೆನೇ ಹಾಕಿ ಕೊಂಡಿಲ್ಲ. ಛೇ, ಛೇ........ ನನಗಂತೂ ನಾಚಿಕೆ ಆಗುತ್ತೆ. ನಾ ಒಳಗಡೆ ಕುಳಿತಿರ್ತೀನಿ ನೀವು ಮಾತಾಡಿಕೊಂಡು ಬನ್ನಿ" ಆ ವಯ್ಯಾರದ ಹೆಣ್ಣು ಒಳಗಡೆ ಹೋಯಿತು.

"ಏನ್ರಲೇ ಬಂದಿದ್ರಿ" ಎಂದು ಎಂ. ಎಲ್. ಎ. ರಾಮನಗೌಡ ಗದರಿಸಿ ಕೇಳಿದಾಗ ದ್ಯಾಮನಿಗೆ ಸ್ವಲ್ಪ ಹೊತ್ತು ಮಾತೇ ಬರಲಿಲ್ಲ. ನಂತರ ಧೈರ್ಯ ತಂದುಕೊಂಡು ಸರ್ಕಾರದವರು ಚಾಪಿ, ಸಿಂಬಿ, ಕಸಬರಿಗೆ ಮಾಡಲಿಗೆ ಸಾಲ ಕೊಡ್ತತಂತೆ. ಅದಕ್ಕೆ ನಮ್ಮೆಲ್ಲರಿಗೂ ಸಾಲ ಕೊಡಸಬೇಕು ದೇವ್ರು" ಎಂದು ತನ್ನ ಜನಗಳನ್ನ ಒಮ್ಮೆ ತಿರುಗಿ ನೋಡಿದ. ಅವನು ತಿರುಗಿ ನೋಡಿದ ಕೂಡಲೇ ಎಲ್ಲರೂ ಹಿಂದಕ್ಕೆ ತಿರುಗಿ ನೋಡಿದರು.

ರಾಮನಗೌಡ ಸ್ವಲ್ಪಹೊತ್ತು ಯೋಚಿಸಿ, "ಅಲ್ಲರಲೇ ಸಾಲ ತಗಂಡು ಏನ್ಮಾಡ್ತೀರಿ, ನಿಮ್ಮ ಕೈಲಿ ಆಮೇಲೆ ಸಾಲ ತೀರಸಕಾಗುತ್ತಾ"

ಹೆಂಗಮಾಡಿ ತೀರಿಸ್ಕಳ್ತೀವ್ರಿ, ದೊಡ್ಡ ಮನಸ್ಸು ಮಾಡಿ ಕೊಡುಸ್ರಿ.

"ನೀವೆಷ್ಟು ಮಂದಿ ಅದಿರಿ ಸಾಲ ತಗಣಾರು."

"ಒಂದೈವತ್ತು ಜನ ಅದಿವ್ರಿ."

ರಾಮನಗೌಡ ಮತ್ತೊಂದು ಕ್ಷಣ ಯೋಚಿಸಿ, "ಅಂಗಾದ್ರೆ ಒಂದು ಕೆಲಸ ಮಾಡಿ."

"ಏನ್ಮಾಡಬೇಕೇಳ್ರಿ ದೇವ್ರು"

"ಸರ್ಕಾರ ಕೊಡೋ ಸಾಲಕ್ಕೆ ನಿಮ್ಮ ಹೊಲಗಳನ್ನ ಒತ್ತಿ ಹಾಕಬೇಕಾಕತಿ ವಿಲೇಜ್ ಅಕೌಂಟೆಂಟ್ ಹತ್ರ ಹೋಗಿ ಪಾಣಿ ಕಾಪಿ ತಗಂಡು ಇನ್ನೊಂದು ನಾಕು ದಿನ ಬಿಟ್ಟು ಬರ್ರಿ ಕೊಡುಸ್ತೀನಂತೆ."

ಐವತ್ತು ಮಂದಿಗೂ ಒಂದೊಂದು ಸಾವಿರ ಸಾಲ ಸಿಕ್ಕಿತು. ಎಲ್ಲರೂ ಆದಿನ ಚಸ್ನಾಗಿ ಕುಡಿದು ದ್ಯಾಮನನ್ನು ಎತ್ತಿಕೊಂಡು ಕುಣಿದಷ್ಟೇ ಕುಣಿದದ್ದು.

ಒಂದು ವರ್ಷ ಆತು, ಎರಡು ವರ್ಷಾತು, ಹಿಂಗಾ ಮೂರು ವರ್ಷ ಆತು. ಎಲ್ಲರಿಗೂ ಬ್ಯಾಂಕಿನಿಂದ ನೋಟೀಸ್ ಬಂದವು. "ತೆಗೆದುಕೊಂಡ ಎರಡು

ಸಾವಿರ ಅಸಲು ಆದಕ್ಕಾಗುವ ಬಡ್ಡಿಯನ್ನ ಇನ್ನೊಂದು ತಿಂಗಳೊಳಗಾಗಿ ಕಟ್ಟದೇ ಹೋದರೆ ನಿಮ್ಮ ಹೊಲಗಳನ್ನ ಸರ್ಕಾರ ವಶಪಡಿಸಿಕೊಳ್ಳುತ್ತದೆ." ಎಂದು ನೋಟೀಸಿನಲ್ಲಿದ್ದದ್ದು ತಿಳಿದಾಗ ಎಲ್ಲರೂ ದಂಗಾದರು. "ತೆಗೆದುಕೊಂಡದ್ದೆ ಒಂದು ಸಾವಿರ, ಎರಡು ಸಾವಿರ ಅಸಲು ಅಂದ್ರೆ ಹೆಂಗೆ" ಎಲ್ಲರೂ ಕುಳಿತು ಚರ್ಚಿಸಿದರು. "ನಿಜ ಏನು ಅಂತ ತಿಳ್ಕಾಣಕೆ ಎಲ್ಲರೂ ಎಂ. ಎಲ್. ಎ. ಸಾಬ್ರನ್ನೇ ಮತ್ತೆ ಕಾಣಕೆ ಹೋಗೋನು" ಎಂದು ದ್ಯಾಮು ಹೇಳಿದ.

ಮಾರನೇ ದಿನ ಎಂ. ಎಲ್. ಎ. ಸಾಹೇಬ್ರ ಮನೆಮುಂದೆ ಎಲ್ಲರೂ ಸೇರಿದರು.

"ರಾಮನಗೌಡ ಹೊರಗಡೆ ಬಂದಕೂಡಲೇ ದ್ಯಾಮ ಕೈಮುಗಿದು ನಿಂತ. ಮೂರು ವರ್ಷಗಳ ಹಿಂದೆ ಹೇಳಿದ್ದ ಮಾತು ಎಲ್ಲಾ ಕುರಿಗಳಿಗೂ ಇನ್ನೂ ನೆನಪಿತ್ತು. ದ್ಯಾಮ ಕೈಮುಗಿದದ್ದನ್ನ ನೋಡಿ ಎಲ್ಲರೂ ಕೈಮುಗಿದು ನಿಂತರು.

"ಮತ್ಯಾಕ್ರಲೇ ಬಂದ್ರಿ...." ಎಂದು ಕೇಳಿದ್ದಕ್ಕೆ "ನಾವು ತಗಂಡದ್ದು ಒಂದೇ ಸಾವ್ರ ಸಾಲ. ಎರಡು ಸಾವ್ರ ಅಂತ ಚೀಟಿ ಕೊಟ್ಟಾರೆ. ಎಂ. ಎಲ್. ಎ. ಸಾಬ್ರ ನೀವು ಹೆಂಗಾದ್ರು ಮನಸುಮಾಡಿ ನಮ್ಮನ್ನ ಹೊಟ್ಟೆಗಾಕ್ಕಳ್ರಿ.

"ನಾನೀಗ ಎಂ. ಎಲ್. ಎ. ಅಲ್ಲ, ಆಗ್ಲೆ ಅಸೆಂಬ್ಲಿ ಡಿಸಾಲ್ವ್ ಆಗ್ಯತಿ."

ರಾಮನಗೌಡ ಹೇಳಿದ್ದು ಯಾರಿಗೂ ಅರ್ಥ ಆಗಲಿಲ್ಲ. "ಇಲ್ರಿ ದೇವ್ರ ನಾವು ಒಂದೇ ಸಾವ್ರ ಸಾಲ ತಗಂಡಿದ್ವಿ, ಎರಡು ಸಾವಿರ ಕಟ್ಬೇಕು ಅಂದ್ರೆ ಹ್ಯಂಗೆ ಕಟ್ಟಬೇಕ್ರಿ."

"ನನಿಗದಲ್ಲ ಗೊತ್ತಿಲ್ಲ, ನೀವು ತಗಂಡದ್ದು ಎರಡೆರಡು ಸಾವಿರ. ಇವತ್ತು ಬಂದು ನನ್ಮುಂದೆ ಸುಳ್ಳು ಹೇಳ್ತಿರೇನ್ಲೆ ಬಡ್ಡಿ ಮಕ್ಕಳಾ. ಲೇ ದ್ಯಾಮ ಇಲ್ಲಿಂದ ಎಲ್ರನ್ನೂ ಕರಕೊಂಡು ಹೋಕಿಯಾ, ಇಲ್ಲಾ ನಾಕು ಬಿಗುದು ಕಳುಸ್ಲಾ" ಎಂದು ಕೆಂಗಣ್ಣು ಬಿಟ್ಟು ಗದರಿಸಿದಕ್ಕೆ ದ್ಯಾಮ ಜೋರ್ ಎಂದು ಎರಡನಿ ಉಚ್ಚೆ ಹೊಯ್ಕೊಂಡ. ತಲೆ ತಗ್ಗಿಸಿ ವಾಪಸು ಬಂದ. ಕುರಿಹಿಂಡು ಆವನನ್ನೇ ಹಿಂಬಾಲಿಸಿತು.

ಹಿತ ನುಡಿ


ನಾಟಕ, ದೃಶ್ಯಕಾವ್ಯವೆಂಬುದು ಬಹು ಪ್ರಾಚೀನ ನುಡಿ. ಸಮಾಜದ ಓರೆ–ಕೋರೆಗಳನ್ನು ತಿದ್ದುವುದಕ್ಕಾಗಿಯೇ ಕಾವ್ಯ, ನಾಟಕ, ಕಥೆ, ಕಾದಂಬರಿ ಹಾಗೂ ಇನ್ನಿತರ ಸಾಹಿತ್ಯ ಪ್ರಕಾರಗಳು ನಿರ್ಮಾಣವಾಗುತ್ತಿವೆ. ಅವುಗಳಲ್ಲಿ ನಾಟಕ ಅತ್ಯಂತ ಸುಲಭ ಹಾಗೂ ಪರಿಣಾಮಕಾರಿ ಮಾಧ್ಯಮವಾಗಿದೆ. ಜನರ ನಡೆ–ನುಡಿ ತಿದ್ದಲು ನಾಟಕದ ಪಾತ್ರಗಳು ನೇರ ಪ್ರಭಾವ ಬೀರುತ್ತವೆ. ಹಾಸ್ಯ-ವ್ಯಂಗ್ಯ-ಉಪದೇಶಗಳನ್ನು ಪಾತ್ರಗಳು ಬೆಳೆಸಿ ಸಮಾಜದ ಜನತೆಯನ್ನು ಎಚ್ಚರಿಸುತ್ತಿವೆ. ತಮ್ಮನ್ನು ತಾವು ತಿದ್ದಿಕೊಳ್ಳುವಂತೆ ಮಾಡುತ್ತಿವೆ.

ಈ ದಿಶೆಯಲ್ಲಿ 'ಮುತ್ತು ತಂದ ಕುತ್ತು' ಕೂಡ ಅಂಥ ಘನೋದ್ದೇಶವಿಟ್ಟುಕೊಂಡು ಚಿಕ್ಕ ಪ್ರಯತ್ನ ಮಾಡಿದೆ. ಶಿಕ್ಷಣ – ಅದರಲ್ಲೂ ಸ್ತ್ರೀ ಶಿಕ್ಷಣ ಅತ್ಯವಶ್ಯವೆಂಬುದು ನಾಟಕಕರ್ತನ ಒಟ್ಟು ಅಭಿಪ್ರಾಯವಾಗಿದೆ. ಅವನ್ನೇ ಈ ಚಿಕ್ಕ ನಾಟಕದ ಮೂಲಕ ಸುಂದರವಾಗಿ ಬಿಂಬಿಸಲು ಚಿಕ್ಕವನಾದರೂ ಚೊಕ್ಕ ಪ್ರಯತ್ನವನ್ನು ನಮ್ಮ ಚಿ। ಯಂ. ಪಿ. ಯಂ. ಷಣ್ಮುಖಯ್ಯ ಮಾಡಿದ್ದಾನೆ. ನಿಜಕ್ಕೂ ಮೆಚ್ಚುವಂತಹ ಕಾರ್ಯ ಇದಾಗಿದೆ. ಪಾತ್ರಗಳ ಸೃಷ್ಟಿ, ಹಳ್ಳಿಗರ ಹಿನ್ನೆಲೆಯನ್ನು ಹೊಂದಿದೆ. ಮುಗ್ಧ–ಮೂಢಮತಿಗಳ ತಪ್ಪು ತಿಳುವಳಿಕೆಯಿಂದ ಎಂಥ ಅನಾಹುತವಾಗಬಲ್ಲದು ಎಂಬುದು 'ಮುತ್ತು ತಂದ ಕುತ್ತು' ಇನಲ್ಲಿ ಕೊನೆಗೆ ಸ್ಪಷ್ಟವಾಗಿದೆ. ಅವರೂ ತಿಳುವಳಿಕೆಯ ಬೆಳಕು ಮೂಡಿ ಸುಖಾಂತ್ಯವಾಗುವುದು. ಇಂಥಹ ಕೃತಿಗಳು ಮೂಡುವುದು ಅತ್ಯವಶ್ಯವಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರು, ಶ್ರೀ ಷಣ್ಮುಖಯ್ಯನಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ದಯಪಾಲಿಸಿ ಇವರ ಸಾಹಿತ್ಯ ಸೇವೆ ನಿರಂತರ ಸಾಗುವಂತೆ ಅನುಗ್ರಹಿಸಲಿ.

ರಾಣೇಬೆನ್ನೂರು
೨೪–೧೦–೮೨

ಅ. ಪಿ. ಹಿರೇಮಠ, ಎಂ.ಎ.,
ಪ್ರಾಧ್ಯಾಪಕರು

। ಶ್ರೀ ಗುರು ಕೊಟ್ಟೂರೇಶಾ ರಕ್ಷಿಸು ।



ಆಶೀರ್ವಾದ

ಈ ಮಾನವ ಜನ್ಮವನ್ನು ಆ ಜಗನ್ನಿಯಾಮಕನು ತನ್ನ ಪ್ರತಿ ರೂಪವಾಗಿ ಸೃಷ್ಟಿಸಿ. 'ಪರೋಪಕಾರಾರ್ಥ ಮಿದಂ ಶರೀರಂ' ಎಂದು ಆಜ್ಞಾಪಿಸಿ ಸೃಷ್ಟಿಸಿರುವಾಗ, ಮನವೆಂಬ ಮಂಗನ ಒಡನಾಟದಿಂದ ದುಷ್ಕಾರ್ಯದಲ್ಲಿ ಮನವೆಳಸಿ ದುರ್ಬುದ್ಧಿ ಬೆಳೆದಾಗ ಮಾನವನು ದಾನವನಾಗುತ್ತಾನೆ. ಅಂತಹ ಕಾಲದಲ್ಲಿ ಮಾನವನಾಗಬೇಕಾದರೆ. ವಿದ್ಯೆಯು ಅವಶ್ಯಕತೆ ಹೆಚ್ಚು. ಆದುದರಿಂದಲೇ ಈ ನಾಟಕವು ಬಾಲಕರ ಮನದಲ್ಲಿ ನೆಟ್ಟು, ವಿದ್ಯಾ ವ್ಯಾಸಂಗದಲ್ಲಿ ತೊಡಗಲು ಉತ್ತಮ ರತ್ನವಾಗಿದೆ.

ಯಾಕೆಂದರೆ 'ವಿದ್ಯಾಯಾಂ ಲಭ್ಯತೇ ಜ್ಞಾನಂ' ಎಂಬ ಹಿರಿಯರ ವಚನಾನುಸಾರ ವಿದ್ಯೆಯಿಂದ ಜ್ಞಾನ ಪ್ರಾಪ್ತವಾದಾಗ, ಈ ನನ್ನ ಶರೀರ ಪರೋಪಕಾರಾರ್ಥ ಎಂಬ ಅರಿವು ತಾನೇ ಮೂಡುತ್ತದೆ. ಈ ಅರಿವು ಬಂದಾಗಲೇ ಶರಣನಾಗುತ್ತಾನೆ ಎಂಬ ವಿಚಾರ ತಿಳಿದು ಎಂದೂ ಬರವಣಿಗೆ ಯಲ್ಲಿ ಕೈಹಾಕದೆ. ಸಾಹಿತ್ಯದ ಸುಳಿವೂ ಇಲ್ಲದೆ ತಾನು ಹುಟ್ಟಿದಾಗಿನಿಂದ ಬಡತನದಿಂದ ಬೆಂದರೂ ಲೆಕ್ಕಿಸದೆ ಜ್ಞಾನ ಸಾಧಿಸಿಕೊಂಡಿರುವ ಈ ನನ್ನ ಕಿರಿಯ ಚಿ। ಯಾದ ಷಣ್ಮುಖಯ್ಯನು ಬರೆದ ಕಥಾವಸ್ತು ನೋಡಿದಾಗ, ಇವರಲ್ಲಿಯ ವಿಷಯ ಸಂಗ್ರಹ. ಮತ್ತು ವಿದ್ಯಾ ಹೀನತೆಯಿಂದ ಆಗುವ ದುಷ್ಪರಿಣಾಮ. ಮಾನವನು ಸುಧಾರಿಸಿಕೊಳ್ಳುವ ರೀತಿ ಎಲ್ಲಾ ವಿಷಯ ಕ್ರೋಢಿಕರಿಸಿ ಕಥಾವಸ್ತು ಹೆಣೆದಿರುವುದು ಈ ಬಾಲಕನ ಬುದ್ಧಿಗೆ ನಿಲುಕದಾದ ಸಾಹಸ.

ಆದರೂ ಪೂರ್ತಿಗೊಳಿಸಿರುವುದು ಶ್ರೀ ಷ. ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಆಶೀರ್ವಾದವೆಂದೇ ಹೇಳಬೇಕಾಗಿದೆ. ಈ ಬಾಲಕನು ಇಂತಹ ನೀತಿಯುತವಾದ ಇನ್ನೂ ಅನೇಕ ಕೃತಿಗಳನ್ನು ಹೆಣೆದು. ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲಿ. ಆ ದಯಾಮಯರಾದ ಜಗದಾದಿ ಪಂಚಾಚಾರ್ಯರು ಸದಾ ಸದ್ಬುದ್ಧಿಯನ್ನು ಕೊಟ್ಟು ಕಾಪಾಡಲಿ ಎಂದು ಬೇಡುತ್ತಾ "ಮುತ್ತು ತಂದ ಕುತ್ತು" ಎಂಬ ಈ ಕಥಾವಸ್ತು ಜಗವಗಲ ಬೆಳಗಲಿ ಎಂಬ ಹಾರೈಕೆಯನ್ನು ಜಗತ್ಕರ್ತನಲ್ಲಿ ಬೇಡುತ್ತೇನೆ.

ಶುಭಂ ಭವಂತು ಕೂರ್ವಂತು

"ಸರ್ವೇಜನಾ ಸುಖಿನೋ ಭವಂತು"

ಡಾ। ಯಂ.ಪಿ.ಯಂ. ಬಸಪ್ಪಯ್ಯಶಾಸ್ತ್ರಿಗಳು

ತಾ। 24-10-82 ಆಸ್ಥಾನ ಜೋತಿಷ್ಯ ವಿದ್ವಾನ್. ಹಿರೇಕಲ್ಮಠ-ಹೊನ್ನಾಳಿ.

ಕೃತಜ್ಞತೆ

❋



ಇದು ನನ್ನ ಚೊಚ್ಚಲ ಕೃತಿ, ಈ ಕೃತಿಗೆ ಆಶೀರ್ವಾದ ಲೇಖನವನ್ನು ದಯಪಾಲಿಸುವುದರ ಮೂಲಕ ನನ್ನನ್ನು ಧನ್ಯನನ್ನಾಗಿಸಿರುವ

ಹೊನ್ನಾಳಿ ಹಿರೇಕಲ್ಮಠದ
ಶ್ರೀ ಷ।ಬ್ರ। ಒಡೆಯರ್
ಚಂದ್ರಶೇಖರ ಶಿವಾಚಾರ್ಯ
ಮಹಾಸ್ವಾಮೀಜಿಯವರಿಗೆ
ಅನಂತ ಪ್ರಣಾಮಗಳನ್ನು
ಅರ್ಪಿಸಿದ್ದೇನೆ.

★

ಈ ನನ್ನ ಕೃತಿಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೂ ಹಾಗೂ ಚಲನಚಿತ್ರ ನಟರುಗಳಾದ ಡಾ। ರಾಜ್‌ಕುಮಾರ್, ಅಂಬರೀಷ್, ಶ್ರೀನಾಥ್, ಧೀರೇಂದ್ರಗೋಪಾಲ್. ಡಿಂಗ್ರಿ ನಾಗರಾಜ್ ಹಾಗೂ ಶಶಿಕಲಾ ಇವರುಗಳಿಗೂ ನನ್ನ ಕೃತಜ್ಞತೆಗಳು

ಹಾಗೆಯೇ ಈ ನಾಟಕದಲ್ಲಿ ತಪ್ಪುಗಳನ್ನು ತಿದ್ದುವುದರಲ್ಲಿ ಸಹಾಯಕರಾದ ಶ್ರೀ ಆರ್. ಸಿ. ಹಿರೇಮಠ್. ಶ್ರೀ ವಿ, ಕೆ. ಕದರಮಂಡಲಗಿ ಮತ್ತು ಕೆ. ಕೆ. ಗೌಡ ಇವರುಗಳಿಗೆ ನನ್ನ ಅಭಿನಂದನಾಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ

ಮತ್ತು ಈ ನಾಟಕದ ಬಗ್ಗೆ ಚರ್ಚಿಸುತ್ತಿದ್ದ ಶ್ರೀ ಸಚ್ಚಿದಾನಂದ ಸ್ವಾಮಿ. ಶ್ರೀ ಗುರು ಬಸವರಾಜ್, ಶ್ರೀ ಕೆ. ಬಿ. ಹೆಚ್. ಎಂ, ಕೊಟ್ರೇಶ್ ಸದಾನಂದ ಹಾಗೂ ಎಂ. ಎಸ್. ರೇವಣಪ್ಪ ಆರ್ಟಿಸ್ಟ್, ಇವರುಗಳಿಗೆ ನನ್ನ ಕೃತಜ್ಞತೆಗಳು

ನನ್ನ ಗುರುಗಳೂ-ಮಿತ್ರರೂ ಕೃತಿಯ ಸಂದರ್ಭದಲ್ಲಿ ಸಲಹೆ ಸೂಚನೆಗಳನ್ನು ನೀಡಿದ್ದಾರಲ್ಲದೇ ನನ್ನ ಬರವಣಿಗೆಗೆ ಯಾವಾಗಲೂ ಪ್ರೇರಕ ವಾಗಿರುವ ನನ್ನ ಅಣ್ಣಂದಿರು-ತಂದೆ-ತಾಯಿಗಳಿಗೂ-ಬಂಧು-ಬಳಗದವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ

ಈ ನಾಟಕವನ್ನು ಪ್ರಥಮವಾಗಿ ತಾಲ್ಲೂಕು ಯುವಜನ ಮೇಳದಲ್ಲಿ ಅಭಿನಯಿಸಿ ದ್ವಿತೀಯ ಬಹುಮಾನಗಳಿಸಿರುವ ಶಾರದಾ ಮಹಿಳಾ ಸಮಾಜ. ಅರಬಗಟ್ಟೆ, ಹಾಗೂ ತಾಲ್ಲೂಕು ವಿದ್ಯಾರ್ಥಿ ಹವ್ಯಾಸಿ ಸಂಘ ಹಿರೇಕಲ್ಮಠ ಇವರು ಗಳಿಗೂ ನಾನು ಕೃತಜ್ಞನಾಗಿದ್ದೇನೆ.

ಕೃತಿಯ ಅಂದವಾದ ಮುದ್ರಣಕ್ಕೆ ಕಾರಣರಾದ. ಸಹಕಾರ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ನಾನು ಆಭಾರಿ, ಕೊನೆಯದಾಗಿ ಈ ಪುಸ್ತಕವನ್ನು ನನ್ನ ಸ್ವಂತ ಪ್ರಕಾಶನದ ಮೊದಲನೆಯ ಕೃತಿಯಾಗಿ ಕಲಾವಿದರಿಗೂ ಹಾಗೂ ಸಹೃದಯಿಗಳೆಲ್ಲರಿಗೂ ನೀಡುವುದರ ಮೂಲಕ ಒಳ್ಳೆಯ ಯಶಸ್ಸು ದೊರೆಯುತ್ತದೆಂದು ನಂಬಿದ್ದೇನೆ,

ತಾ। 28-10-82

ಈಗ್ಗೆ ಎಂಟು ವರ್ಷಗಳ ಹಿಂದೆ ನಮ್ಮನ್ನಗಲಿದ

ನನ್ನ ಹಿರಿಯ ಸಹೋದರಿ

ಜಿ. ಮಂಗಳಗೌರಮ್ಮನಿಗೆ

ಎಸ್.ಎಸ್. ಹಿರೇಮಠ
ನಿವೃತ್ತ ಪ್ರಾಂಶುಪಾಲರು
ಬೆಳಗಾವಿ

ಪಾತ್ರ ಪರಿಚಯ

ರಂಗಪ್ಪಜ್ಜ — ಹಳ್ಳಿಯ ಮನುಷ್ಯ-ಬಿಳಿ ಮೀಸೆ. ಜುಬ್ಬ-ಪಂಚೆ ಧರಿಸಿರಬೇಕು.

ಬಸವ — ಅಗಸ. ಹೊಸದಾಗಿ ಮದುವೆಯಾದ ಯುವಕ ಜುಬ್ಬ ಲುಂಗಿ–ಪಂಚೆ. ಹೆಗಲಮೇಲೆ ಅಷ್ಟ ಟವೆಲ್ ಹಾಕಿರಬೇಕು

ಮುಖ್ಯೋಪಾಧ್ಯಾಯರು — ಸುಮಾರು 35 ವರ್ಷ, ಪ್ಯಾಂಟ್ ಸ್ಲ್ಯಾಗ್ ಧರಿಸಿ. ಕನ್ನಡಕ ಹಾಕಿರಬೇಕು.

ರಾಜಾರಾಂ — ಸುಮಾರು 25 ವರ್ಷ. ಪ್ಯಾಂಟ್–ಸ್ಲ್ಯಾಗ್ ಧರಿಸಿರಬೇಕು.

ಗೌಡ — ಊರ ಮುಖ್ಯಸ್ಥ. ಮೀಸೆ. ಜುಬ್ಬ ಪಂಚೆ ಇರಬೇಕು.

(ಶಾಲೆಯ ಜವಾನ. ಡಾಕ್ಟರು ಮತ್ತು ವಿದ್ಯಾರ್ಥಿಗಳು ಹಾಗೂ ಇತರೆ)

ನಿಂಗಮ್ಮ — ರಂಗಪ್ಪನ ಹೆಂಡತಿ. ಸಂಸಾರಸ್ಥ ಮಹಿಳೆ

ಬಸವಿ — ಬಸವನ ಹೆಂಡತಿ. ಹೊಸದಾಗಿ ಮದುವೆಯಾದವಳು

ವಿಶಾಲಿ — ಹೈಸ್ಕೂಲ್ ವಿದ್ಯಾರ್ಥಿನಿ. ರಂಗಪ್ಪಜ್ಜನ ಪ್ರೀತಿಯ ಮಗಳು

ಶೈಲಿ–ದೀಪ್ತಿ — ವಿಶಾಲಿಯ ಸ್ನೇಹಿತೆಯರು

ಈ ನಾಟಕವನ್ನು
ಪ್ರಯೋಗಿಸಬಯಸುವವರು
ಲೇಖಕರ ಸಂಭಾವನೆ
ರೂ. 15/- ನ್ನು
ಪಾವತಿಸಿ
ಅನುಮತಿ
ಪಡೆಯುವುದು.

—ಲೇಖಕ

ಪ್ರವೇಶ ೧.

ರಂಗಪ್ಪಜ್ಜನ ಗುಡಿಸಲು. ಒಂದು ಹೊರಬಾಗಿಲು ಅದಕ್ಕೆ ನೇರವಾಗಿ ಅಡಿಗೆ ಮನೆಯ ಬಾಗಿಲು. ಒಟ್ಟೆ ಹಾಕಲು ಒಂದು ಹಗ್ಗ ಕಟ್ಟಿರಬೇಕು. ಒಂದು ಮಂಚ ಮೊರಸು ತರಪದು, ಮುರುಕಲು ಕುರ್ಚಿ-ಟೇಬಲ್, ಒಂದು ಹಳೇ ದೇವರ ಫೋಟೋ ಗೋಡೆಯಲ್ಲಿ. ಖಾಲಿ ಮಡಕೆ-ಚಂಬು. ಎರಡು ಅಲ್ಯುಮಿನಿಯಂ ತಪ್ಪಲಿಗಳು ಒಟ್ಟಿನಲ್ಲಿ ಒಡರೈತನ ಮನೆಯ ದೃಶ್ಯವನ್ನು ಬಿಂಬಿಸುತ್ತಿರಬೇಕು. ಅರುಣೋದಯದ ಸಮಯ ವನ್ನು ಪ್ರದರ್ಶಿಸುತ್ತಿರಬೇಕು.

ರಂಗಪ್ಪ : ನಿಂಗೀ...ನಿಂಗೀ...ಲೇ ನಿಂಗೀ (ಹೆಂಡತಿಯನ್ನು ಕೂಗುವನು)

ನಿಂಗವ್ವ : ಯೋನ್ ಹೇಳ್ಯಾರ ಹೇಳ್ರಿ; ಸುಮ್ಕ ಯಾಕ್ ವದರಾಕ್ ಹತ್ತೀರಿ

ರಂಗಪ್ಪ : ಲೇ. ನಿಂಗೀ ಇಂದ ನಾ ಲಗೂನ ಪರ್ಸಿಡೆಂಟತ್ರ ಹೋಗೂವವ, ಅದಕಾ ನೀ ಕೂಲೇರ್ನ ಕರ್ಕೊಂಡು ಹೊಲಕ್ಕಡೀ ಹೋಗಲಾ.

ನಿಂಗವ್ವ : ಅದೇನ್ರಿ ಅಂತಾದೇನ್ ಅವರ್ಕಡೀಲಿ ಕೆಲ್ಸ ಆಗೋದೈತಿ ?

ರಂಗಪ್ಪ : ಅದೆ! ಅಂದಾ ಹೇಳಿದ್ನಲ್ಲಲೇ ; ನಮ್ಮೂರಾಗ ದ್ವಾಡ್ ದ್ವಾಡ್ ಹುಡ್ರಿಗೂ ಅನ್ಕೂಲ ಆಗುಹಂಗ ದೊಡ್ಡ ಸಾಲಿಗುಡಿ ಮಾಡಕ ಹತ್ಯಾರ.

ನಿಂಗವ್ವ : ಅಯ್ಯಾ ಶಿವನ! ಅದ್ಯಾಕ್ ಬೇಕ್ರಿ ನಮ್ಮೂರಿಗೆ ? ಈಗ ಇರೋ ಸಾಲಿನಾ ಪಡಸಾಲಿ ಆಗಾಕ ಹತ್ಯಾವ ? ಇದ್ ಕಟ್ಟಿ ಯಾವ ಉದ್ಧಾರ ಮಾಡೂವದಾ ?

ರಂಗಪ್ಪ : ಐ...ನೀ ಏನ್ ಹುಚ್ಚದೀ ಅಂತಿನಿ ; ಅಲ್ಲಾ ನಮ್ಮಕ್ಕು ದ್ವಾಡ್ ದ್ವಾಡ್ ಸಾಲಿಕಲ್ತು. ಇಂಜೀನೀರೋ, ದಾಗದಾರೋ ಆಗಿ ಶಹರಾ ಸೇರಿದ್ರ, ನಮ್ಗೂ ಭಾಳ ಕಿಮ್ಮತ್ ಇರ್ತದಾ ಹಳ್ಯಾಗ ಅಲ್ದ ನಾವೂ ಆದೇ ನೆಪ್ದಾಗ ಶಹರಾ ನೋಡಾಕ್ ಆಗ್ತೈತಲೇ ಹೆಂಗಂತೀ ? ನನ್ನ ಅಂಬೋಣ ಖರೇ ಐತೋ ಇಲ್ಲೋ ?

ನಿಂಗವ್ವ : ಮಾಡಿದ್ದುಂಡು ಮನಿಮಕ್ಳು ಹೊಲಮನಿ, ದನಕರ ಅಂತ ನೋಡ್ಕೊಂಡಿದ್ರೆ ಆಟೇ ಸಾಕ. ಅಟಾಕೊಂದ್ರೊಕ್ಕ ಖರ್ಚ್ ಮಾಡಿ ಶಾಣ್ಯಾರ್ನ ಮಾಡಿದ್ವಿ ಅಂದ್ಕೊಳ್ರಿ; ಆಮ್ಯಾಲೇ ಅವು ನಮ್ಮ ಕಾಳಜೀ ಮಾಡ್ತಾವ ಅಂತ ಯಾವ ಹೇಳ್ತಾನ ? ಕೆಟ್-ಕೇಸ್ ಇಟ್ಟು ಹೋಗ್ತಾವ. ಹೆಣಮಕ್ಕಿಗಂತೂ ದ್ವಾಡ್ ಓದು ಏನೂ ಚಲೋ ಅಲ್ಲ ನೋಡ್ರಿ, ಸುಮ್ಕ ನಿಮ್ಮ ಪಡಿಸೆಂಟರಗ ಹೇಳಿ "ಕಾಣ್ಸೊಲ್ಲ" ಅಂತಾರಲ್ಲ ಅದನ ಮಾಡಿಸ್ರಿ ಏನ ?

ರಂಗಪ್ಪ : ಕಾಣ್ಸೊಲ್ಲ ಅಲ್ಲಲೇ : ಕ್ಯಾನ್ಸಲ್ಲ. ನಿಮ್ಮಂತಾ ಹಳ್ಳಿ ಮುಕ್ಕಗಳ ಮಾತ ಕೇಳಿದ್ರ ಯಾವಾರ ಬೇಕೂಫ್ ಆಗ್ಬೇಕಾಗ್ತೈತಿ, ಸುಮ್ಕ ನೀ ಹೋಗು, ನಾ ಹೇಳಿದ ಕೆಲ್ಸಾನೋಡ (ನಿಂಗವ್ವ ಹೊರಟುಹೋಗುವಳು)

ವಿಶಾಲಿ : ಅಪ್ಪಾ...ಅಪ್ಪಾ... (ತಂದೆಯುನ್ನು ಕೂಗುತ್ತಾ ಬರುವಳು)

ರಂಗಪ್ಪ : ಬಾ...ಬಾ ಮಗಳಾ...

ವಿಶಾಲಿ : ಏನಪಾ, ಅವ್ವನತ್ತೀಕ್ಲೆ ಅದೇನೋ ಸಾಲಿ ಪಾಲಿ ಅಂದ್ಹಾಂಗ ಆತು. ಏನಪ ಅದು ?

ರಂಗಪ್ಪ : ಅದೇ ಮಗಳಾ...ಇಲ್ಲಿತಂಕ ದ್ವಾಡ್ ಓದು ಓದೂಕಂತ್ಲೇ ಶಹರಾ ಹುಡುಕ್ಕಂಡ್ ಹೋಗ್ಬೇಕಿತ್ತು. ಇನ್ಮ್ಯಾಗ ಆ ತಕಲೀಫೇ

ಅಗ್ದಂಗ ನಮ್ಮೂರಿಗೇ ಆ ಸಾಲಿ ತಂದಾರಾ, ನಮ್ಮಂಥ ಗರೀಬ್ರು ಸಹಾ ಮನ್ಯಾಗ ಉಂಡು. ಮನಿಬಾಗ್ಲಾಗ ಕಲಿಯೋಂತ ಅವ್ಕಾಶ ಮಾಡಿ. ಖರ್ಚು ಕಡಿಮೆ ಆಗೂಹಂಗ ಮಾಡ್ಯಾರ. ಅದಾ ಹೇಳ್ತಿದ್ನವಾ, ನಿಮ್ಮವ್ವ ಕಡೀಗೆ.

ವಿಶಾಲಿ : ಜಲೋ ಆತ್ಕೋಡಪಾ : ಅದೆ, ಅಪಾ...ಅಪಾ ಮುತ್ತಾs...

ರಂಗಪ್ಪ : ಯೋನ್ ಹೇಳ್ ಮಗಳಾ ? ಭಿಡೇ ಮಾಡ್ಕೊಳ್ಳಂಗ ಏಳ್ ಮಗಾ

ವಿಶಾಲಿ : ಮುತ್ತಾ...ಮುತ್ತಾ... (ನಾಚಿಕೆಯಿಂದ ಕೇಳುವಂತೆ ನಟಿಸುತ್ತಿರಬೇಕು) ನನ್ನ ಸಾಲೀಗೆ ಕಳಸ್ತಿಯೋನಪಾ ?

ರಂಗಪ್ಪ : ನಿನ್ಗಿಲ್ಲಾಂದೇನ ಮಗ್ಳಾ. ನೀನೆ ನನ್ನ ಪರ್ಪಂಚ. ನೀನೇ ನನ್ನ ಕಣ್ಣು. ಶಿವ್ನಾಣೆ ಕಳಿಸ್ತೀನಿ ಮಗಳಾ
ವಿಶಾಲಿಗೆ ತುಂಬಾ ಸಂತೋಷವಾಗುವುದು ಹರ್ಷಾತಿರೇಕದಿಂದ ಗುಣುಗುಣಿಸುತ್ತಾ (ಹೊರ ಹೊರಟ ತಂದೆಯನ್ನು ಸ್ವಲ್ಪ ತಾಳಲು ಹೇಳಿ ಒಳಗೆ ಹೋಗಿ ಚಹಾದ ಬಟ್ಟಲನ್ನು ತುಂಬಿತಂದು. ಮಮತೆಯಿಂದ ತಂದೆಯ ಕೈಗೆ ನೀಡಲು ಬಂದಾಗ ತಂದೆ ನೀರು ತರಲು ಸ್ವಾರೆ ಹಿಡಿದದ್ದು ನೋಡಿ)

ವಿಶಾಲಿ : ಅಪಾ ... ಏಟ್ ಬಾರಿ ಹೇಳಿನಿ ನಾ ... ಬ್ಯಾಡಪಾ ... ನನಗೆ ಮನ ನ್ಯಾಗೇತಿ...ನಿನ್ಕೈಲಿ ಆಗೋದಿಲ್ಲಂತ...ನೀ ಕೇಳವಲ್ಯಾಕ ? ನಾ ಸಮಾಜಕ್ಕೆ ಹೊಂಟೀನಿ ಹೊಳ್ಳಿ ಬಂದ್ ತರ್ತೀನಿ ...ನೀ ಸ್ವಾರಿ ಆಟ್ಲಿಡಾ (ಎಂದವಳೇ ತಂದೆಯ ಕೈಯನ್ನು ಹಿಡಿದು ಚಹಾದ ಬಟ್ಟಲನ್ನು ಪ್ರೀತಿಯಿಂದ ನೀಡುವಳು)

(ತೆರೆ ಬೀಳುವುದು)

ಪ್ರವೇಶ ೨.

(ಬಸವ ಹಣ್ಣಿನ ಪುಟ್ಟಿ ಹೊತ್ತುಕೊಂಡು ಕೈಯಲ್ಲಿ ಬಸ್ವಿಯ ಕೈಯನ್ನು ಹಿಡಿದು ಎಳೆದು ತರುತ್ತಿರುವನು)

ಬಸವ : ಯೇ ಬಸ್ವಿ ನಿನ್ನ ಪುರಾಣ ಎಲ್ಲಾ ಮುಚ್ಚಿಟ್ಟು, ಮರ್ಯಾದಿಂದ ನನ್ನ ಹಿಂದೆ ಬಂದ್ಯ ಸರಿ ! ಇಲ್ಲಾಂದ್ರು...!

ಬಸವಿ : ಇಲ್ಲಾಂದ್ರು ? ಯೋನ್ ಮಾಡ್ತಿ... ನಾನಂತೂ ಸುತಾರಾಂ ಬರೋವಾಕಿ ಅಲ್ಲಾ, ನನ್ನ ತೆವರ್ನಾಗೆ ಅವ್ವನಕೂಡೆ ಸುಖ್ವಾಗಿ ಇರೋದ ಬಿಟ್ಟು ನಿನ್ನ ಕಡೀಲಿ ಏನಮಂತಾ ಬರಲೋ ಮಳ್ಳ !

ಬಸವ : ನನ್ನ ಕಡೀಲೆ ಏನದಂತಾ ಕೇಳ್ತಿಯೇನ್ಲೆ ? ಎಲ್ಲಾ ಬಿಟ್ಟು ಈಟ್ ಜನದ್ಮುಂದ್ಲೇನೆ ಅದ್ನೂ ಹೇಳೋದೇನ್ಲೇ (ಉಗುಳುವಂತೆ ನಟಿಸಿ) ಥೂ ನಿನ್ನ ಮಾರಿಗೆ ಬೆಂಕಿ ಹಚ್ಚಾ.

ಬಸವಿ : ಅಲ್ಲಾ ನಿನ್ಮುಸುಡ್ಯಾರು ಅದೇನ್ ಪಸಂದ್ ಕಾಣ್ಸೆ ನಮ್ಮವ್ವ ನಿಂಗೆ ನನ್ನ ಕೈಹಿಡ್ಸಿದ್ಲೋ ಭಗ್ವಂತ್ನೇ ಬಲ್ಲ ! ಏನೋ ಹಳ್ಳಿ ಮನ್ಸ್ಯಾ ನಿಯತ್ತಿನವಾ ಇರ್ತಿ. ಬಾಳೇವ್ನಾಗ ಈಟ್ ಜೀವಕ್ಕೆ ನೆಮ್ದಿ ತರ್ತಿ ಅನ್ನೋ ಆಸೆ ಹೊತ್ಕೊಂಡು ಕಾದಿನ್ನ ; ಆದ್ರು ನಿನ್ನ ಅಣೇಭಾರಾ ನೋಡಿದ್ರ ಇಂಗೇ ಕತ್ತಿ ಚಾಕ್ರಿ ಮಾಡ್ಬೇಕಾ, ಕಾಸಿನ ಕಿಮ್ಮತ್ತಾರ ಬರೋಬರಿ ಅದನಾ ಅಂದ್ರೆ ಅದೂ ಇಲ್ಲ ಆ ಹಳ್ಯಾಗರ ಏಟ್ಮನಿ ಅದಾವ ? ಅದೇಟ್ ಸಂಪಾದ್ನೆ ಆದೀತ ?

ಬಸವ : ಬಸ್ವಿ, ಮಾತ ಭಾಳ ಆತ, ತಾಳಿಕಟ್ಟಿದ ಗಂಡ ಅನಿಸಿಕೊಂಡವ ನಾ ಆದೀನಿ; ಮಾಡ್ಕೊಂಡವ್ರು ಕೂಡೆ ಬರದುಲ್ಲ ಅಂದ್ರು ಕೂಡ್ಕೊಂಡವಾ ಮತ್ತಿನ್ಯಾರರಾ ಬ್ಯಾತೇವ ಇದಾನೇನ ಹೆಂಗ್ ? (ಕುಯ್ಗುಡುತ್ತಾ ಹೇಳಬೇಕು)

ನಾ ಮರ್ವಾದಿಂದ ಹೇಳ್ತಾ ಅದೀನಾ ; ನೀ ಬರೋ ಆಕಿ ಜೊದಾ ಏನ್ ಅಲ್ಲಾ ? ಸುದ್ದಾ ವದರ.

ಬಸವಿ : ಇಲ್ಲಾಂದ್ರೆ ಏನ್ಮಾಡ್ತಿ ?

ಬಸವ : ಏನ್ಮಾಡ್ತಿನಾ ? ಇಕಾ ಇಂಗಾ (ಎಂದವನೇ ಅವಳನ್ನು ಅನಾಮತ್ತಾಗಿ ಎತ್ತಿಕೊಳ್ಳಲು ಹೋಗುವನು)

ಬಸವಿ : ಅಯ್ಯ ಬಿಡಾ…ಬಂದೇ. ನಾ ಬಿಡಾ (ಎಂದು ಕೊಸರುವಳು)

ಬಸವ : ಅಂಗ್ ಬಾ ದಾರಿಗೆ

ಬಸವಿ : ನೋಡಾ…ನಂದೇನಡ್ಡಿಲ್ಲಾ…ನವ್ಮವ್ವನ್ನ ಪರವಾನ್ಗಿ ತಗೋ ಇಂದೇ ಹೊಂಡಾಕ ತಯಾರ ನಾ…ತಿಳಿತ್ತಿಲ್ಲೋ ?

ಬಸವ : ಯ್…ಏಯ್ ತಾಳಿಕಟ್ಟಿದ್ದು ನಿಂಗೆ; ನಿವ್ಮವ್ವಗಲ್ಲ. ನಾ ಒಂಟಿ ಆಗಿ ದಗ್ದಾ ಮಾಡಿ ಮಾಡಿ ದುಬ್ಬ ಸವ್ದಾವ. ಏನೋ ಈ ಒಂಟಿಗೊಂದು ಜಂಟಿ ಆದ್ರೆ ಸೊಂಟ ಸ್ವಲ್ಪ ಕುಂಟ್ದಂಗಾದೀತಾಂತವ್ರ ಈ ತುಂಟ ದನಾನ ದಂಟಲಿ ಬಡೀದ ದಾರಿಗುಂಟ ಬರೋಹಂಗ ಕಾಣೋಹಂಗಿಲ್ಲ ನೋಡ್ರಿ (ಎನ್ನುತ್ತಾ ಪ್ರೇಕ್ಷಕರ ಕಡೆ ನೋಡಿ ಕೈಯಲ್ಲಿದ್ದ ವಲ್ಲಿಯನ್ನೆ ಸುರುಳಿ ಹಗ್ಗ ಮಾಡಿ ಅವಳ ಬೆನ್ನ ಹಿಂವಕ್ಕೆ ಸಣ್ಣ ಏಟು ಕೊಡುವನು)

ಬಸವಿ : ನಾ ಒಲ್ಲೋ : ಯಪ್ಪಾ ಹೇಳ್ದಂಗ್ ಕೇಳ್ತಿನೋ ನಿನ್ನ ಕೂಡ ಬರ್ತಿನೋ ಚಾಕ್ರಿ ಮಾಡ್ತೀನೋ (ಎನ್ನುತ್ತಿದ್ದಂತೆ ಬಸವ ಅವಳ ಕೈಯನ್ನು ಜಗ್ಗುತ್ತಾ ಎಳೆದುಕೊಂಡು ಹೋಗಬೇಕು)

(ತೆರೆ ಬೀಳುವುದು)

* *

ಪ್ರವೇಶ ೩

(ರಂಗಜ್ಜನ ಮನೆ. ಎಡಗೈಯಲ್ಲಿ ಎರಡು ಕಬ್ಬಿನ ಜಲ್ಲೆ ಹೊತ್ತು ಬಲಗೈಲಿ ನೀರಿನ ತುಂಬಿದ ಸ್ವಾರೆಯನ್ನು ಹಿಡಿದು ಒಳಕ್ಕೆ ಬರುವನು)

ರಂಗಪ್ಪ : ಏನಿದು ? ಮನೆಯಂಲ್ಲಾ ಕತ್ಲೂ ?...ವಿಶಾಲವ್ವ!...ವಿಶಾಲವ್ವ! ಎಲ್ಲೋಯ್ತು ಮಗಾ ? (ಎನ್ನುತ್ತಾ ಸ್ವಾರೆಯನ್ನು, ಜಲ್ಲೆಯನ್ನು ಬದಿಗಿಟ್ಟು ಕಪ್ಪಿಡಿದ ಕಂದೀಲಿನ ಬೆಳಕನ್ನು ಏರಿಸಿ) ನನ್ನೇನಾದ್ರು ನೋಡ್ಕೊಂಡ್ ಒಂಟ್ ಗಿಂಟ್ ಹೋಯ್ತು ಅಂತಾ ನೋಡಾಪಾ (ಎನ್ನುತ್ತಾ ಹೊರಡಲು ಅಣಿಯಾಗುತ್ತಿದ್ದಂತೆ)

ವಿಶಾಲಿ : ಅಪ್ಪಾ...ಅಪ್ಪಾss... (ಎಂದು ಹೊರಗಿನಿಂದ ಬರುವಳು)

ರಂಗಪ್ಪ : ಎಲ್ಲಿಗೋಗಿದ್ದೆ ಮಗಾ ಈಟೊತ್ನಾಗೆ ?

ವಿಶಾಲಿ : ನನ್ನ ಸ್ನೇಹಿತ್ಲು ಆದಾಳ ಶೈಲಿ ; ಅವಳ ಮನಿಗೋಗಿದ್ದೆ ಅಪ್ಪಾ; ಶೈಲಾನ ತಂದಿ ನಾಳೆ ಆಕಿನ್ನೂ ಸಾಲಿಗೆ ಸೇರುಸ್ತಾ ರಂತಪಾ...ಅವ್ಳು ನನ್ನ ಸೇರಿಕೋ ಅನ್ನಲಿಕ್ಕ ಹತ್ಯಾಳ, ನನ್ಗೂ ಚಡಪಡಕಿ ಆಗೀದ. ಹೆಂಗಾರ ಮಾಡಿ ಸಾಲಿಗೆ ನನ್ನ ಹೆಸ್ರು ಹಚ್ಚಸಪ(ಎಂದು ದೀನಮುಖದವಳಾಗಿ ತಂದೆಯನ್ನು ಕೇಳುವಳು)

ರಂಗಪ್ಪ : ಮಗಾ...ನಿನ್ಗಾವತ್ತು ಇಲ್ಲಾ ಅಂದೇನ ? ನಿನ್ನ ಖುಷಿ ನೋಡಿದ್ರೆ ನನ್ಗೆ ಹುಣಿವಿ ಚಂದ್ರುನ್ ನೋಡ್ದಷ್ಟು ಖುಷಿ ಆಗ್ತದ. ಇನ್ನು ನೀ ಓದಿ ದ್ವಾಡ್ ಕಲಾಸ್ನ ಪಾಸ್ ಮಾಡಿದ್ರಂಕೂ ಸಂತೋಷಕ್ಕೆ ಹಾಲ್ಟ್ ಪೀಲೇ ಆಗ್ತದನೊ ಯೋನೊ ?

ವಿಶಾಲಿ : ಅಪಾ ಅದು ಹಾಲ್ಟ್ ಪೀಲಿ ಅಲ್ಲಪಾ 'ಹಾರ್ಟ್' ಫೇಲ್ ಹಾರ್ಟ್ ಫೇಲ್

ರಂಗಪ್ಪ : ಇಂಗನವ್ವ : ಪಕ್ಕಿ ಮುಕ್ಕ ಮೊಸ್ಲೇನೆ, ತಿದ್ಯಾಕಿವ್ವಾ. ನೀ ಇಂಗ್ಲೀಷ್ ಮಾ ತಾ ಡ್ತಿ ದ್ರ ಅ ದ್ನೇ ಬಾಯ್ಬಿಟ್ಕೊಂಡು ನೋಡೋವಾ ಅನಸ್ತದ. (ಅಷ್ಟರಲ್ಲಿ ಇವರೀರ್ವರ ಮಾತನ್ನ ಮರೆಯಲ್ಲಿದ್ದುಕೊಂಡು ಹೊಂಚು ಹಾಕಿ ಕೇಳಿದ ನಿಂಗವ್ವ ಅಲ್ಲಿಗೆ ಪ್ರವೇಶಿಸುವಳು)

ನಿಂಗವ್ವ : ಯೇನೆ ಮಳ್ಳಿ? ಏನ ಅಪ್ಪಗೂ ಮಗ್ಳಿಗೂ...ಆಹಾ...ಹಾ...ಹ ಏನ್ ಜೋಡಿ ಅಂದ್ರು "ಬ್ಯಾಳಿ ಬೆಲ್ಲದಾಗ ಬಿದ್ಹಂಗ್ಯಾಗೇದ" ಅಲ್ಲೇನೆ ಮಳ್ಳಿ. ಈ ಭಕ್ತಳು ಕೇಳ್ಲಿಕ್ಕೆ, ಈ ದ್ಯಾವ್ರ ವರ ಕೊಡ್ಲಿಕ್ಕೆ ಮನ್ಯಾಗ ನಂದಾರ ಏನ್ ಕಿಮ್ಮತ್ ಉಳಿದೈತಿ ? ನಾನೆಷ್ಟ್ಯೋಳು ? ಇಬ್ರೂ ನಂದೇನರಾ ಕಿಮ್ಮತ್ ಇಟ್ಟಿದೀರೇನ? ಅಯ್ಯೋ ನನ್ನ ಹಣೇಬಾರಾನೇ ! (ಎನ್ನುತ್ತಾ ಕೈಯಿಂದ ಹಣೆಗೆ ಕುಟ್ಟಿ ಕೊಳ್ಳುವಳು)

ರಂಗಪ್ಪ : ಯೇ ನಿಂಗಿ ಯಾಕ ಹಿಂಗ್ ಮಾಡ್ಲಿಕ್ ಹತ್ತೀ, ನೀ ಇವತ್ತು ಚೋಮನ ಗುಡ್ಲಿಗೇನಾರ ಹೋಗ್ಬಂದ್‌ಗಿಂದೀಯೇನ್ಲೆ ಇಂಗ್ಯಾ ಕ್ಯಾತಾಡ್ಲಿಕ್ ಹತ್ತೀದಿ?

ನಿಂಗವ್ವ : (ವಿಶಾಲಿಗೆ ಹೇಳುತ್ತಾ) ಇಲ್ ನೋಡೆ ವಿಶಾಲಿ. ಹೆಣ್ ಮಕ್ಳಿಗೆ ಭಾಳ ಓದು ಛಲೋ ಅಲ್ಲ ! ನೀಯೇನ್ ಓದಿ ಶಿವಂಗೆ ಹೋಗಿ ಮುಡ್ಡು ತರಾಕ ಗಂಡ್ಸೇನು ಅಲ್ಲ. ಇದ್ರಮ್ಯಾಲ ದ್ಯಾಪ್ ದ್ಯಾಪ್ ಓದ್ಕಡೀಗ್ ಓದಂಗಲ್ಲ ಮನಿಸ್ಯಾ ಅಂಕಾರದಿಂದ ನಾ ಮಾಡಿದ್ದೇ ಬರೋಬರಿ ಅಂತ ದಸ್ತ ಹಾದಿ ಹಿಡಿದೋನ ನಾ ಬೇಕಷ್ಟು-ಸಾಕಷ್ಟು ಕೇಳಿವ್ನಿ-ಕಂಡಿವ್ನಿ ! ನಮ್ಮೂರ ಗೌಡ ಪುಟ್ಟಪ್ಪನ ತಮ್ಮ ಕಿಟ್ಟಪ್ಪನ ಹೆಂಡ್ತಿ ಕೊಟ್ರವ್ವನ ಮಗಳು ಮೋಟವ್ವನ ಉದಾರಣೇನ ತಗೋ ಹೆಂಗಿದ್ ಮುದ್ದಿ ಹೆಂಗಾತು ?

ಈಗ ಅದೆಲ್ಲೋ ಮುಂಬೈದಾಗ ಕೆಟ್‌ಚಾಳಿ ಮಾಡ್ಕೊಂಡ್ ಬಾಳೇವ್ ನೆಡಸ್ತಿದಾಳಂತ. ಹಿಂಗ ಅಂತ ಮೊನ್ನೆ ಆ ಪರಸಿ ಮಗ್ಳ ಪಾರೋತಿ ಅಂದ್ಲವ್ವ

ರಂಗಪ್ಪ : ಯೇ...ನಿಂಗೀ, ಇನ್ನೂ ಎಳೀ ಮಗುತಾವೆ ನೀ ಯೇನ್ ಇಲ್ಲದ್ದೆಲ್ಲಾ ವದರ್‌ಲಿಕ್ ಹತ್ತೀದಿ? ಎಲ್ಲಾರಂತವ್ಳಲ್ಲೀ ನಮ್ಮಗಾ ವಿಶಾಲಿ!

ನಿಂಗವ್ವ : ನೀವೇನಾರಯೋಳ್ರಿ, ನಾ ಮಾತ್ರ ಮಗಳ್ನ ಹಾಯೋಸ್ಕೂಲಕ್ಕ ಕಳ್ಸೂವಾಕಿ ಅಲ್ರೀ...

ವಿಶಾಲಿ : (ಅಳುಮುಖದಿಂದ ತುಂಬಾ ದೀನಳಾಗಿ) ಅವ್ವಾ...ನಾ ಸುಳ್ಳು ಹೇಳಾಕಿಲ್ಲವ್ವ, ಮನ್ದೇವ್ರು ಮಲ್ಲಪ್ನಾಣೆ, ನಿನಗೆ–ಅಪ್ಪಗೆ ಕೆಟ್ಟ ಹೆಸ್ರು ತರೂ ಅಂಥಾ ದಗ್ದಾ ಮಾಡಾಕಿಲ್ಲವಾ...ನಿನ್ನ ಪಾದ್ದಾಣೆ ಹೇಳ್ತೀನವ್ವಾ...ಇಲ್ಲಾ ಅನ್ನಬ್ಯಾಡವ್ವಾ

ನಿಂಗವ್ವ : ವಿಶಾಲಿ, ಕಡಿಮಾತಂತ ಹೇಳ್ತಿನಿ, ಈ ಇಚಾರ್‌ದಾಗ ನನ್ನ ಮಾತೇ ನಡೀಬೇಕ್ ಈ ಮನ್ಯಾಗ (ಗಂಡನ ಕಡೆಗೆ ತಿರುಗಿ) ನೋಡ್ರಿ ನೀವೇನಾರ ಅನ್ರಿ...ನಾನಂತೂ ಈ ವಿಷ್ಯಕ್ಕೆ ಸುತರಾಂ ಒಪ್ಪುಆಕಿ ಅಲ್ರಿ (ವಿಶಾಲಿಯ ಕಿವಿ ಹಿಡಿದು) ಯೇ ವಿಶಾಲಿ!... ನಿನ್ಗೆ ಅವ್ವ ಅನ್ನೂಆಕಿ ಒಬ್ಳು ಏನಾರು ಬೇಕು ಅಂದ್ರ, ಸಾಲಿ ಆಸಿ ಬಿಟ್ಟು ಮನ್ಯಾಗ ಮುಸ್ರಿ-ಕೆಲ್ಸ ಮಾಡ್ಕೊಂಡು ಬಿದ್ದಿರು (ಏನ್ನುತ್ತಾ ದಡಬಡನೆ ಒಳಕ್ಕೆ ಹೋಗುವಳು)

ರಂಗಪ್ಪ : (ಪ್ರೇ ಕ್ಷ ಕ ರ ಕಡೆ ತಿರುಗಿ) ಹಲ್ಲಿದ್ದವ್ರಿಗೆ ಕಡ್ಲೆಇಲ್ಲ, ಕಡ್ಲಿ ಇದ್ದವ್ರಿಗೆ ಹಲ್ಲಿಲ್ಲ ಅನ್ನೊ ಹಂಗಾತು.

ಸರ್ಕಾರದೋರು ಪಾಪ ಎಲ್ಲೂ ಓದೂ ಬರಾ ಕಲೀಲಿಅಂತ ಏನೇನಪಲಾಸೆಲ್ಲಾ ಮಾಡಿ ವಯಸ್ರ ಶಿಕ್ಷಣಾ ಅದೂ ಇದೂ ಅಂತ ಮಾಡ್ಯಾರ. ನಮ್ಮ ಜಿಲ್ಲಾದ ಭಾಳ್ ಗ್ರಾಮುದಾಗೆಲ್ಲ ಆಗ್ಲೇ ಬಂದಾವಂತ. ನಮ್ಮೂರ್ಗ್ಗ ಈಟೋತ್ತಿಗೆ ಏನಾರ ಬಂದಿದ್ರ ಇಂತಾ ಹೆಂಗ್ಸರಿಗೆಲ್ಲಾ ಬುದ್ಧ್ಯಾರ ಬರ್‍ತಿತ್ತೆನೋ ಶಿವನೇ ಬಲ್ಲ.

ನಿಂಗವ್ವ : ಸಾಕ–ಸಾಕ ನಡಿ...ನಿನ್ನ ರಾಮಾಣ್ಯ: ನಂಗೂ ಭಾಳ ಬ್ಯಾಸ್ರ ಆಗೇತಿ ಹೊಟ್ಯಾಗ ದೊಂಬ್ರು ಆಡ್ಲಿಕ್ ಹತ್ಯಾರ ಉಣ್ಣೋಣು, ನಡೀ...ನಡೀ

ರಂಗಪ್ಪ : (ವಿಶಾಲಿಯು ಕೈಹಿಡಿದು) ನೀನೂ ನಡೀ ಮಗಾ ತಿನ್ನಾಕ

ವಿಶಾಲಿ : ನಂಗ್ಬ್ಯಾಡಪ್ಪಾ. ಹಸ್ವಿಲ್ಲ ನೀ ಉಣ್ಣು ನಡಿ. (ಎನ್ನುತ್ತಾ ರೂಂನೊಳಕ್ಕೆ ಪ್ರವೇಶಿಸುವಳು) ಬೇಸರವ ಮುಖಮಾಡಿ ಕೊಂಡು ರಂಗಪ್ಪನು ಅಡಿಗೆಯು ಮನೆ ಪ್ರವೇಶಿಸುವನು.

(ತೆರೆ ಬೀಳುವುದು)

* *

ಪ್ರವೇಶ ೪.

(ಶಾಲಾ ಮಾಸ್ತರರ ಮನೆ. ಮಾಸ್ತರು ಮೇಜಿನ ಮುಂದೆ ಕುಳಿತು ಬರೆ ಯುತ್ತಿದ್ದಂತೆ ರಂಗಪ್ಪನ ಪ್ರವೇಶ)

ರಂಗಪ್ಪ : ಶರಣ್ರೀ ಮಾಸ್ತರ

ಮಾಸ್ತರ : ನಮಸ್ಕಾರ ಬನ್ನಿ. ತಾವು ಯಾರು ಅಂತ ತಿಳೀಲಿಲ್ಲ ?

ರಂಗಪ್ಪ : ರಂಗಪ್ಪಾ ಅಂತಾರ್‍ರೀ

ಮಾ : ಕೂತ್ಕೊಳ್ಳಿ ರಂಗಪ್ಪನವರೇ (ಎಂದು ಕುರ್ಚಿಯನ್ನು ತೋರಿಸುವರು)

ರಂಗಪ್ಪ : ಐ...ನಮ್ಗ್ಯಾಕರೀ ಮಾಸ್ತರ ? ಸಾಲಿ ಕಲೀಲಿಲ್ದ ಹಳ್ಳೀ ಹೈದ ಅವೆಲ್ಲಾ...ಬ್ಯಾಡ ಏಳ್ರಿ ನಾ ಇಲ್ಲೇ ಕುಂದ್ರತೀನಿ (ಎನ್ನುತ್ತಾ ನೆಲದಮೇಲೆ ಕೂಡ್ರುವನು.)

ಮಾ : ರಂಗಪ್ಪನವರೇ ನಿಮ್ಮಂತಹವರನ್ನೆಲ್ಲಾ ನೋಡಿದಾಗ ಮನಸ್ಸು ಬಹಳ ವ್ಯಥೆಪಡುತ್ತದೆ. ನೋಡಿ ತಮ್ಮ ಆಳ್ವಿಕೆಯ ಅಷ್ಟು ವರ್ಷಗಳಲ್ಲಿ ಬ್ರಿಟಿಷರು ನಮ್ಮನ್ನು ಎಷ್ಟು ತುಳಿದಿದ್ದಾರೆ ಎಂದು ಅವರ ಸಂಸ್ಕಾರದಲ್ಲಿಯೇ ಬೆಳೆದು ಬಂದ ನಮ್ಮ ಬಡ ಭಾರತೀಯ ಅದೃಷ್ಟ ವಲಿದು ಶ್ರೀಮಂತನಾದಾಗ ಅವನೂ ಸಹ ಅನುಸರಿಸುತ್ತಿರುವುದು ಇದನ್ನೇ. ಅವಿದ್ಯಾವಂತ ಮುಗ್ಧ ಜನತೆಯನ್ನು ತನ್ನ ಬಣ್ಣನೆಯ ಮಾತುಗಳಿಂದ ವಂಚಿಸಿ ನಿಮ್ಮಂತಹರನ್ನ ಎಲ್ಲಕ್ಕೂ ತಗ್ಗಿ-ಬಗ್ಗಿ ನಡೆಯುವಂತೆ ಮಾಡುತ್ತಿದ್ದಾರೆ. ಅದು ನಿಮ್ಮ ತಪ್ಪಲ್ಲ. ಇಲ್ಲಿ ನೀವ್ಯಾವ ಸಂಕೋಚವನ್ನು ಇಟ್ಟು ಕೊಳ್ಳಬೇಡಿ.

ರಂಗಪ್ಪ : ಭಾಳ ಛೇಷ್ ಹೇಳಿದ್ರಪಾ ! ...ನಿಮ್ಮಂಥಾ ಶಾಣ್ಯಾರೂ ಇಂಥಾ ಪಾಟಿ ಸರಳ ಇರ್ತಾರ ಅನ್ನೋದು ನಾ ಇಂವ ಕಂಡಿದ್ರಿ. ಇಂಥಾವ್ರು ನಮ್ಮ ವಿಶಾಲಿಗ ಮಾಸ್ತರಾ ಆಗಿ ಇರ್ತಾರ ಅನ್ನೊ ವಿಷ್ಯ ಕಂಡ್ ಹೋಳ್ಗಿ ಊಟ ಉಂಡಷ್ಟ್ ಸಂತೋಸಾಯ್ತ್ರಪಾ,

ಮಾ : ರಂಗಪ್ಪನವರೇ...ನಿಮಗೂ ಒಬ್ಬ ಮಗಳಿದ್ದಾಳೈ ಅಂದ್ರೆ ? ಆ ಹುಡ್ಗಿ ಹೆಸ್ರು ಏನಂದ್ರಿ ? ಶಾಲಿನಿ ಅಂತೇನೋ ಅಂದ್ರಲ್ಲಾ ?

ರಂಗಪ್ಪ : ಹೌದ್ರಿ ಸಾಹೆಬ್ರ, ನನ್ನ ಪ್ರೀತಿ ಕುಡಿ ಅದೊಂದಽೀ.

ಮಾ : ಸಂತೋಷ, ಅಂದ್ಹಾಗೆ ಜ್ಞಾಪಕಕ್ ಬಂತು: ಅಂದು ಯಾರೋ ಇಬ್ರು ಅವಳ ಗೆಳತೀರಂತೆ ಭೇಟಿಯಾಗಿದ್ರು. ಹಾಗೂ ಆ ಮಾತು ಈ ಮಾತ್ನಲ್ಲಿ ಅಪ್ತಾ ಶಾಲೆ ಸೇರೋ ವಿಚಾರ ಬಂದಾಗ ತಿಳಿಸಿದ್ರು. "ನೋಡ್ರಿ ಸರೂ ನಮ್ಮ ಅಪ್ತ ಗೆಳತಿ ವಿಶಾಲಿ ಅಂತ ಆದಾಳ ಅವ್ಳಿಗೂ ಸಾಲೀಗ ಸೇರೋ ವಿಚಾರ್ದಾಗೆ ಬಹಳ ಇಚ್ಛಾ ಅದ. ಆದ್ರ ಅವ್ರ ಅಪ್ಪಾ ಒಪ್ಪಿದ್ರೂ ಅವ್ವ ಒಪ್ಪೂ ಹಂಗಿಲ್ಲ" ಅಂದಿದ್ರು. ಇವ್ಳೇನಾ ಹಾಗಾದ್ರೆ. ಅಂದ್ಹಾಗೆ ರಂಗಪ್ಪನವರೆ ನಿಮ್ಮನೇವ್ರು ಎಲ್ಲೀವರೆಗೆ ಓದಿದಾರೆ ?

ರಂಗಪ್ಪ : ಅಯ್ಯಾ...ಶಿವನಾ...ನಾನರ ಎಳ್ಡ್ ವರ್ಷ ಮಣ್ಣು ಹೊತ್ತೇನ್ರಿ ಆದ್ರ ಮೋಡಿ ತಂದ್ "ಅ ಆ" ತಿದ್ದೂದನ್ನ ಅರಂಭ್ದಾಗೆ ಕೈ ಬಿಟ್ಟಿದ್ದ ಅದ ಅದು.

ಮಾ : ಹಾಗ್ಹೇಳ್ರಿ. ಅದಕ್ಕೆ ಅವರು ವಿದ್ಯೆ ಬೆಲೆ ಗೊತ್ತಿಲ್ದೆ ಮೂಗು ಮುರಿತಾರೆ. ಆದ್ರೂ ಪರವಾಯಿಲ್ಲ ಅವಕಾಶವಾದಾಗ ನಾನು ನಿಮ್ಮನೇಕಡೆ ಬರ್ತೀನಿ ನಿಮ್ಮ ಶ್ರೀಮತಿಯವ್ರಿಗೂ ಸ್ವಲ್ಪ ತಿಳಿವಳಿಕೆ ಹೇಳ್ತೀನಿ. ಇದ್ರ ಮೇಲೆ ನಮ್ಮ ಖ್ಯಾತ ಸಾಹಿತಿ ಡಿ.ವಿ.ಜಿ. ಯವರು ಹೇಳಿದಂತೆ

> ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ
> ನಿಹಿತವಾಗುವುದದರ ಗತಿ ಸೃಷ್ಟಿ ವಿಧಿಯಿಂ
> ಸಹಿಸಿದಲ್ಲದೆ ಮುಗಿಯುವುದದಾವ ದಶೆ ಬಂದೊಡಂ
> ಸಹನೆ ವಜ್ರದ ಕವಚ ಮಂಕು ತಿಮ್ಮ ॥

ನಿಮ್ಮವಂತೆ ಮಗನ ದೈವದಲ್ಲಿದ್ದಂತಾಗುತ್ತೆ. ಬಿಡಿ ಕಾದು ನೋಡೋಣ

ರಂಗಪ್ಪ : ಬರ್ತೀನ್ರಿ ಸಾಹೇಬ್ರ ನಾ ಬಂದ ಕೆಲ್ಸಾ ಎಲ್ಲಾ ಸಿಕ್ಕಂತ ಆತ್ರಿ.

ಮಾ : ನಮಸ್ಕಾರ, ಆಯ್ತು ಹೋಗ್ಬನ್ನಿ, ದೇವ್ರು ಒಳ್ಳೇದ್ಮಾಡ್ಲಿ (ಅಂದ್ಹಾಗೆ ಶಾಲೆ ಕಡೆ ಹೋಗ್ಬೇಕಿತ್ತು ಮರ್ತೇಬಿಟ್ಟಿದ್ದೆ, ಎಂದು ತಮಗೆ ತಾವೇ ಹೇಳಿಕೊಳ್ಳುತ್ತಾ ಹೊರಡುವರು)

(ತೆರೆ ಬೀಳುವುದು)

ಪ್ರವೇಶ ೫

(ರಂಗಪ್ಪಜ್ಜನ ಮನೆ. ಮುರುಕಲು ಮಂಚದ ಮೇಲೆ ಕಂಬಳಿ ಹೊದ್ದು ಮುಸುಗಿಟ್ಟು ವಿಶಾಲಿ ಮಲಗಿರಬೇಕು. ಸಂಜೆಯ ಹೊತ್ತನ್ನು ಸೂಚಿಸುವ ವಾತಾವರಣ. ರಂಗಪ್ಪನ ಪ್ರವೇಶ)

ರಂಗಪ್ಪ : ವಿಶಾಲೀ ...ವಿಶಾಲಕ್ಕಾ...ವಿಶಾಲವ್ವಾ... (ಎಂದು ದೈನ್ಯತೆ ಮತ್ತು ಮಮತೆಯಿಂದ ಕೂಗುತ್ತಾ ಬರಬೇಕು)

ನಿಂಗವ್ವ : (ಒಳಗಿನಿಂದ ಹಿಟ್ಟುಹತ್ತಿದಕೈಯನ್ನು ಸೆರೆಗಿಗೆ ವರೆಸಿಕೊಳ್ಳುತ್ತಾ) ಏನ್ರೀ ಅದ; ಒಂದೇ ಪಟೀಗ ವದರ್ಲಿಕ್ ಹತ್ತೀರಿ ? ಮನ್ಯಾಗ ಆಕಿನ್ಬಿಟ್ಟು ಬ್ಯಾರೇ ಎಲ್ಲಾ ಸತ್ಹೋಗ್ಯಾರೇನ ?

ರಂಗಪ್ಪ : ಏ...ಏ...ಯಾಕೇ ? ಯಾಕ ಹಂಗ್ ಮುರಾಸಂಜಿ ಮುಂದ ಲೊಡ, ಲೊಡ ಅನ್ನಲೀಕ್ ಹತ್ತಿದೀ ! ವೋಳ್ತು ಅನ್ನಾ. ಅಲ್ಲಾ ನೀ ಏನಾರ ಯಾವ್ದಾರ ಜನುಮದಾಗ ಅಕೀಗೆ ಮಲ್ತಾಯಿ ಆಗಿ ಈಗ ಪುರಸತ್ತಿಲ್ಲ ಮುಂದಿನ ಜನ್ಮದಾಗ್ ಸೇಡ್ನ ಪೂರೈಸ್ತಿನಿ ಅಂತ ಆಣೆ ಏನಾರ ಮಾಡಿದ್ದ ಹ್ಯಾಂಗ್ ಅಂತೀನಿ ? ಅಲ್ಲಾ ಆಕಿ ಹೆಸ್ರುಎತ್ತಿದ್ರು ಸಾಕ್ ಉರಿದು ಬೀಳ್ತಿ ! ಆತ. ಮಗಾ ಎಲ್ಲ ಬೊಗಳು ?

ನಿಂಗವ್ವ : ಅವಳ ಗೆಳತೇರ್ ಮನೀಂದ ಬಂದಾಕಿ ಮೈಯಾಗ್ ಅರಾಮಿಲ್ಲ ಅಂತ ಬಿದ್ಕೊಂಡಾಳ. ನಾನು ಹೊಲದ ಚಾಕ್ರಿ ಮಾಡ್ಕೊಂಡ್ ಬಂದು ಮನ್ಯಾಗ ನೋಡಿದ್ರ ಸ್ವಾರ್ಯಾಗ್ ನೀರಿಲ್ಲ, ಒಲಿ ನೋಡಾನ ಹೇಳ್ತಾತಿ ಛಂದಾತಲ್ಲ ಹ್ವಾರೀವ. ? ಹೊರಗ-ವಳಗ ಅಂತ ನಾನಾರ ಎಷ್ಟು ದುಡೀಲಿಕ್ ಆದೀತು ? ಈಗ್ಲ ಮರಾಣಿ ಹಂಗ ಮಾಡ್ತಾಳ. ಇನ್ಮುಂದ ನೀವ್ ಸಾಲಿ-ಗೀಲಿ ಅಂತ ಅಂದ್ರುಂತೂ ಮುಗ್ದೇ ಹೋತು. ಉಬ್ಬಿಸಿ ತಲಿಮ್ಯಾಲ ಕುಂಡ್ರಿಸ್ಕೊಂಡೀರಿ ಅನುಭವಸ್ರಿ. ನಾ ಅರ ಏನ್ ಮಾಡ್ಲಿ ? ಅದ್ಕೆ ಬಿಡ್ಕೊಂಡೆ ! ಮನಿ ಕೆಲ್ಸ ಮಾಡ್ಕೊಂಡ್ ಬಿದ್ದಿರ್ಲಿSS... ಅಂತ.

ರಂಗಪ್ಪ : (ಈ ಮಾತನ್ನು ಕೇಳುತ್ತಾ ವಿಶಾಲಿಯು ಬಳಿಗೆ ಹೋಗಿ. ಅವಳಿಗೆ ಬಂದಿರುವ ಜ್ವರವನ್ನು ನೋಡಿ ಬೆಚ್ಚಿದವನಂತಾಗಿ) ಥೂ ಅರಿಷ್ಟ ಮುಂಡೇದೆ ! ಜ್ವರಾ ಅದಾವ ಸಿಕ್ಕಾ ಪಟ್ಟೀ. ಏನಾಗಿದ ಅಂತ ಹೋಗಿ ನೋಡೋ ಸಹನಾ ಕೂಡ ಉಳಿಲಿಲ್ಲೇನ ನಿನಗೆ ?...

ನಿಂಗವ್ವ : ಹಾ...ಹೌದ್ರಿ ? ನಂಗೂ ಭಾಳ ಸುಸ್ತಾಗಿತ್ರ : ಮನೀಗ್ ಬಂದ್ ನೋಡಿದ್ರ ಸಂಜಿ ಆದ್ರೂ ಕಂದೀಲ ಬೆಳಗಿಲ್ಲ. ಒಲಿ ತಣ್ಣಗದ. ಸ್ವಾರ್ಯಾಗ ನೀರಿದ್ದಿಲ್ಲ. ಹೊಟ್ಟೆಹಸ್ವಿನಿಂದ ಭಾಳ ಸಿಟ್ಟು ಬಂತ ಹಂಗಾಗಿ ನಾ ನೋಡ್ಲಿಲ್ಲೇಳ್ರಿ ನನ್ನ ಕ್ಷಮ ಮಿಸ್ಬಿಡ್ರಿ ಬಿಕ್ಕುತ್ತಾ. (ಸಣ್ಣ ಮುಖ ಮಾಡಿಕೊಂಡು) ವಿಶಾಲಿ .. ವಿಶಾಲಿ (ಬಿಕ್ಕುತ್ತಾ ಹೇಳಿ.) ಅಯ್ಯೋ ನಮ್ಮಪ್ಪಾ ಮನಿ ಮುಳ್ಳೇಶಾSS ದ್ಯಾವ್ರಾSS ನಮ್ಮ ವಿಶಾಲಿ ಜ್ವರಾನ ಬೇಗ ಇಳ್ಸೋ ನಮ್ಮಪ್ಪಾ (ಬಿಕ್ಕುತ್ತಾ ರಂಗಪ್ಪನನ್ನುದ್ದೇಶಿಸಿ.) ಏನ್ರಿ ಇನ್ನೂ ಇಲ್ಲೆ ನಿಂತೀರಿ ? ದವಾಖಾನೀಗ ಬೇಗ ಹೋಗಿ ಡಾಗಟರನ್ನ ಕರ್ಕೊಂಬರ್ರಿ (ಬಿಕ್ಕುವಳು)

ರಂಗಪ್ಪ : ಓಹ್...ಹೌದೌದು ಏನ್ ಪ್ಯಾಲಿ ಅದೀನ್ ನೋಡ್ ನಾ. ಈಗ್ಲೆ ದವಾಖಾನೀಗ್ ಹೋಬ್ಬರ್ತಿನಿ (ಎನ್ನುತ್ತಾ ಹೊರಡುವನು. ಸ್ವಲ್ಪ ಸಮಯದವರೆಗೆ ಉಪಚಾರದ ಮಾತನಾಡುತ್ತಾ ಲಿಂಗಿ ವಿಶಾಲಿಯ ಪಕ್ಕದಲ್ಲಿ ಕುಳಿತಿರಬೇಕು ಅಷ್ಟರಲ್ಲಿ ಡಾಕ್ಟರನ್ನು ರಂಗಪ್ಪನು ಕರೆತರುವನು. ಮಗುಗೆ ಇಂಜೆಕ್ಷನ್ ಕೊಟ್ಟು ಬರುತ್ತಿದ್ದಂತೆ ರಂಗಪ್ಪ–ಲಿಂಗವ್ವರು ಡಾಕ್ಟರನ್ನುದ್ದೇಶಿಸಿ.)

ನಿಂಗವ್ವ : ಡಾಗಟ್ರೆ...ಡಾಗಟ್ರೆ ದಯಮಾಡಿ ಹೇಳ್ರಪಾ ನಮ್ಮ ಕೂಸಿಗೆ ಏನ್ ಆಗಿದಾ ಅಂತ ? ಯಾಕ್ ಈ ಪಾಟೀ ಜ್ವರ ಅಂತಿವ್ನಿ ?

ಡಾಕ್ಟರ್ : ನೋಡಮ್ಮ ಮಗುವಿಗೆ ಜ್ವರ ಇರುವುದ ಹೌದು. ಏನ್ ಗಾಭರಿ ಇಲ್ಲ, ಅವ್ಳಿಗೆ ಬೇರೆ ಇನ್ಯಾವ ಕಾಯಿಲೇನೂ ಕಾಣಿಸ್ತಾ ಇಲ್ಲ, ಮಗೂ ಯಾವ್ದೋ ವಿಷಯಕ್ಕೆ ತುಂಬಾ ಕೊರಗ್ತಾ ಇದೆ, ಅದು ಮನಸ್ಸಿನ ಮೇಲೆ ಪರಿಣಾಮ ಆಗಿ ಈ ರೀತಿ ಟೆಂಪ್ರೇಚರ್ ಜಾಸ್ತಿ ಆಗಿರ್ಲಿಕ್ ಸಾಧ್ಯವಿದೆ. ಇಲ್ಲಿ ನನ್ನ ಇಂಜೆಕ್ಷನ್ ಗುಳಿಗಿಗಿಂತ ಆ ಮಗೂನ ಮನಸಿಗೆ ಸಮಾಧಾನ ಸಿಗೂವಂಥ ವಾತಾವರಣ ಮತ್ತು ನಿಮ್ಮ ನಡೆನುಡಿ ಬದಲಾಯಿಸ್ಬೇಕು. ಅಂಥಾ ಪ್ರಕರಣ ಹೊರಗೂ ನಡೆದಿರಬಹುದು ಅಥವಾ ಮನೆಯೊಳಗೆ ನಡೆದಿದ್ರೂ ನಡೆದಿರಬಹುದು ಗಾಭರಿ ಏನಿಲ್ಲ. ನಾ ಬರ್ತೀನಿ ಪೇಷಂಟ್ಸ್ ಕಾದಿದಾರೆ. ಶಾಪ್ ಬಾಗಿಲು ಹಾಕೋ ಸಮಯ ಸಹ ಆಯ್ತು (ಎನ್ನುತ್ತಾ ಹೊರಡುವರು.)

ರಂಗಪ್ಪ : ಏ ನಿಂಗೀ, ಅಂಗಡೀ ಕಡೀಹೋಗಿ ಗುಳಿಗೆ ತೊಗೊಂಡ್, ಹಂಗೇ ಶ್ಯೆಲಿ ಮನೀ ಕಡೀ ಹೋಗಿ ಇನಾರ ವಿಷ್ಯ ಸಿಕ್ರ ವಿಚಾರ್ಸಿ ಕೋಂಡ್ ಬರ್ತೀನಿ; ಅಲ್ಲಿವರೆಗೂ ಮಗಾ ಕಡೀ ನಿಗಾ ಇರ್ಲಿ, ಈಟ್ ಗಂಜೀನಾರಾ–ಕಾಫಿನಾರಾ ಕಾಸು. ಚಾ ಕಾಸಬ್ಯಾಡ

ನಿಂಗವ್ವ : ಹಂಗ ಮಾಡ್ರಿ ! ತಾಬಡ್–ತೋಬಡ್ ಹೋಗಿ ಬರ್ರಿ ನಂಗತೂ ಭಾಳ ಗಾಭ್ರಿ ಆಗೇತಿ. ವಿಶಾಲೀನ ಬಿಟ್ಟು ಅಳಗಾಡದಿಲ್ಲ (ಬರ್ತೀನಿ ಎನ್ನುತ್ತಾ ರಂಗಪ್ಪ ಹೊರಡುವನು ನಿಂಗವ್ವ ಒಳಕ್ಕೆ ಹೋಗಿ ಸ್ವಲ್ಪ ಧಡ ಬಡ ಶಬ್ದ ಮಾಡಿದಂತೆ ಮಾಡಿ ಒಂದು ಲೋಟದಲ್ಲಿ ಕಾಫಿಯನ್ನು ತೆಗೆದುಕೊಂಡು ಬಂದು) ವಿಶಾಲೀ...ವಿಶಾಲಿ...ಏಳವ್ವ ಸ್ವಲ್ಪ ಕಾಫೀ ಕುಡಿಯವ್ವಾ ಬೆಳಗಿಂದ ಹೊಟ್ಯಾಗ ಏನಿಲ್ಲ ಏಳವ್ವ (ಎನ್ನುತ್ತಾ ಉಪಚರಿಸುತ್ತಿರುವಳು)

ರಂಗಪ್ಪ : (ಅಷ್ಟರಲ್ಲಿ ರಂಗಪ್ಪ ಗುಳಿಗೆ ಪೊಟ್ಟಣ ಹಿಡಿದು ಒಂದೇ ಆತುರದಲ್ಲಿ) ನಿಂಗೀ...ನಿಂಗೀ ಮಗಾ ಹೇಗಿದೆ ? ಕಾಫೀ ಕೊಟ್ಯಾ ಗಂಜೀ ಕೊಟ್ಯಾ ? (ಎಂದು ಕೇಳುತ್ತಾ ಪ್ರವೇಶಿಸಬೇಕು)

ನಿಂಗವ್ವ : ಶಿವನೇ ಜ್ವರದ ತಾಪಕ್ಕ ಮೂಲಕಾಕ ಹತ್ಯಾಳ ಕಾಫಿ-ಗೀಫಿ ಏನೂ ಕುಡಿದಿಲ್ರೀ. ನಾನೂ ಆಗ್ಲಿಂದ ಕೇಳ್ಕೋತ್ ಹತ್ತೇನಿ. (ಹೀಗೆನ್ನುತ್ತಿದಂತೆ ವಿಶಾಲಿಯು ಸ್ವಲ್ಪ ಕೊಸರಾಡುವಳು)

ರಂಗಪ್ಪ : ವಿಶಾಲಿಗೆ ಸ್ವಲ್ಪ ಎಚ್ಚರಾಗೇದ ಅಂತ ಕಾಣಸ್ತದ. ತಾಯಿ ಸ್ವಲ್ಪ ಕಾಫಿ ಕುಡಿಯುವ್ವಾ. ನೀ ಕಾಳಜಿ ಮಾಡಬ್ಯಾಡ ನಾ ಅದನ ನೀ ಕುಡಿಯುವ್ವಾ (ಎಂದು ದೀನನಾಗಿ ಅವಳ ತಲೆಯನ್ನು ನೇವರಿಸುತ್ತಿರಬೇಕು. ಅವನಂತೆಯೇ ನಿಂಗವ್ವನೂ ಗಂಡನ ಮಾತಿನಲ್ಲಿ ಮಾತು ಬೆರೆಸಿ ಹೇಳುತ್ತಿರಬೇಕು. ಆಗ ಇದ್ದಕ್ಕಿದ್ದಂತೆ ವಿಶಾಲಿಯು ಬಡಬಡಿಸುವಳು ಅದನ್ನು ಆಲೈಸಿ ಕೇಳುವವನಂತೆ ನಟಿಸಿ)

ರಂಗಪ್ಪ : ಅಪ್ಪಾ...ನಮ್ಮಪ್ಪಾ ಏನಪ್ಪಾ ಅದು ? ಅರ್ಥಾಯ್ತುಪ್ಪಾ ಈಗರ್ಥಾಯ್ತು ಮಗಾ. ಶೈಲಿ ಅಂದಿದ್ಲು.

ನಿಂಗವ್ವ : ಏನ್ರಿ ಅದು ನಂಗೂ ತುಸುನಾರಾ ಹೇಳ್ರಿ ಏನು ನಡಿತು ಅನ್ನೋದ. ವಿಶಾಲಿ ಏನಂದ್ಲ ? ನಂಗಂತೂ ಏನೂ ಅರ್ಥ ಆಗ್ಲೀಕ್ ವಲ್ದು. ಯಾವ ಶೈಲಿ ಏನ್‌ಕತಿ ?

ರಂಗಪ್ಪ : ಎಲ್ಲಾ ನಿಂದೇ ಪ್ರತಾಪ ! ನಿನ್‌ಕಡೀಂದಲೇ ಮಗಳ ಪರಿಸ್ಥಿತಿ ಹಿಂಗಾಗ್ಯದ. ಶೈಲಿ ಹೇಳಿದ್ ಬರೋಬರಿ ಅದ.

ನಿಂಗವ್ವ : ಅಯ್ಯೋಯ್ಯೋ ಅದೇನ್ರಿ ಪಸಿ ಸ್ವಚ್ಛಾರ ಹೇಳ್ರಿ, ನಾನೇನ ಅಂಥಾ ತಪ್ಪ್ ಮಾಡೇನಿ ? ಸರಿಮಾಡ್ಕೋತ್ನಿ ಅವ್ಳಿಗೆ ಹೆಂಗ್ ಚಲೋ ಅನಸ್ತದೋ ಹಾಂಗೆ ನಡ್ಕೋತ್ನಿ ನಂದ್ ಕಬೂಲ್ ಅದ. ಹೇಳ್ರಿ...ಹೇಳ್ರಿ !

ರಂಗಪ್ಪ : ಅದೇ ಆಕಿನ್ನಾ ಸಾಲಿಗ್ ಸೇರ್ಸೋ ವಿಚಾರಕ್ ನೀ ಭಾಳ ನಿಷ್ಠೂರಾಗಿ ಆಗೂದಲ್ಲ ; ಸುತರಾಂ ಒಪ್ಪೋ ಆಕಿ ಅಲ್ಲಾ. ಅನ್ನೋ ಮಾತ ಆಕಿಗೆ ತಿಳೀಯೋವರ್ಗೂ ಆಕಿ ಸಾಲೀಗೆ ಸೇರ್ತ್ನಿ ಅನ್ನೋ ಆಶ್ಯಾಗ ಖುಷ್ಯಾಗಿ ತನ ಗೆಳ್ತೀರ್ ಕೂಡನೂ ಹೇಳ್ಕೊಂಡಿದ್ಲಂತೆ, ಆದ್ರ ನೀ ಎಂದ್ ಸುತರಾಂ ನಾ ಒಪ್ಪೊಲ್ಲ ಅಂದಿ; ಅಂದ್ನಿಂದ ಮಂಕಾಗಿ ನಿಂತಲ್ಲೇ ನಿಂತ್ಲು ! ಕುಂತಲ್ಲೇ ಕುಂತ್ಲು ! ಹಿಂಗ್ ಗೇಣತೀರನ್ನ ಮಾತಾಡ್ಸಿದ್ರೆ ಆಡ್ಸಿದ್ಲು ಇಲ್ದಿದ್ರೆ ಇಲ್ಲೇ ಇಲ್ಲ. ಎಷ್ಟೋ ಅಷ್ಟ್ ಮಾತ ಅನ್ನೋ ಹಂಗಿದ್ಲಂತ. ಆಕಿ ಈ ವಿಷ್ಯ ಮನಸ್ಸಿನಮ್ಯಾಗ ಭಾಳ ತೊಗೊಂಡಾಳ ಅನ್ನೋ ವಿಷ್ಯ ಆಕಿ ಗೆಳತೇರು ಶೈಲಿ–ದೀಪ್ತಿ ಅದಾರಲ್ಲ ಅವ್ರು ಭಾಳ ಕೇಳಿವ್ರಂತೆ, ಆದ್ರೂ ಇವ್ಳು ಏನೂ ಹೇಳಿಲ್ವಂತೆ

ಅದಕಾ ಜಗಳಾ ಮಾಡಿದ್ರೂನೂ ಚಿಂತಿಲ್ಲ. ಬೆಳಿಗ್ಗೆ ಅವರ ಆಗೋ ಮಾಸ್ತರ್‌ನ ಸಹ ಕರ್ಕೊಂಬಂದ್ ಬುದ್ಧಿ ಹೇಳ್ಸೋಣು ಅಂತಾಲೇ ಇದ್ರಂತೆ. ಅಷ್ಟರಲ್ಲಿ ಈ ವಿಷ್ಯಾ ಕೇಳಿ ಭಾಳ ಗಾಭ್ರಿ ಆಗಿ. ನಾಪೂ ಬರ್ತೇವಿ ಮನೀಗೆ ಅಂದ್ರು. ನಾನೇ ಬ್ಯಾಡಾ ಅಂತಾ ಸೀರಿಯಸ್ಸೇನೂ ಇಲ್ಲ. ಡಾಗಟರು ಚೂಜಿ ಮಾಡಿ ಗುಳಿಗಿ ಬರ್ಕೊಟ್ಟಾರ, ನಿದ್ದಿ ಮಾಡ್ಲಿಕ್ ಹತ್ಯಾಳ ಬೆಳಿಗ್ಗೆ ಬರವಂತ್ರೀ ಎಂದ್ ಅಂದ್ ಬಂದ್ನ.

ನಿಂಗವ್ವ : ಅಯ್ಯೋ ಶಿವನೇ ... ಮಲ್ಲೇಶಾ ...ನಂಗೇನ್ ಗೊತ್ತಪ್ಪಾ ಈಟೆಲ್ಲಾ ಆಗ್ತದ ಅಂತ. ಮಂಗ ಅಂದೇ "ಅಪ್ಪಾ ಮನ್ಸ್ದೇವ್ರು ಮಲ್ಲಪ್ನಾಣೆ, ನಿಮ್ಮಿಬ್ರಿಗೂ ಕೆಟ್ ಹೆಸ್ರು ತರೂಅಂತ ಕೆಲ್ಸ ಮಾಡಲ್ಲವ್ವಾ" ನಾನ್ ಸಾಲಿ ಸೇರ್ಲಿಕ್ ಒಪ್ಗಿ ಕೊಡವ್ವಾ ಅಂತು ನಾ ಪಾಪಿ. ಆ ಎಳೀ ಮನ್ಸನ್ನ ಅರ್ಥ ಮಾಡ್ಕೊಳ್ದೇ ಮಂಗ ನಂಥಾ ಕೆಲ್ಸ ಮಾಡಿದ್ನ, ಅದ್ಕ ಮಲ್ಲೇಶಾ ಬುದ್ಧೀ ಕಲ್ಸಿದ್ನಪ್ಪಾ (ಎಂದು ಬಡಬಡಿಸುವಳು)

ರಂಗಪ್ಪ : ಈಗ ಬಡಬಡಿಸಿದ್ರೇನ್ ಬಂತಾ. ಈಗ ಗುಳಿಗಿ ತಿನ್ಸಿ ಒಳ್ಳೇ ಮಾತ್ನಾಗ ಸ್ವಲ್ಪ ಕಾಫಿ ಕುಡ್ಸು. ತುಸು ಎಚ್ಚರಿಕಿ ಬಂದ್ಮ್ಯಾಲ ನೀ ಸಾಲೀಗ್ ಸೇರ್ವಂತಿ, ನಾನೂ ನಿಮ್ಮ ಅಪ್ಪಾ ಬಂದೆ ನಿನ್ನ ಸಾಲೀಗೆ ಸೇರ್ಸಿ ಬರ್ತೀವಿ ಅಂತ ಹೇಳು. (ಎಂದು ಅವನು ಒಳಗೆ ಹೋಗಬೇಕು)

ನಿಂಗವ್ವ : ವಿಶಾಲಿಯ ತಲೆ ಮತ್ತು ಮೈ ಕೈಯನ್ನು ಮೃದುವಾಗಿ ಸವರುತ್ತಾ ನಿಂತಿರಬೇಕು. ಆಗ ಹೊರಳಾಡುತ್ತಿರುವ ವಿಶಾಲಿಯನ್ನು ನೋಡಿ) ಅಪ್ಪಾ. ನಾನೂ ಇಲ್ಲೇ ಅದೀನಪ್ಪಾ. ನಿನ್ನ ಹತ್ತಿರಲೇ. ತಪ್ಪು ಮಾಡ್ಬಿಟ್ಟೆ ಕಣಪ್ಪಾ. ಮರ್ತುಬಿಡು ನಾಳೆ ಬೆಳಿಗ್ಗೆ ಆಗಿಂದ ಸಾಲಿಗೆ ಸೇರ್ಕೊಂವಂತಿ. ದಾರ್ವ್ಯೇವ್ರು ಅದ್ ನಾ

ಇದಕ್ಕ ಒಪ್ಪೀನವ್ವಾ (ಎನ್ನುತ್ತಾ ಅವಳ ಪಕ್ಕದಲ್ಲಿಯೇ ಮಲಗಿ ಕೊಳ್ಳುತ್ತಿದ್ದಂತೆ)

(ತೆರೆ ಬೀಳುವುದು)

* *

ಪ್ರವೇಶ ೬.

(ಬಸವನ ಗುಡಿಸಲು. ಬಸವ ಹೊರಗಡೆ ಕಟ್ಟೆಯ ಮೇಲೆ ಕುಳಿತಿರಬೇಕು. ಆಗ ವಿಶಾಲಿ-ಶೈಲಿ-ದೀಪ್ತಿ ಮೂವರು ಶಾಲೆಗೆ ಹೋಗುತ್ತಿರುವರು. ಇದನ್ನು ನೋಡಿದ ಬಸವನು ಆಶ್ಚರ್ಯದಿಂದ)

ಬಸವ : ವಿಶಾಲವ್ವಾ...ವಿಶಾಲವ್ವಾ...

ವಿಶಾಲಿ : ಏನ್ ಬಸಣ್ಣ ? ಬಂದೆss... (ಎನ್ನುತ್ತಾ ಅವನ ಹತ್ತಿರ ಬರುವಳು. ಆಗ ಅವಳ ಗೆಳತಿಯರು ವಿಶಾಲಿಗೆ "ನಾವು ಆ ಚೌಕನಾಗ ನಿಂತಿರ್ತೇವ ಮಾತಾಡ್ತ. ನೀ ಬ್ಯಾಗ ಬಾರಲಾ" ಎಂದು ಹೇಳಿ ತೆರೆಯೊಳಕ್ಕೆ ಸರಿಯಬೇಕು.)

ಬಸವ : ಏನ್ ವಿಶಾಲವ್ವಾ. ಆಶ್ಚರ್ಯ. ಸಾಲೀಗುಡೀಗ್ ಹೊಂಟ್ ನಿಂತಂಗದೆ. ಏನ್ ಹಕೀಕತ್ತವ್ವಾ ? ಸಾಲೀಗ್ ಯಾವಾಗ ಸೇರ್ದಿss...? ಏನ್ ಕತೀss...?

ವಿಶಾಲಿ : ನಿನಗೊತ್ತೇ ಇಲ್ಲೇನ್ ಬಸಣ್ಣಾ ? ಆಗ್ಲೆ ನಾಲ್ಕು ತಿಂಗಳು ಆಗ್ಹೋತು, ಆರು ತಿಂಗಳ ಪರೀಕ್ಷೆ ಬರಾಕ ಹತ್ಯಾವ.

ಬಸವ : ಭಾಳ ಸಂತೋಷಾತವ್ವಾ, ನಿಮ್ಮಪ್ಪಂದು ಯಾವಾಗ್ಲೂ ಇಚ್ಛಾ ಇದ್ದೇ ಇತ್ತು, ನಿಮ್ಮವ್ವ ಒಪ್ಪಿದ್ದೇ ಹೆಚ್ಚಾಯ್ತು

ವಿಶಾಲಿ : ಅದೂ ಭಾಳ ಕಥೀ ಆಗಿ ನಮ್ಮಪ್ಪ ಒಪ್ಪಿಗೆ ಕೊಟ್ರು ಬಸಣ್ಣಾ, ಅಂತೂ ನಿಮ್ಮಂಥೋವ್ರ ಪ್ರೀತಿ ವಿಶ್ವಾಸದಿಂದ್ಲೆ ನನಗೂ ಇಂಥಾ ಅವಕಾಶ ಕೂಡ್ಬಂತಾ !

ಬಸವ : ಛೀ...ಛೀ...ಏನ್ ಮಾತಂತ ಆಡ್ತೀಯವ್ವಾ ನಮ್ಮಂಥವ್ರ ಪ್ರೀತಿ. ವಿಶ್ವಾಸ ಅಂದ್ರ ಭಾಳ ದೊಡ್ಡಾತ ಆತವ್ವ...ನಮ್ಮ ಯೋಗ್ಯತಿ ಏನ ? ನಿಮ್ಮ ಯೋಗ್ಯತಿ ಏನ ? ನಮ್ಜಾತಿ ಯಾವ್ದ ? ನಿಮ್ಜಾತಿ ಯಾವ್ದ ? ಬಂದ ಬಂದವ್ರ ಬಟ್ಟಿ ತೊಳ್ದು ಛಂಡ್ ಬಾಳೇವ್ ನಡೆಸೋವ್ರಪ್ಪ ನಾವ್ರ.

ವಿಶಾಲಿ : ಹಿಂಗೆಲ್ಲಾ ಮಾತಾಡ್ಬಾರ್ದ ಬಸಣ್ಣ. ಭಗವಂತ್ನ ದೃಷ್ಟೀಲಿ ನಾವೆಲ್ಲಾ ಒಂದೇ. ಈ ಜಾತಿ. ಆ ಜಾತಿ. ಅನ್ನೋದೆಲ್ಲಾ ನಾವ್-ನಾವ್, ನಮ್ಮ-ನಮ್ಮ ಅನುಕೂಲಕ್ ತಕ್ಕಹಂಗ ಮಾಡ್ಕೊಂಡೇವಿ. ಇರೋದು ಎರ್ಡೇ ಜಾತಿ. ಒಂದು ಗಂಡು ಮತ್ತೊಂದು ಹೆಣ್ಣು. ಎಲ್ರೂ ಕುಡಿಯೋ ನೀರೂ ಒಂದಾ, ಬೆಳ್ಕಕೊಡ ಸೂರ್ಯನ ಕೂಡೆ ಒಬ್ಬನಾ. ಅಂದ್ಮ್ಯಾಲೆ ಜಾತಿ ಎಲ್ಲ್ಬಂತಪ್ಪಾ ? ಜಾತ್ಯಾತೀತ ರಾಷ್ಟ್ರ ಅಂತಾರ. ಆದ್ರ ಇಂದ ಯಾವ ಅಪ್ಲಿಕೇಷನ್ ಫಾರಂ ತಗೋ ಅದ್ರಾಗ ಯಾವ ಜಾತಿ ? ಅಂತರ್ಜಾತಿ--ಬಹಿರ್ಜಾತಿ. ಇವನ್ನೆಲ್ಲಾ ತುಂಬಬೇಕಾಗ್ತದ. ಹಿಂದಿರೋವ್ರನ್ನೆಲ್ಲಾ ಮುಂದಕ್ ತರ್ಬೇಕು ಅಂತಾರ. ಆದ್ರ ಅವ್ರು ಹಿಂದೇ ಹಿಂದೇ ಹೋಗ್ತಾರ. ದೊಡ್ಡವ್ರ ಕಾನೂನನ್ನ ಬರೋಬ್ಬರಿ ಮಾಡಿ ಜಾರಿ ಮಾಡ್ತಾರ. ಆದ್ರ ಅದು ನಮ್ಮ ನಿಮ್ಮಂತಾವ್ರ ಮುಟ್ಟ ಮುಟ್ಟೋ ಹೊತ್ತಿಗ ಎಷ್ಟೋ ಮುಲಗೊಂಡಿರ್ತಾವ. ಅದೂ ಅಂಕಿದಾಗ ಅಂಥಾ ಅನ್ಯಾಯ ಸಿಂಕನ್. ಕರಿ-ಬಿಳಿ ವ್ಯತ್ಯಾಸಾನ ಯೋಗ್ಯತಿ ಅಂತಾ ಎಷ್ಟರಾ

ವದ್ದಾಡಿದ್ರು ? ಆದ್ರು ಕಡೀಗ ಆಗಿದ್ದೇನ ? ಅವ ಕೈಲಾಸ ಕಂಡನಾ...? (ಇಷ್ಟರಲ್ಲೇ ಅಲ್ಲೇ ಚೌಕದಲ್ಲಿ ನಿಂತು ಮಾತನಾಡುತ್ತಿದ್ದ ಗೆಳತಿಯರಾದ ದೀಪ್ತಿ-ಶೈಲಿ ವಿಶಾಲಿಯನ್ನು ಕರೆಯುವರು)

ದೀ, ಶೈ. : ಬಾರೇ, ಅವ್ವಾ; ನೀನೇನ್ ಭಾಷಣ ಬಿಗಿಯಾಕ ಹತ್ತಿದ್ರಾ ವ್ಯೆಮ್ಯಾಗ್ ಖಬ್ರೆ ಇರೋದುಲ್ಲ, ಸಾಲೀಗ್ ಹೊತ್ತಾತು.

ವಿಶಾಲಿ : ಬಂದೆ ತಡಿರ್ರೆ... (ಬಸಣ್ಣನನ್ನು ಸಂಬೋಧಿಸಿ) ಬಸಣ್ಣಾ ಬರ್ತೀನ್, ಸವುಡು ಸಿಕ್ಕರ ಮನೀಕಡಿ ಹಾದುಹೋಗು. (ಅವಳ ಗೆಳತೀರ್ ಬಾರೇ...ಎಂದು ಮತ್ತೆ ಕೂಗಬೇಕು, ಆಗ ವಿಶಾಲಿಯು ಅವರ ಸಂಗಡ ಹೋಗುವಳು)

ಬಸವಿ ; (ವಳಗಿನಿಂದ ಬಂದು) ಏನಾ ಅದು, ಭಾಳ ವಿಚಾರ ನಡ್ಸಿದಿ ? ವಿಶಾಲವ್ವ ಏನ್ ಹೇಳಿದ್ರು ? ಏಟ್ ವಿಚಾರ ಅದ್ರ ತಲ್ಯಾಗದ ಅಂತೀನಿ.

ಬಸವ ; ನಾನೂ ಅದೇ ವಿಚಾರನಾ ನಡ್ಸಿದ್ನಿ, ಅದೇನ್ ಬುದ್ಧಿ-ಅದೇನ್ ಇಚಾರ. ಏಟ್ ತಿಳವಳ್ಕಿ ಈಟ್ ವಯುಸ್ಸಿಗೆ ಅಂತನಿ. ತಂದೀ ತಾಯಿ ಪುಣ್ಯ ಮಾಡ್ಯಾರ ಇಂತಾಕೀನ ಮಗ್ಳಾಗಿ ಪಡೀಲಿಕ್ಕ ಆಕಿ ನಂಬಿದ ಮನಿ ಮಲ್ಲೇಶ್ನೆ ಅಕಿ ಮಾನ–ಪ್ರಾಣಾ ಚಂದಾಗಿ ಇಡ್ಲಿ (ಎನ್ನುತ್ತಾ ಮಂತ್ರ ಮುಗ್ಧನಂತೆ ಬಡ ಬಡಿಸುತ್ತಿರುವಾಗ)

ಬಸವಿ : ಏನಾ ಅದು, ಆಗ್ಲೇ ಪೋಣಿ ಹನ್ನೊಂದು ಬಡ್ಕೊಂಡಾವ. ಉಂಡು ಹೊಂಡದ ಕಡಿ ಹೋಗೋ ವಿಚಾರ ತಲೆಗೇನಾರ ಅದನಾ, ಏನಿಲ್ಲಾ ? ಮಡಿ ಬಟ್ಟಿ ಮನೀ–ಮನೀಗ್ ಅಲ್ಬು ಕೊಟ್ಟರೂದ್ರಾಗ ಹೊಟ್ಟಿ ಅನ್ನೋದು ಒಣಗಿದ ಜೇನ್ನುಟ್ಟಾಗೇದ ನಂದು, ನಂಗಂತೂ ಹಸ್ವಿ ತಡೀಲೀಕ್ ಆಗ್ವಲ್ದು, ನೀ ಬರ್ತಿಯೋ ಏನಿಲ್ಲೋ ?

ಬಸವ : ಅಲ್ಲಾ ಬಸ್ವಿ, ಇಂದ್ ನಂಗ್ ಭಾಳ ಸಂತೋಷಾಗೇದ. ಅದಕ ಏನ್ ಪೆಶಲ್ ಮಾಡ್ತಿ ಹೇಳ್ ಇಂದ ?

ಬಸವಿ ; ಅಯ್ ಮತ್ ಮಾಡೋದೇನ್ ಬಂತ ? ನಿನ ಪಿರೀತಿ ಏಣ ಗಾಯಿ-ರೊಟ್ಟಿ ಮಾಡಿಟ್ಟೀ ಹೋಗಿದ್ನಾ...

ಬಸವ ; ಆ್ಹ...ಹಿಂಗಾ ? ಹಂಗಾರ ನಡೀ ಉಣ್ಣೋಣು

ಬಸವಿ ; ನೋಡ್. ಇಂದೇ ಏಟ್ ತಿನ್ನೂದದಾ ನೀ ತಿಂದ್ಬಡು. ಯಾಕಂದ್ರ ದಿನದಿಂದ ದಿನಕ್ಕ ಧಾರಣಿ ಅನ್ನೋವು ಮುಗಿಲು ಮುಟ್ಲಿಕ್ ಹತ್ಯಾವ. ನನ್ನ-ನಿನ್ನಂಥ ಸಣ್ಣ ಸಂಪಾದ್ನೇರ್ ಜಾಸ್ತಿ ಮಕ್ಳನ ಕೂಡ ಹಡ್ಕೊಣ ಹಾಂಗಿಲ್ಲ

ಬಸವ ; ಹೌದ್....ಹೌದ್...ಮನ್ನೆ ಊರ್ಗುಡಿ ತಾವ ಒಬ್ಬ ಹುಚ್ಚ ಬಂದಿದ್ದ. ಅವಾ ಈ ಕುಟುಂಬ ಯೋಜ್ನಿ ವಿಚಾರಕ್ಕ ಹಿಂದ್ ಹಾಡ್ತಿದ್ದನಂತ. ಅವ್ಗ ಮಕ್ಳು-ಮರಿ-ಹೆಂಡ್ತಿ ಎಲ್ಲಾರೂ ಸತ್ತೋದ್ರಂತಾ,

ಬಸವಿ : ಅಯ್, ನನ್ ಶಿವನಾ !

ಬಸವ : ಅದೇ ಹುಚ್ಚಿಡ್ದು ಹಾಡು ಹೇಳ್ಕೋತ ಊರೂರು ಅಲಿಯಾಕ ಹತ್ಯಾನ ಅವ ಹೇಳ್ತಿದ್ದ ಈ ಹಾಡ್ನ, ಕೇಳಿದ್ಮ್ಯಾಲೆ ನಾನು ಅಷ್ಟಿಷ್ಟು ಕಲ್ತಗೊಂಡೀನಿ.

ಬಸವಿ : ಹೇಳಾ ಹಂಗಾರೆ

ಬಸವ : ಈಗ್ಲೀ ಹೇಳ್ಬೇಕಾ...

ಬಸವಿ : ಹೌದು. ಈಗ್ಲೀ ಹೇಳದ್ರ ಇನ್ನೊಂದ ಆದ್ಯಾಲ.

ಬಸವ : ಯಾವ್ದದ ಅದ ?

ಬಸವಿ : ಥೂ, ನಿನ್ನ; ನಾಚ್ಗಿ ಹ್ಯಾಂವ ಸುತರಾಂ ಇಲ್ಲೇಸ ನಿನಗ ? ಹೂಂ...ಹೇಳ್, ಹೇಳ್

ಬಸವ : ಹೇಳ್ತೀನಿ ಕೇಳ (ಪ್ರಾರಂಭಿಸುವನು) ಸನ್ನಿವೇಶಕ್ಕೆ ತಕ್ಕಂತೆ ಒಂದು ಹಾಡನ್ನು ಇಲ್ಲಿ ಹಾಡಬಹುದು) ಹಾಡು ಮುಗಿಯುತ್ತಿದ್ದಂತೆ ಬಸ್ವಿಯೊಡನೆ ಒಳಗೆ ಹೋಗಬೇಕು.)

(ತೆರೆ ಬೀಳುವುದು)

ಪ್ರವೇಶ ೭

(ರಂಗಪ್ಪಜ್ಜನ ಮನೆ. ಬಸ್ವಿಯು ಬಟ್ಟೆ ಗಂಟಿನೊಂದಿಗೆ ಬಟ್ಟೆ ಒಯ್ಯಲು ಬರಬೇಕು. ನಿಂಗವ್ವನು ಒಳಗಿನಿಂದ ಬಟ್ಟೆ ತೆಗೆದುಕೊಂಡು ಬಂದು ಬಸ್ವಿಯು ಕೈಗೆ ಇಡುತ್ತಿದ್ದಂತೆ)

ಬಸವಿ : ಅವ್ವಾರೇ...ಎಲ್ಲಾ ಕೆಟ್ಹೋತ್ರಿ

ನಿಂಗವ್ವ : ಯೇನ್ ಕೆಟ್ಹೋತೆ ?

ಬಸವಿ : ಆಕಾಶನ ತಲಿಮ್ಯಾಗ ಬಿದ್ರೂ ಗೊತ್ತಿಲ್ಧಂಗ ಕುಂತೀರಲ್ರಿ.

ನಿಂಗವ್ವ : ಏನ್ ಅದು, ಇದ್ದದ್ದು ಇದ್ದಂಗರ ಹೇಳ್ ನಮ್ಮವ್ವೆ !

ಬಸವಿ : ಅವ್ವವ್ರಾ, ವಿಶಾಲಿ...

ನಿಂಗವ್ವ : (ಗಾಭರಿಯಿಂದ) ಯೋನಾತೇ ನನ್ಮಗ್ಳಿಗೇ.

ಬಸವಿ : ಅದೇ ಕಣವ್ವಾ, ಇಂದ ಶಾಲ್ಯಾಗ ನಿಮ್ಮ ವಿಶಾಲಿಗೆ ಆ ಮಾಸ್ತರಾ...

ನಿಂಗವ್ವ : ಏನ ಹೊಡದ್ರಾ-ಬಡದ್ರ ಏನ ? ಏನಾತ ಅನ್ನೂದಾ ಸರಿಯಾಗಿ ಬಗ್ಳೀ ತಾಬಡ್-ತೋಬ್ಡು

ಬಸವಿ : ಅದೇನವ್ವಾ ..ಅದೇನವ್ವಾ (ಹೆದರಿಕೆಯಿಂದ) ಆ ಮಾಸ್ತರ (ಬಹಳ ಮೆದುಧ್ವನಿಯಲ್ಲಿ ಮುತ್ತು ಕೊಟ್ಟನಂತವ್ವಾ. ಏನ್ನಬೇಕು)

ನಿಂಗವ್ವ : (ಭಯ ಮತ್ತು ಆಶ್ಚರ್ಯದ ಮುಖ ಮಾಡಿಕೊಂಡು) ಏನಂದೀ ? ವ್ಯೆಯಾಗ್ ಅರಾಮ್ ಅದನೋ ಇಲ್ಲೋ ? ಏನಸ್ಲಿಕ್ ಹತ್ತಿದಿ ? ಇನ್ನೊಂದು ಪಟಿ ಹೇಳ.ಯಾರ ಯಾರಿಗೆ ಏನ್ ಆತು ಅನ್ನೂದಾ...

ಬಸವಿ : ನಾ ಒಲ್ಲೆವ್ವಾ...ನನ್ನ ಸೀಳೀಬುಟ್ಟೀರಿ ಉದ್ದಕ. ನಂದ ತಪ್ಪಾಗಿದ್ರೆ ಸಮ್ಸಿಬುಡ್ರೆವ್ವಾ ! (ಎಂದು ಕೈಮುಗಿಯುತ್ತಾ ಹೊರಕ್ಕೆ ಸರಿಯುತ್ತಿದ್ದಂತೆ. ಅವಳ ಕೈಯನ್ನು ನಿಂಗವ್ವನು ಹಿಡಿದೆಳೆದು)

ನಿಂಗವ್ವ : ನಿಂಗೆ ಏನೂ ಮಾಡೂದಿಲ್ಲ. ಇರೋ ಹಕೀಕತ್ತ ಬರೋಬ್ಬರಿ ವದ್ರು ಯಾರ ? ಯಾರಿಗೆ ? ಯಾವಾಗ ? ಎಲ್ಲಿ ? ಯಾರ ಹೇಳಿದ್ದ ಅನ್ನೋದನ್ನ. ಇಲ್ಲಾಂದ್ರ ನೀ ಅಂದ್ಹಂಗ ನಿನ್ನ ಸೀಳೀ ಬುಟ್ಟೀ ನ್ನಾ.

ಬಸವಿ : ನೀವ್. ಈಟ್ ಧೈರ್ಯ ಕೊಡ್ಲಿಕ್ ಹತ್ತೀರಿ ಅಂದ್ಮ್ಯಾಲೇ ಸಾಫ್ ಸೀದಾ ಹೇಳ್ತಿನ್ರುವ್ವಾ. ಮಗೀಗೆ ಮಾತ್ರ ಏನೂ ಅನ್ನಬ್ಯಾಡ್ರುವ್ವಾ !

ನಿಂಗವ್ವ : ಏನ ಅದ ಬೊಗ್ಳೀ...ಸತ್ಯಾನ ಮುಚ್ಚಬ್ಯಾಡ

ಬಸವಿ : ನೋಡ್ರುವ್ವಾ ಇಂದ ಕಟ್ಟೀಮನಿ ತುಳಸಕ್ಕನ ಮನೀಗೆ ಬಟ್ಟೀ ತರ್ಲಿಕಂತ ಹೋಗಿದ್ನವ್ವಾ, ಆ ಮಾತ, ಈ ಮಾತ ಆಡ್ತಾ ಪಕ್ಕದ್ಮನಿ ಪದ್ದಕ್ಕನ ಕೂಡೆ ಮಾತಾಡ್ತಿದ್ರುವ್ವಾ, ಅದ ನನ್ನ ಕಿವಿ ಮ್ಯಾಲ ಬಿತ್ತವ್ವಾ.

ನಿಂಗವ್ವ : ಯೇನಂತಾ ಮಾತಾಡ್ತಾ ಇದ್ರೆ.

ಬಸವಿ : ಇಂದ ಸಾಲ್ಯಾಗ ಅವರ ಅಂಗ್ರೇಜಿ ಮಾಸ್ತರ ನಮ್ಮ ವಿಶಾಲವ್ವಗ (ಗುಟ್ಟಾಗಿ) ಒಂದು ಮುತ್ತ ಕೊಟ್ರಂತವ್ವಾ. ಶೈಲಿ–ದೀಪ್ತಿ ಅವಳ ಗೆಳತೀರು ಸಹಾ ಅಲ್ಲೇ ಇದ್ರಂತವ್ವಾ ! ಹ್ವಾ... (ಎಂದು ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವಳು)

ನಿಂಗವ್ವ : ಅಯ್ಯಯ್ಯೋ ಏನ್ ಪರಿಸ್ಥಿತಿ ಬಂತವ್ವಾ ! ಅವನಿಗೇನ ಬಂದಿತ್ತೆ ಸುಡಗಾಡಕ್ಕ ಹೋಗ ಅಂತಾದ್ದು. ಅವಂಗಾ ಹೆಂಡ್ರು ಮಕ್ಳು ಇಲ್ಲೇನೆ ? ಅವನ ಮಗ್ಳ ಸಮಾನ ಅದಲ್ಲೇ ನಮ್ಮ ವಿಶಾಲಿ ! (ಅಷ್ಟರಲ್ಲಿ ರಂಗಪ್ಪನ ಪ್ರವೇಶ)

ರಂಗಪ್ಪ : ಏನೇ ಅದು, ಯಾರಿಗೆ ಹಿಡಿ ಶಾಪ ಹಾಕ್ಲಿಕ್ ಹತ್ತೀಯುಲೇ ?

ನಿಂಗವ್ವ : ನನ್ನೇನ ಕೇಳ್ತೀರಿ ? ಅಲ್ಲಿ ನಿಂತಾಳ ಬಸ್ವಿ ಕೇಳ್ರಿ ಗೊತ್ತಾಗ್ತದ ನಾ ಮೊದ್ಲೇ ಬಡಕೊಂಡೆ ಬ್ಯಾಡ್ರಿ ಮಗಳು ಪ್ರಾಯಕ್ಕ ಬರ್ಲಿಕ್ ಹತ್ಯಾಳ ಈ ವಯಸ್ನಾಗ ಓದು ಯಾಕ ? ನಮ್ಮಂತ ಹಳ್ಳೀ ಮುಕ್ಕಗಳ್ನಾ ಈ ಶಹರಿನ ಮಂದಿ ಮಾಯಾ ಮಾಡಿ ಬಲೀಗ್ ಹಾಕ್ಕೊಂತಾರ ಅಂತ ಅಂದ್ರು ಕೇಳಿದ್ರಾ ? ಅವಂತು ಗಂಡ್ಸಾ ಅದಾನ. ಈ ರಂಡೀಗಾರ ಯೋಚ್ನಿ ಬೇಕೋ ಬ್ಯಾಡೋ, ಭಂಡ ಮುಂಡೆ ತಂದು, ಬಡಕೊಂಡೆ ಹಿಂಗ್ ಬಿದ್ದು ಹಂಗಾಗಿ

ಬಡ್ಕೊಂಡೆ. ನಮ್ಮ ಹೊಟ್ಟಿ ಉರಿಸ್ಲಿಕ್ ಹುಟ್ಯಾಳ. ಮುಖಾ ಮಾರಿ ಎತ್ಕೊಂಡ್ ಊರಾಗ ತಿರಗ್ದಹಂಗ ಮಾಡ್ಬಿಟ್ಲರ್ರಿ ಈ ಮಿಣಕಲಾಡಿ. ಹಿಂಗ ಆಗ್ತದ ಅಂದ್ರ ಅಂದಾ ನಾ ಬಷ್ಗಿ ಕೊಡ್ತಿದ್ದೆರ್ರಿ. ಜ್ವರದಾಗ ಸತ್ತಿದ್ರೆ ಏಷ್ಟೋ ಛಂದ್ ಇತ್ತು.

ರಂಗಪ್ಪ : ಕೊನೆಗೂ ಹಕೀಕತ್ ತಿಳ್ಸದೇ ನಿಂದೇ ನೀ ಮಾತಾಡಿ ನನ್ಗೆ ದಿಕ್ಕೇ ತೋಚವಲ್ದಲ್ಲಲೇ (ಎಂದು ಬಸ್ಸಿಯ ಕಡೆ ತಿರುಗಿ) ಏನೇ ಬಸ್ಸಿ ಇಚಾರ ನೀನಾರ ಹೇಳಬೇ.

ಬಸವಿ : ನಂಗೊತ್ತಿಲ್ರಿ ಮತ್ತSS...ಮತ್ತಾSS...(ನಡುಗುತ್ತಾ)ಊರಾಗ ಜನ ಹಂಗ ಮಾತಾಡ್ತಿದ್ರು, ನಮ್ಮ ವಿಶಾಲವ್ವಗ...ಸಾಲ್ಯಾಗ... ಅದ್ಯಾವನೋ ಮಾಸ್ತರಂತ. ಅವ ಅವಾ ಕೊಟ್ನಂತ(ಅನ್ನುತ್ತಾ ಓಡಿಹೋಗುವಳು)

ರಂಗಪ್ಪ : ಅ್ಹ...ಏನಂದಿ ? ಬಸ್ಸಿ... ಇನ್ನೊಂದ ಪಟಿ ಬರೋಬರಿ ಅನ್ನು (ಎಂದು ಬಸ್ಸಿಯ ಕಡೆ ತಿರುಗಿ ಬಸ್ಸಿ ಇಲ್ಲದ್ದನ್ನು ನೋಡಿ.) ಹೋ ಎಷ್ಟೆಂದರೂ ಹೆಣ್ಣಲ್ಲ ? ಹ್ಯಾಂಗ ಬಾಯ್ಬಿಟ್ಟು ಹೇಳ್ಯಾಳು. ನಂಗೂ ಬುದ್ಧಿಲ್ಲ ನಿಂಗೀ...ಇಲ್ಲೋಡ...ಬಸ್ಸಿ ಮಾತ ನಿಜಾ ಏನ್ಲೇ ?

ನಿಂಗವ್ವ : ಕರ್ಮ ಕೇಳ್ರಿ ! ಆಕೀಗೇನ್ ನಮ್ಮ ಮಗಳ ಮೇಲ ಶ್ರೀ ಕಿಟ್ಯಾ ? ಹಿಂಗ್ ಕೆಟ್ ಅಪಾದ ಹೊರಸ್ಲಿಕ್ ? ಊರಾಗ ಗುಲ್ಲಾಗೇದ. ಆ ರಂಡಿ ತಂದ್. ಸ್ವಲ್ಪಾರೂ ಕಾಳಜೀ ಅದನಾ ನೋಡ್ರಿ ! ಸಾಲಿ ಬಿಟ್ ಆಗ್ಲೆ ಆಗ್ಲೆ ದೀಡ್ ತಾಸ್ ಕಳ್ದದಾ. ಇನ್ನೂ ಮನೀಗ ಬಂದಿಲ್ಲ. ದಿನಾ ಹಿಂಗಾ ಕೇಳದ್ರೆ, ಏಗ್ಯಾರ ಸುಮ ಅದ ಅವಕಾ ಸ್ಪೇಸಲ್ ಕಲಾಸ್ ಅದ

ಹಂಗಾ...ಹಿಂಗಾ...ಅಂತಾ ನೂರೆಂಟ್ ಬೊಗಳ್ತಾಳ, ಲೇಟಾಗಿ ಬರ್ತಾಳ ಇಂದ ಅರ್ಥಾತ್ರ ಈಕಿ ಪೇಷಲ್ ಕಲಾಸ್ ಏನಾ ಅಂತ? ಯಾವನ್ರಿ ಆ ರಂಡೀ ಮಗ ?

ರಂಗಪ್ಪ : ನಿಂಗೀ...ಸಾಕು ಸ್ವಲ್ಪ ಸುಮ್ನಾಗ...ನಮ್ಮ ಮಗ ಅಂತಾದ್ದಲ್ಲ ಇದ್ರಾಗ ಏನೋ ಹಿಕ್ಮತ್ ಅದ. ಯಾರೋ ಆಗದ ಇದ್ದವ್ರು ಈ ಸುಳ್ಳ ಸುದ್ದಿ ಹುಟ್ಸ್ಯಾರ ಅಂತ ಅನಸ್ತದ ನನಗ. ಮಗ ಹೆಂಗಿದ್ರು ಪೆಸಲ್ ಕಲಾಸ್ ಇದ್ರು ಸಾಲ್ಯಾಗ ಇದ್ದೇ ಇರ್ತದ ಈಗ್ಲೇ ಗೌಡ್ರು ಕರ್ಕೊಂಡ ಹೋಗಿ ಇಚಾರ ಮಾಡಿ. ಇಚಾರ ಖರೇ ಇದ್ರು ಅವ್ನ ಈ ಮಚ್ಚಿನ್ಗೆ ಸೀಳೇ ಬರ್ತೀನಿ. (ಎನ್ನುತ್ತಾ ಮಚ್ಚು ಹುಡುಕಾಡುವನು, ಅಷ್ಟರಲ್ಲಿ ಅಲ್ಲಿಗೆ ಬಸವ ಬರ.ವನು)

ಬಸವ : ರಂಗಪ್ಪಣ್ಣಾ, ವಿಷ್ಯ ಕೇಳ್ದೆ. ದುಡುಕ್ಬ್ಯಾಡಣ್ಣಾ ನಮ್ಮ ವಿಶಾಲವ್ವನ ಗುಣ ಚಿನ್ನದಂತ್ಹಾದ್ದು. ಅಕ್ಕಾ ನಿಂಗಕ್ಕಾ, ನೀನೂ ದುಡುಕ್ಬ್ಯಾಡವ್ವಾ, ಸ್ವಲ್ಪ ತಡಕೋ. ಈ ಬಸ್ವಿಗೊಂದು ಬುದ್ದಿಲ್ಲ, ಸುದ್ದಾ ಪೆದ್ ಬ್ಯಾರೇ. ಇಚಾರ ಸರೀ ತಿಳೀವಲ್ದಂಗ್ ಇನ್ನೊಬ್ರು ಹತ್ತಿಕೆ ಏಳ್ಬ್ಯಾದ್ರ್ಗ, ನೀವೇನೂ ಏಕ್ಸಿ ಹಚ್ಕೋ ಬ್ಯಾಡ್ರುವ್ವಾ. ಗೌಡ್ರಿಗೂ ಹೇಳಿ ಅಣ್ಣನ ಹತ್ರ ಬಂದೇನ, ಕರ್ಕೊಂಬರಾಕ ಹೇಳ್ಯಾರ. ಬಾ ರಂಗಣ್ಣಾ ಗೌಡ್ರು ನಿಂಗೇ ಕಾಯ್ಲಿಕ್ ಹತ್ಯಾರ. ಸಾಲಿಗ್ಹೋಗೋಣು (ಎಂದು ಕೈಹಿಡಿದು ಜಗ್ಗಿ ಎಳೆದುಕೊಂಡು ಹೋಗಬೇಕು)

(ತೆರೆ ಬೀಳುವುದು)

ಪ್ರವೇಶ ೮

(ಶಾಲೆ ನಡೆಯುತ್ತಿರುವಂತೆ ರಂಗಮಂಟಪದ ಹಿಂದೆ ವಿದ್ಯಾರ್ಥಿಗಳ ಗುಜು ಗುಜು. ಮಾಸ್ತರರ ಪ್ರಶ್ನೆ ಯಾವುದಾದರೊಬ್ಬ ವಿದ್ಯಾರ್ಥಿ ಉತ್ತರ. ಸೈಲೆನ್ಸ್ ಎನ್ನುವ ಉಪಾಧ್ಯಾಯರ ವಾಣಿಯನ್ನೂ ಸನ್ನಿವೇಶಕ್ಕೆ ತಕ್ಕಂತೆ ಪ್ರೇಕ್ಷಕರಿಗೆ ಅರ್ಥವಾಗು ವಂತೆ ಸೃಷ್ಟಿಸಬೇಕು. ರಂಗದ ಮೇಲೆ ಶಾಲಾ ಆಫೀಸು ಕೋಣೆಯನ್ನು ವ್ಯವಸ್ಥೆ ಮಾಡಿರ ಬೇಕು. ಮುಖ್ಯೋಪಾಧ್ಯಾಯರು ಕುರ್ಚಿಯಲ್ಲಿ ಕುಳಿತು ಫೈಲನ್ನು ನೋಡುತ್ತಿರಬೇಕು. ಅಲ್ಲಿಗೆ ಗೌಡ್ರು—ರಂಗಪ್ಪ—ಬಸವ ಬರುವರು)

ಗೌಡ್ರು : ಶರಣ್ರೀ...ಮಾಸ್ತರ

ಮಾ. : ಓ... ಹೋ... ಹೋ... ನಮಸ್ಕಾರ ಬನ್ನಿ ಗೌಡ್ರೆ, ಬನ್ನಿ (ಎದುರಿಗಿದ್ದ ಕುರ್ಚಿಯ ಕಡೆ ಕೈತೋರಿಸುತ್ತಾ) ಕೂತ್ಕೊಳ್ಳಿ ಇದೇನ್ ಬಹಳ ಅಪರೂಪಕ್ಕೆ ನಮ್ಮ ಶಾಲೆಗೆ, ಅದೂ ಇದ್ದ ಕ್ಕಿದ್ದಂತೆ (ರಂಗಪ್ಪ, ಬಸವನ ಕಡೆ ಕೈ ತೋರಿಸಿ) ಅಂದ ಹಾಗೆ ಗೌಡರೇ ಇವರು ಯಾರೋ ಗೊತ್ತಾಗ್ಲಿಲ್ಲ. ಬನ್ನಿ ಬನ್ನಿ ಕುತ್ಕೊಳ್ರಪ್ಪಾ (ಎಂದು ಅವರಿಗೆ ಕುರ್ಚಿ ತೋರಿಸುವರು ಅದಕ್ಕೆ ರಂಗಪ್ಪ, ಬಸವ ಇಬ್ಬರೂ ಸ್ವಲ್ಪ ಅಸಮಾಧಾನದ ಮುಖ ದಿಂದಲೇ ಉತ್ತರಿಸುವರು)

ರಂಗಪ್ಪ : ಇರ್ಲಿ ಬಿಡ್ರಿ ಮಾಸ್ತ್ರ, ನಾವ್ ಬಂದ್ ಕೆಲ್ಸ ಪಹಲಾ ಇತ್ಯರ್ಥ ಆಗ್ಬೇಕು.

ಗೌಡ್ರು : ಅಂದ್ಹಾಗೆ ಮಾಸ್ತರೇ, ಮುಖ್ಯ ವಿಷಯಕ್ ಬರೋಣ. ನಿಮ್ಮ ಸಾಲಿ ಮ್ಯಾಗ್ ನಮಗ ಎಷ್ಟ್ ವಿಶ್ವಾಸ ಅದ ಅನ್ನೋ ವಿಷ್ಯ ನಿಮಗ ತಿಳಿದದ್ದೆ ಅಲ್ಲೇನ್ರಪಾ. ಅಲ್ದ ಈ ಹಾಯಸ್ಕೂಲ ನಮ್ಮೂರಿಗಾ ತರಾಕ ಅದೆಷ್ಟ್ಯಾರ ಪರಿಪಾಟು ನಡ್ಸೀದೀವಿ ಅನ್ನೋ ವಿಚಾರ ಸಹ ನಮ್ಮ ಎಮ್ಮೆಲ್ಲೆ ಬಣಸೊಂಟಿಯವ್ರಿಗ್ಗೊತ್ತ–

ನಂಗೊತ್ತ ನಾವಿಬ್ರೂ ನಂಬಿದ ಊರ್ದೇವಿ ಕಾಳವ್ವಂಗೊತ್ತ, ಅಂದವ್ಯಾಲ ಮತ್ತೊಂದ್ಸಟ ಅದ್ನಾ ಅನ್ನೋ ವಿಷ್ಯ ಬ್ಯಾಡ್ರಿ. ಈಗ ಏನಾಗಿದಪಾ ಅಂದ್ರ ನಿಮ್ಮ ಸಾಲೀಗ ಕೆಟ್ಟ ಅಪಾದ ಬರೋ ಅಂತ ಒಂದು ಹಕೀಕತ್ ನಡೆದದ. ಅದ ಏನಪಾ ಅಂದ್ರ ಅದ್ಯಾರೋ ಇಂಗ್ರೇಜಿ ಕಲ್ಸೋ ಮಾಸ್ತರ ಬಂದಾರಂತಲ್ರಪಾ ಯಾರವ ? ಅವನ ಕ್ಯಾರೇಕಟ್ರ್ ಅಷ್ಟು ಬರೋಬರಿ ಇದ್ದಂಗ ಕಾಣ್ಸಲಿಕ್‌ವಲ್ದು, ಅವ ಇಷ್ಟ ಘಟಿಂಗ್ ಅದಾನ ಅಂದ್ರ 10 ಮಿನಿಟ್ನಾಗ ಕಿತ್‌ವಗಸ್ತಿ ನ್ನಾ ನಮ್ಮೊಣಸಂಟೀರಗ್ ತಿಳ್ಸಿ, ತಿಳೀತಲ್ರಾ ?

ಮಾ. : ಗೌಡ್ರೇ ಯಾಕೆ ಒಗಟಿನಲ್ಲಿ ಮಾತಾಡ್ತಾ ಇದೀರಿ ಅಂತ ನನಗೆ ಅರ್ಥವಾಗ್ಲಿಲ್ಲ, ವಿಷಯ ತಿಳೀದೆ ನಾನಾದ್ರೂ ಏನ್ ಹೇಳಬಲ್ಲೆ ಹೇಳಿ ? ಆದ್ರೂ ಇಷ್ಟ ಹೇಳಬಲ್ಲೆ, ನಮ್ಮ ಇಂಗ್ಲೀಷ್ ಅಧ್ಯಾಪಕ ರಾಜಾರಾಂ ಇದ್ದಾರಲ್ಲ ತುಂಬಾ ಯೋಗ್ಯ ಮನುಷ್ಯ, ಅವರಾಯ್ತು ಅವರ ಓದಾಯ್ತು, ವಿನಹಕಾರಣ ಕಾಲಕಳೆಯುವವನಲ್ಲ, ಬಹು ಸರಳಜೀವಿ, ಮಕ್ಕಳಲ್ಲಿ ಮಕ್ಕಳಾಗಿ ಬೆರೆತು ಪಾಠ ಮಾಡ್ತಾರೆ. ಹೀಗಾಗಿ ಪ್ರತಿಯೊಂದು ತರಗತೀಲೂ ವಿದ್ಯಾರ್ಥಿಗಳು ಇಂಗ್ಲೀಷ್ ಸಬ್ಜೆಕ್ಟಿಗೆ ಅವರನ್ನೇ ಕೊಡಿ ಎಂದು ಕೇಳ್ತಿದಾರೆ, ಇಂಥಾದ್ರಲ್ಲಿ ಅವ್ರ ಬಗ್ಗೆ ರಿಮಾರ್ಕ್ ಕೇಳ್ತಿರೋದು ಅಂದ್ರೆ ಇವತ್ತೇ ಫಸ್ಟ್ ನಮ್ಮ ಶಾಲೇಲಿ.

[illegible] ಾ, ಅಂಥಾವ್ರ ಹತ್ರಾನೇ ಯಾರಿಗೂ [illegible] ಣ ಇರ್ತಾವ. ಗೋಮುಖವ್ಯಾಘ್ರ [illegible] ್ರಯದ ಹೆಣ್ಮಕ್ಳನ್ನ ಸಾಲೀಗ್ ಕಳ್ಸೋದೆ [illegible] ಕ ಎಷ್ಟ ಮುಂದವರ್ದದ, ನಮ್ಮ

ಮು. : (ರಾಜಾರಾಂನನ್ನು ನೋಡುತ್ತಾ) ನೋಡ್ರಿ ಮಿ। ರಾಜಾರಾಂ. ನಿಮ್ಮ ಮೇಲೆ ನಮ್ಮ ಗೌಡ್ರು ಒಂದು ಕಂಪ್ಲೇಂಟ್ ತಂದಿದಾರೆ. ನೀವು ನಿಮ್ಮ ಕ್ಯಾರೆಕ್ಟರ್ ಸಡಿಲಗೊಳಿಸಿದ್ದೀರೆಂದೂ, ಮೊನ್ನೆ ಕ್ಲಾಸಿನಲ್ಲಿ ವಿದ್ಯಾರ್ಥಿಗಳೆದುರಿಗೇ ಈ ರಂಗಪ್ಪನ ಮಗಳಿಗೆ (ರಂಗಪ್ಪನಕಡೆ ಕೈ ತೋರಿಸುತ್ತಾ) ನಿಮ್ಮ ಲವ್ ಅಫೇರ್ಸ್ (Love Affairs) ಪ್ರಯೋಗಾನ ನಡೆಸಿದ್ರಿ ಅಂತಾ ಹೇಳ್ತಾ ಇದಾರೆ.

ಮು. : ನಿಮ್ಮಲ್ಲಿ ವಿಶಾಲಾಕ್ಷಿ ಯಾರಮ್ಮ ?

ವಿಶಾಲಿ : ನಾನೇ ಸಾರ್ (ಎಂದು ವಿಶಾಲಿ ಮುಂದೆ ಬರುವಳು)

ಮು. : ಏನಮ್ಮಾ ನಿಜ ಹೇಳು. ನಿಮ್ಮ ತಂದೆ–ಗೌಡ್ರು–ಬಸಣ್ಣ ಇವರೆಲ್ಲಾ ನಿಮ್ಮ ಉಪಾಧ್ಯಾಯ್ರು ರಾಜಾರಾಂ ಬಗ್ಗೆ ಅಪವಾದ ಹೊರ್ಸಿದ್ದಾರೆ. ಇದು ನಿಜಾ ಆಗಿದ್ರೆ ನಿಜಾ ಅಂತ ಹೇಳ್ಬಿಡಮ್ಮ

ವಿಶಾಲಿ ; ನನಗೊತ್ತಿರೋ ಹಾಗೆ ಅಂಥಾದ್ದೇನೂ ನಡದೇ ಇಲ್ಲ ಸರ, ಯಾವ ವಿಷಯ ಸರ ಅದು ?

ಮು. ; ಅದ್ಯಾಕ್ಕಿಗ್ ಹೇಳಲಮ್ಮ ನಿನ್ಹತ್ರ ! ಹೇಳ್ಳಿಕ್ಕೇ ನನಗೆ ನಾಚಿಕೆ ಆಗ್ತಾ ಇದೆ. ಇಂಗ್ಲೀಷ್‌ನಾಗೆ ಹೇಳೋದಾದ್ರೆ (ಒಂದು ಚೀಟಿಯನ್ನು ಬರೆದು ಅವಳ ಕೈಗೆ ಕೊಡುತ್ತಾ) ಇದನ್ನ ನಿನಗೆ ಕೊಟ್ರಂತೆ ! ಹೌದೇ ?

ವಿಶಾಲಿ : ಸರ... ನೀವು ತಿಳಿದ ಶಬ್ದ ಅಲ್ಲಾ ಸರ. ಅದು ಪರ್ಲ್ ಅಂಬೋ (Pearl) ಶಬ್ದ ಅದ.

ಮು. : ಏನಮ್ಮಾ ?...ಏನಂದಿ ? ವಿಷ್ಯ ಕ್ಲಿಯರ್ ಮಾಡಮ್ಮಾ

ದೀಪ್ತಿ : ನಾ ಹೇಳ್ತೀನ್ ಸರ, ವಿಷ್ಯ ಇಷ್ಟೆ. ಕಡ್ಡೀ ಹೋಗಿ ಗುಡ್ಡಾಗೇದ. ಅದು ಹಂಗಲ್ರಿ ಸರ, "ಅಂದ ನಮ್ಮ ಇಂಗ್ಲೀಷ್ ಟೆಕ್ಸ್ಟ್ ದಾಗ (Sea) "ಸೀ" ಅನ್ನೋ ಪಾಠ ನಡೀತಿತ್ರೀ, ಮಾಸ್ತರು ಸಮುದ್ರದ ವೈಪರೀತ್ಯ, ಹವಾಗುಣ ಇತ್ಯಾದಿ ವರ್ಣನಾ ಪಾಠ ಮಾಡ್ತಾ-ಮಾಡ್ತಾ ಸಮುಂದ್ರದಾಗ ಬೆಲಿ ಬಾಳೋ ಮುತ್ತು ಸಿಗ್ತಾವ ಅಂತ ಪಾಠ ಮಾಡ್ತಿದ್ರು ಆಗ ನಮ್ಮ ವಿಶಾಲಿ ಇದ್ದಾಕಿ ಛಲೋ ಮುತ್ತು ಅಂದ್ರ ಹ್ಯಾಂಗ ಇರ್ತದ, ಹವಳ ಅಂದ್ರ ಹ್ಯಾಂಗ ಇರ್ತದಾ ಅಂದ್ಲರಿ. ಅದಾದ ಮೂರನೆ ದಿನಾರೀ ಅದೇ ಸಬ್ಜೆಕ್ಟದ ಕಂಟೀನಿಯೇಷನ್ ಪಾಠ ಆಗೋದಿತ್ರಾ, ಮಾಸ್ತರಿಗೆ ಅದೆಲ್ಲೋ ನೆಪ್ಪಾಗಿ ಅವರ ತಾಯಿ ಕೊಳ್ಳಾಗಿನ ಸರದಾಗ ಒಂದು ಮುತ್ತು ತಂದಿದ್ರುಂತ್ರೀ, ಅದನ್ನಾ ಪಾಠ ಮಾಡ್ಲಿಕ್ ಮುಂಚೆ ಹಿಂದಿನ ದಿನ ವಿಶಾಲಿ ಕೇಳಿದ್ಲಲ್ಲ ಆಕಿಗೆ ತೋರ್ಸಿದ್ರು ಅದನ್ನ ನಾವೂ ನೋಡಿದ್ವಿ. ಭಾಳ ಛಂದಿತ್ತು ಅಂಥಾ ಮುತ್ತು ನಾವು ನೋಡೇ ಇರ್ಲಿಲ್ರಿ! ವಿಶಾಲಿ ಕೇಳಿದ್ದಕ್ಕ ಬೇಕಾದ್ರೆ ನೀನೇ ಇಟ್ಕೋ ಅಂತಾ ವಿಶಾಲಿಗೆ ಕೊಟ್ರು. ಇಷ್ಟಾರೀ ಅಂದ್ ನಡೆದದ್ದು.

ಮು. ; ಈ ವಿಷಯಾನ ನೀವು ನಿಮ್ಮ ಪೈಕಿ ಯಾರಿಗಾದ್ರೂ ಹೇಳಿದ್ರ್ಯಾ?

ಶೈಲಿ : ಹೌದ್ರಿ ಸರೂ, ನಾನು ನಮ್ಮವ್ವನ ಕೂಡೆ ಮಾತಿಗ್ ಮಾತ್ ಬಂದ ಎಲ್ಲಿಗೋ ತುರ್ತು ಹೊಂಟ್ ನಿಂತಿದ್ನ, ಹೊಂಡೂವಾಗ ನೆಪ್ಪಾಗಿ. ಅವ್ವಾ ಇಂದ ವಿಶಾಲೀಗ ನಮ್ಮ ಅಂಗ್ರೇಜಿ ಮಾಸ್ತರ ಒಂದು ಮುತ್ತಾ ಕೊಟ್ರು ಅಂತಾ ಮಾತ್ರ ಹೇಳಿ ಹೊಂಟಿದ್ದನ್ರಿ. ಇದ ಇಷ್ಟು ಭಯಂಕರ ಆಗ್ತದಂತ ನಮಗ ಆಗ ಅನಿಸ್ಲಿಲ್ರೀ, (ಆಗ ಕುಳಿತ ಎಲ್ಲರ ಮುಖದಲ್ಲೂ ಮಂದಸ್ಮಿತ ಕಾಣಲು ಪ್ರಾರಂಭವಾಗುವುದು.)